ಸಂಪುಟ: 05 ಸಂಚಿಕೆ: 319 ಪುಟಗಳು: 08 ಭಾನುವಾರ 01 ಫೆಬ್ರವರಿ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಜೀವ ನಮ್ಮ ಮಾತನ್ನು ಕೇಳುವುದಿಲ್ಲ, ಯಾವಾಗ ಬೇಕಾದರೂ ಹೋಗಬಹುದು. ಜೀವನ ನಮ್ಮ ಮಾತನ್ನು ಕೇಳುತ್ತದೆ, ಹೇಗೆ ಬೇಕಾದರೂ ರೂಪಿಸಿಕೊಳ್ಳಬಹುದು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಅಪೆಕ್ಸ್, ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಜಿದ್ದಿಗೆ ಬಿದ್ದ ಡಿಕೆಶಿ

**ಸಿಎಂ ಬಣಕ್ಕೆ ಠಕ್ಕರ್**

• ಉದಯವಾಹಿನಿ, ಬೆಂಗಳೂರು

ಅಪೆಕ್ಸ್ ಹಾಗೂ ಕೆ ಎಂ ಎಫ್ ಅಧ್ಯಕ್ಷ ಸ್ಥಾನವನ್ನು ತನ್ನವರಿಗೆ ಕೊಡಿಸಲು ಡಿಸಿಎಂ ಡಿಕೆ ಶಿವಕುಮಾರ್ ಇನ್ನಿಲ್ಲದ ಪ್ರಯತ್ನ ನಡೆಸುತ್ತಿದ್ದಾರೆ.

ಈ ಎರಡು ಸಂಸ್ಥೆಗಳು ರಾಜಕೀಯ ನೆಟ್‌ವರ್ಕ್‌ನಲ್ಲಿ ಪ್ರಮುಖ ಪಾತ್ರ ನಿರ್ವಹಣೆ ಮಾಡುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಆಪ್ತರನ್ನೇ ಅಧ್ಯಕ್ಷರನ್ನಾಗಿ ಮಾಡುವುದು ಡಿಕೆಶಿ ಲೆಕ್ಕಾಚಾರ. ಈ ಮೂಲಕ ಭವಿಷ್ಯದ ರಾಜಕೀಯ ವಿಸ್ತರಣೆಗೆ ತಳಮಟ್ಟದ ಹಿಡಿತ ಸಾಧಿಸಲು ಡಿಕೆಶಿ ಪ್ರಯತ್ನ ನಡೆಸುತ್ತಿದ್ದಾರೆ.

ಇದಷ್ಟೇ ಅಲ್ಲ, ಈ ಎರಡು ಸ್ಥಾನಗಳಿಗೆ ಸಿಎಂ ಸಿದ್ದರಾಮಯ್ಯ ಅವರ ಜೊತೆಗೆ ಗುರುತಿಸಿಕೊಂಡವರು ಪ್ರಯತ್ನ ನಡೆಸುತ್ತಿದ್ದು, ಇದೇ ಸಂದರ್ಭದಲ್ಲಿ ಡಿಕೆ ಶಿವಕುಮಾರ್ ಕೆಎಂಎಫ್ ಹಾಗೂ ಅಪೆಕ್ಸ್ ಬ್ಯಾಂಕ್‌ನಲ್ಲಿ ನಮ್ಮ ಬಣದ ಹಿಡಿತ ಗಟ್ಟಿಗೊಳಿಸಲು ನಿರ್ಧಾರ ಮಾಡಿದ್ದಾರೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಕೆ ಎನ್ ರಾಜಣ್ಣ ಸಾಕಷ್ಟು ಪ್ರಯತ್ನ ನಡೆಸುತ್ತಿದ್ದಾರೆ. ಗುರುವಾರ ಚುನಾವಣೆ ನಡೆಯುವ ಸಾಧ್ಯತೆ ಇತ್ತು. ಆದರೆ ದಿಢೀರ್ ಆಗಿ ತಾಂತ್ರಿಕ ಕಾರಣ ನೀಡಿ ಮುಂದೂಡಲಾಗಿದೆ. ಈ ನಡೆಯ ಹಿಂದೆ ತಾಂತ್ರಿಕ ಕಾರಣ ಅಲ್ಲ, ಬದಲಾಗಿ ಹೈಕಮಾಂಡ್ ಮೂಲಕ ಸೂಚನೆ ಪಡೆದುಕೊಂಡು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿಬರುತ್ತಿವೆ.

**ಡಿಕೆಶಿ ಪ್ಲ್ಯಾನ್ ಏನು:** ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಕೆಎನ್ ರಾಜಣ್ಣ ಆಕಾಂಕ್ಷಿಯಾಗಿದ್ದಾರೆ. ಸದ್ಯ ಸಹಕಾರಿ ಇಲಾಖೆ ಸಿದ್ದರಾಮಯ್ಯ ಅವರ ಅಧೀನದಲ್ಲಿದೆ.

ಆದರೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಎಸ್ ರವಿ ಅವರನ್ನು ಅಭ್ಯರ್ಥಿಯನ್ನಾಗಿಸುವುದು ಡಿಕೆ ಶಿವಕುಮಾರ್ ಲೆಕ್ಕಾಚಾರವಾಗಿದೆ. ಈ ಮೂಲಕ ರಾಜಣ್ಣ ಅವರಿಗೆ ಠಕ್ಕರ್ ನೀಡುವುದು ಒಂದು ಉದ್ದೇಶವಾಗಿದೆ. ಜೊತೆಗೆ ಸಹಕಾರಿ ಕ್ಷೇತ್ರದಲ್ಲಿ ಹಿಡಿತ ಸಾಧಿಸುವುದು ಬಹುಮುಖ್ಯವಾಗಿದೆ.



ತಮ್ಮ ರಾಜಕೀಯ ದೂರದೃಷ್ಟಿಯಿಂದ ಡಿಕೆ ಶಿವಕುಮಾರ್ ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದಾರೆ ಎನ್ನಲಾಗುತ್ತಿದೆ.

**ಕೆಎಂಎಫ್‌ಗೂ ಕಣ್ಣು:** ಕೇವಲ ಅಪೆಕ್ಸ್ ಬ್ಯಾಂಕ್ ಮಾತ್ರವಲ್ಲ, ಕೆ ಎಂ ಎಫ್ ಮೇಲೂ ಡಿಕೆ ಶಿವಕುಮಾರ್ ಕಣ್ಣಿಟ್ಟಿದ್ದಾರೆ. ಕೆಎಂಎಫ್ ಅಧ್ಯಕ್ಷ ಸ್ಥಾನಕ್ಕೆ ಮಾಲೂರು ನಂಜೇಗೌಡ ಪ್ರಬಲ ಆಕಾಂಕ್ಷಿ. ಆದರೆ ತಮ್ಮ ಸಹೋದರ ಡಿಕೆ ಸುರೇಶ್ ಅವರನ್ನು ಕೆ ಎಂ ಎಫ್ ಅಧ್ಯಕ್ಷರನ್ನಾಗಿ ಮಾಡುವುದು ಡಿಕೆಶಿ ಲೆಕ್ಕಾಚಾರ.

ಕೆಎಂಎಫ್ ಹಿಡಿತ ಡಿಕೆ ಶಿವಕುಮಾರ್‌ಗೆ ರಾಜಕೀಯವಾಗಿಯೂ ಅನುಕೂಲ. ಈ ಹಿಂದೆ ಸುದೀರ್ಘ ಅವಧಿಗೆ ಎಚ್ ಡಿ ರೇವಣ್ಣ ಅವರು ಕೆಎಂಎಫ್ ಹಿಡಿತ ಹೊಂದಿದ್ದರು.

ಹಳೆ ಮೈಸೂರು ಭಾಗದಲ್ಲಿ ಇದರಿಂದ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣವಾಗಲು ಸಾಧ್ಯವಾಗುತ್ತೆ.

ಆದರೆ ಸದ್ಯಕ್ಕೆ ಅಪೆಕ್ಸ್ ಬ್ಯಾಂಕ್ ಚುನಾವಣಾ ಮುಂದೂಡಲಾಗಿದೆ. ಕೆಎಂಎಫ್ ಅಧ್ಯಕ್ಷ ಸ್ಥಾನದ ಬಗ್ಗೆ ಇನ್ನೂ ಗೊಂದಲ ಇದೆ. ಹೀಗಾಗಿ ಹೈಕಮಾಂಡ್ ಮೂಲಕ ಈ ಎರಡು ಸ್ಥಾನವನ್ನು ಪಡೆದುಕೊಳ್ಳಲು ಡಿಕೆ ಶಿವಕುಮಾರ್ ಶತಾಯಗತಾಯ ಪ್ರಯತ್ನ ನಡೆಸುವುದಂತೂ ಪಕ್ಕಾ. ಆದರೆ ರಾಜಣ್ಣ ಅವರು ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಆದ ಪ್ರಭಾವ, ಅನುಭವ ಹೊಂದಿದ್ದಾರೆ. ಮಂತ್ರಿ ಸ್ಥಾನ ಕಳೆದುಕೊಂಡಿರುವ ಅವರು, ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಸ್ಥಾನವನ್ನು ಸುಲಭದಲ್ಲಿ ಕೈಬಿಡುವ ಸಾಧ್ಯತೆ ಇಲ್ಲ.

## ಹುಮನಾಬಾದ್ ನಿಗೂಢ ಸ್ಫೋಟ ಉನ್ನತ ಮಟ್ಟದ ತನಿಖೆಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

ಹಮ್ನಾಬಾದ್‌ನಲ್ಲಿ ನಡೆದ ನಿಗೂಢ ಸ್ಫೋಟದ ಪ್ರಕರಣದ ಹಿನ್ನೆಲೆಯಲ್ಲಿ ಉನ್ನತ ಮಟ್ಟದ ತನಿಖೆಗೆ ನೀಡಲಾಗುವುದು ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ. ಅಲ್ಲದೆ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆಯನ್ನು ಅವರು ಇದೇ ಸಂದರ್ಭದಲ್ಲಿ ನೀಡಿದರು. ''ಸರ್ಕಾರ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಯಾರು ಇದರಲ್ಲಿ ಭಾಗಿಯಾಗಿದ್ದಾರೆ ಯಾವ ಕಾರಣಕ್ಕಾಗಿ ಇದು ಆಗಿದೆ, ಇದರ ಮೂಲ ಏನು ಇವೆಲ್ಲವನ್ನ ಉನ್ನತ ಮಟ್ಟದ ತನಿಖೆಗೆ ಆದೇಶಿಸಿ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಕಠಿಣ ಶಿಕ್ಷೆ ಕೊಡುತ್ತೇವೆ'' ಎಂದರು. ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಮೂಳ್ಕೆರೆಯಲ್ಲಿ ನಡೆದ ಘಟನೆ ಇದು. ಸ್ಫೋಟಗೊಂಡು ಆರು ಜನ ಮಕ್ಕಳು ಗಾಯಗೊಂಡಿದ್ದಾರೆ. ಮಾಹಿತಿ ಬಂದ ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆ. ಪೊಲೀಸರು ಅಧಿಕಾರಿಗಳು ಸ್ಥಳದಲ್ಲಿದ್ದಾರೆ, ತನಿಖೆ ಮಾಡುತ್ತಿದ್ದಾರೆ. ಗಾಯಗೊಂಡ ಮಕ್ಕಳಿಗೆ ಚಿಕಿತ್ಸೆ ಕೊಡಲಾಗುತ್ತಿದೆ ಎಂದರು.

## ಕೃಷಿ ಸಿಂಚಾಯಿ ಮುಂದುವರಿದರಷ್ಟೇ ಭದ್ರಾ ಮೇಲ್ದಂಡೆಗೆ ಅನುದಾನ

• ಉದಯವಾಹಿನಿ, ನವದೆಹಲಿ

ಕೇಂದ್ರ ಸರ್ಕಾರವು 2016ರಲ್ಲಿ ಜಾರಿಗೊಳಿಸಿರುವ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಅವಧಿಯು ಈ ವರ್ಷದ ಮಾರ್ಚ್‌ನಲ್ಲಿ ಮುಗಿಯಲಿದೆ. ಈ ಯೋಜನೆಯನ್ನು ಮುಂದುವರಿಸಲು ಕೇಂದ್ರ ಸರ್ಕಾರ ಮನಸ್ಸು ಮಾಡಿದರಷ್ಟೇ ಭದ್ರಾ ಮೇಲ್ದಂಡೆ ಯೋಜನೆಗೆ 5,300 ಕೋಟಿ ಅನುದಾನವು ಕರ್ನಾಟಕಕ್ಕೆ ಲಭ್ಯವಾಗಲಿದೆ. ಈ ಯೋಜನೆಗೆ 5,300 ಕೋಟಿ ಅನುದಾನ ನೀಡುವುದಾಗಿ ಕೇಂದ್ರ ಸರ್ಕಾರವು 2023ರ ಬಜೆಟ್‌ನಲ್ಲಿ ಪ್ರಕಟಿಸಿತ್ತು.

'ಯೋಜನೆಯನ್ನು ಪ್ರಸ್ತುತ ಕೇಂದ್ರ ಸರ್ಕಾರದ ಯಾವುದೇ ಯೋಜನೆಯಡಿ ಸೇರಿಸಿಲ್ಲ. ಹೀಗಾಗಿ, ಯೋಜನೆಗೆ ಅನುದಾನ ಮಂಜೂರು ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಕೇಂದ್ರ ಜಲಶಕ್ತಿ ಸಚಿವರು ಈ ಹಿಂದೆ ಸ್ಪಷ್ಟಪಡಿಸಿದ್ದರು.

## ಆಶ್ವಾಸನೆ ಈಡೇರಿಸಲು ಪಾಲಿಕೆಗಳ ನೌಕರರ ಮನವಿ

• ಉದಯವಾಹಿನಿ, ಬೆಂಗಳೂರು

'ರಾಜ್ಯದ 10 ಮಹಾನಗರ ಪಾಲಿಕೆಗಳ ನೌಕರರ ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸುವುದಾಗಿ ನೀಡಿದ್ದ ಆಶ್ವಾಸನೆಯನ್ನು ಕೂಡಲೇ ಕಾರ್ಯಗತಗೊಳಿಸಬೇಕು' ಎಂದು ರಾಜ್ಯ ಮಹಾನಗರ ಪಾಲಿಕೆಗಳ ನೌಕರರ ಸಂಘ ಮನವಿ ಮಾಡಿಕೊಂಡಿದೆ.

'ನಗರಾಭಿವೃದ್ಧಿ ಇಲಾಖೆ ಸಚಿವ ಬೈರತಿ ಸುರೇಶ್ ಅವರು, ಮುಷ್ಕರ ನಿರತ ಮಹಾನಗರ ಪಾಲಿಕೆಗಳ ನೌಕರರನ್ನು ಕಳೆದ ಜುಲೈ 15ರಂದು ಭೇಟಿ ಮಾಡಿ, ಇಲಾಖೆಯ ಕಾರ್ಯದರ್ಶಿಯವರೊಂದಿಗೆ ಸಂಧಾನ ಸಭೆ ನಡೆಸಿದ್ದರು. ಎಲ್ಲಾ ಬೇಡಿಕೆಗಳನ್ನು ಮೂರು ತಿಂಗಳಲ್ಲಿ ಈಡೇರಿಸುವ ಭರವಸೆ ನೀಡಿದ್ದರು. ಆರು ತಿಂಗಳಾದರೂ ಇನ್ನೂ ಯಾವುದೇ ಕ್ರಮವಾಗಿಲ್ಲ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು. ಸಾಮಾನ್ಯ ನೇಮಕಾತಿ ನಿಯಮಗಳಿಗೆ ತಿದ್ದುಪಡಿ, ನೌಕರರನ್ನು ಪೂರ್ಣ ಪ್ರಮಾಣದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸುವುದು. ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ), ಸಮೂಹ ವಿಮೆ ಯೋಜನೆ (ಜಿಐಎಸ್) ಮತ್ತು ಸಮೂಹ ಭವಿಷ್ಯ ನಿಧಿ (ಜಿಪಿಎಫ್) ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿ ಮಹಾನಗರ ಪಾಲಿಕೆಗಳ ನೌಕರರು 2025ರ ಜುಲೈ 8ರಿಂದ ಮುಷ್ಕರವನ್ನು ನಡೆಸಿದ್ದರು.



# ರಾಯ್ ಸಾವಿನ ಸುತ್ತ ಅನುಮಾನದ ಹುತ್ತ

**ಐಟಿ ದಾಳಿಗೆ ಹೆದರಿ ಆತ್ಮಹತ್ಯೆ**

ನೂರಾರು ಕೋಟಿ ಒಡೆಯ ಕಾನ್ಫಿಡೆಂಟ್ ಗ್ರೂಪ್ ಮುಖ್ಯಸ್ಥ ಸಿ.ಜೆ ರಾಯ್ ಆತ್ಮಹತ್ಯೆ ಮಾಡಿಕೊಂಡು ಸಾವನ್ನಪ್ಪಿದ್ದಾರೆ. ಸಿಜೆ ರಾಯ್ ಮೊಬೈಲ್, ಡೈರಿ ವಶಕ್ಕೆ ಪಡೆದಿರೋ ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.ಗನ್‌ನಲ್ಲಿ ಶೂಟ್ ಮಾಡಿಕೊಂಡು


**ಕುಟುಂಬಸ್ಥರ ವಿಚಾರಣೆ, ಹೇಳಿಕೆ ದಾಖಲು**

ಆತ್ಮಹತ್ಯೆಗೆ ಶರಣಾದ ಉದ್ಯಮಿ ಸಿಜೆ ರಾಯ್ ಸಾವು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಈ ನಡುವೆ ಉದ್ಯಮಿ ಸಿಜೆ ರಾಯ್ ಆತ್ಮಹತ್ಯೆಗೂ ಮುನ್ನ ಯಾರ ಜೊತೆಯಾದರೂ ಮಾತನಾಡಿದ್ರಾ ಅಥವಾ ಯಾರಿಗಾದರೂ ಮೆಸೇಜ್ ಕಳುಹಿಸಿದ್ರಾ ಎಂದು ಪೊಲೀಸರು ಪರಿಶೀಲನೆ ನಡೆಸುತ್ತಿದ್ದು, ಮೊಬೈಲ್‌ಗಳನ್ನು ಸಿಐಟಿ ಸೈಬರ್ ಸೆಲ್‌ಗೆ ರಿಕವರಿಗಾಗಿ ಕಳುಹಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ತಾಯಿ ಜೊತೆ ಮಾತನಾಡಬೇಕೆಂದು ರಾಯ್ ತಿಳಿಸಿದ್ದರು. ಜೊತೆಗೆ ಗನ್‌ಮ್ಯಾನ್ ಬಳಿ ಯಾರಿಗೂ ಒಳಗೆ ಬಿಡದಂತೆ ಹೇಳಿದ್ದರು. ಹಾಗಾದರೆ ಆತ್ಮಹತ್ಯೆಗೂ ಮುನ್ನ ನಿಜಕ್ಕೂ ತಾಯಿ ಜೊತೆಗೆ ಮಾತನಾಡಿದ್ರಾ ಅಥವಾ ಬೇರೆ ಇನ್ಯಾರ ಜೊತೆಯಾದ್ರೂ ಮಾತನಾಡಿದ್ರಾ ಅಥವಾ ಮೆಸೇಜ್ ಕಳುಹಿಸಿದ್ದಾರಾ ಎಂಬ ಕೆಲ ಅನುಮಾನಗಳು ವ್ಯಕ್ತವಾಗಿದ್ದು, ಐಫೋನ್ ಮತ್ತು ಆ್ಯಂಡ್ರಾಯ್ಡ್ ಫೋನ್‌ಗಳನ್ನು ಪೊಲೀಸರು ವಶಕ್ಕೆ ಪಡೆದು, ಸಿಐಡಿಗೆ ರವಾನಿಸಿದ್ದಾರೆ. ಎರಡು ಫೋನ್‌ಗೆ ಪಾಸ್‌ವಾರ್ಡ್ ಇರುವ ಕಾರಣ ಕೋರ್ಟ್ ಅನುಮತಿ ಪಡೆದು ಎಫ್ ಎಸ್‌ಎಲ್‌ಗೆ ರವಾನೆ ಮಾಡಬೇಕು.

**ರಾಯ್ ಪುತ್ರ, ಸಹೋದರರ ವಿಚಾರಣೆ ನಡೆಸಿದ ಪೊಲೀಸರು**

**ಫೋನ್‌ಗಳು ಪೊಲೀಸರ ವಶಕ್ಕೆ**

**ಬಿಗ್‌ಬಾಸ್ ಹನುಮಂತ ಭಾವುಕ**



ರಾಯ್ ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಹನುಮಂತ ತಮ್ಮ ಇನ್‌ಸ್ಟಾಗ್ರಾಂ ಸ್ಟೋರಿಯಲ್ಲಿ 'ನನ್ನ ಬದುಕಿಗೆ ದಾರಿ ದೀಪವಾಗಿದ್ದವರು ನೀವು, ನಿಮ್ಮ ಈ ಋಣವನ್ನು ಯಾವತ್ತೂ ಮರೆಯೋಕೆ ಸಾಧ್ಯನೇ ಇಲ್ಲ ಸರ್' ಎಂದು ಭಾವುಕರಾಗಿ ಬರೆದುಕೊಂಡಿದ್ದಾರೆ. 'ತುಂಬಾ ದುಃಖಕರ ಸಂಗತಿ. ಅಂದು ಸರಿಗಮಪ ಸೀಸನ್ 15ರಲ್ಲಿ ನಾನು ರನ್ನರ್ ಅಪ್ ಆಗಿದ್ದಾಗ ನನಗೆ ಹಣ ನೀಡಿ ನನ್ನ ಬದುಕಿಗೆ ದಾರಿ ದೀಪವಾಗಿದ್ದವರು ನೀವು. ಅಲ್ಲಿಂದ ಹಿಡಿದು ಬಿಗ್‌ಬಾಸ್ ಸೀಸನ್ 11ರಲ್ಲೂ ಕೂಡ ವಿಜೇತನಾಗಿದ್ದಾಗ ನನಗೆ ಪ್ರೀತಿಯಿಂದ ಹಣವನ್ನು ಕೊಡುವುದರ ಮೂಲಕ ಗೆಲುವನ್ನು ಸಂಭ್ರಮಿಸಿದವರು ನೀವು. ನಿಮ್ಮ ಈ ಋಣವನ್ನು ಯಾವತ್ತೂ ಮರೆಯೋಕೆ ಸಾಧ್ಯವಿಲ್ಲ ಸರ್. ನಿಮ್ಮ ಅಗಲಿಕೆ ಸುದ್ದಿ ಕೇಳಿ ಮನಸ್ಸು ಭಾರವಾಗಿದೆ.

**ರಾಯ್ ದೇಹದಿಂದ ಗುಂಡು ಹೊರ ತೆಗೆದ ವೈದ್ಯರು**

1. ಐಟಿ ದಾಳಿ ವೇಳೆಯೇ ಎದೆಗೆ ಗುಂಡು ಹಾರಿಸಿಕೊಂಡು ಉದ್ಯಮಿ ಸಿ.ಜೆ. ರಾಯ್ ಆತ್ಮಹತ್ಯೆ
2. ಘಟನೆ ಬಗ್ಗೆ ಬೆಂಗಳೂರು ಪೊಲೀಸರಿಂದ ತನಿಖೆ ನಡೆಸಲಾಗುತ್ತದೆ ಎಂದ ಸಚಿವ ಪರಮೇಶ್ವರ್
3. ಕೇಂದ್ರ ಸರ್ಕಾರಕ್ಕೆ ಸಹಕರಿಸದ ಉದ್ಯಮಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ ಎಂದ ಪ್ರಿಯಾಂಕ್ ಖರ್ಗೆ

**ಪ್ರದೀಪ್ ಈಶ್ವರ್ ಅನುಮಾನ**



ಸಿಜೆ ರಾಯ್ ಅವರೇ ಗುಂಡು ಹೊಡೆದುಕೊಂಡ್ರಾ ಅಥವಾ ಯಾರಾದ್ರು ಗುಂಡು ಹೊಡೆದ್ರಾ ಎಂದು ರಾಯ್ ಆತ್ಮಹತ್ಯೆ ಬಗ್ಗೆ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಕನಕಪುರದಲ್ಲಿ ಮಾತನಾಡಿದ ಅವರು, ಘಟನೆ ಆದ ಸ್ಥಳದಲ್ಲಿ ಸಿಸಿಟಿವಿ ಇಲ್ಲ, ಇದ್ದವರು ಐಟಿಯವರು ಮಾತ್ರ. ಒಳಗಡೆ ಏನಾಗಿದ್ಯೋ ಏನೋ ಗೊತ್ತಿಲ್ಲ. ನನಗಿರುವ ಪ್ರಾಥಮಿಕ ಮಾಹಿತಿ ಪ್ರಕಾರ ಬಿಜೆಪಿಯವರು ಚುನಾವಣೆಗೆ ನೂರಾರು ಕೋಟಿ ದುಡ್ಡು ಕೇಳಿದ್ದಾರೆ. ಅವರು ಹಣ ಕೊಡದಿದ್ದಕ್ಕೆ ಅವರನ್ನ ಟಾರ್ಗೆಟ್ ಮಾಡಿದ್ದಾರೆ. ಇಂತಹ ಭ್ರಷ್ಟ ಬಿಜೆಪಿಯಿಂದ ನಮ್ಮ ದೇಶ ಅಭಿವೃದ್ಧಿ ಆಗಲ್ಲ. ಅಶೋಕಣ್ಣ, ಸುನೀಲಣ್ಣ, ಯತ್ನಾಳ್ ಅವ್ರು ಮೈಸೂರಿನ ಒಂದು ಕೋತಿ ಎಲ್ಲದಕ್ಕೂ ಬಾಯಿ ಬಡಿದುಕೊಳ್ತಾರೆ. ಇದರ ಬಗ್ಗೆ ಯಾಕೆ ಯಾರೂ ಬಾಯಿ ಬಿಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.



•ಉದಯವಾಹಿನಿ, ಬೆಂಗಳೂರು

ಕಾನ್ಫಿಡೆಂಟ್ ಗ್ರೂಪ್ ಸಂಸ್ಥಾಪಕ ಡಾ.ಸಿ.ಜೆ.ರಾಯ್ ಅವರ ಆತ್ಮಹತ್ಯೆ ಪ್ರಕರಣವನ್ನು ಹಲವು ಆಯಾಮಗಳಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆತ್ಮಹತ್ಯೆಯ ಹೊರತಾಗಿಯೂ ಇವರ ಸಾವಿಗೆ ಯಾವೆಲ್ಲಾ ಅಂಶಗಳು ಕಾರಣವಿರಬಹುದು ಎಂಬ ಜಾಡು ಪತ್ತೆ ಹಚ್ಚಲು ಮುಂದಾಗಿದ್ದಾರೆ. ಸಹೋದರ ಬಾಬು ಅವರು ಐಟಿ ಒತ್ತಡದಿಂದಲೇ ರಾಯ್ ಅವರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಆರೋಪಿಸಿದ್ದಾರೆ. ಈ ಹಿನ್ನೆಲೆ ಐಟಿ ಅಧಿಕಾರಿಗಳು ಯಾವ ವಿಚಾರವಾಗಿ ದಾಳಿ ಮಾಡಿದ್ದರು ವಿಚಾರಣೆ ವೇಳೆ ರಾಯ್ ಅವರಿಗೆ ಒತ್ತಡ ಹಾಕಿದ್ದರಾ ಈ ಒತ್ತಡಕ್ಕೆ ಮಣಿದು ಗುಂಡು ಹಾರಿಸಿಕೊಂಡು ರಾಯ್ ಆತ್ಮಹತ್ಯೆ ಮಾಡಿಕೊಂಡಿದ್ದಾ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಪೊಲೀಸರು ಮುಂದಾಗಿದ್ದಾರೆ.

ಮೂಲಗಳ ಪ್ರಕಾರ ಪೊಲೀಸರು ಬಿಎನ್‌ಎಸ್‌ಎಸ್ ಕಾಯ್ದೆಯ ಸೆಕ್ಷನ್ 194/3(4) ಅಡಿಯಲ್ಲಿ ಬರುವ ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ರಾಯ್ ಒಡೆತನದ ಗ್ರೂಪ್ ಮೇಲೆ ಕಳೆದ ಡಿಸೆಂಬರ್‌ನಲ್ಲಿ ಆದಾಯ ತೆರಿಗೆ (ಐಟಿ) ದಾಳಿ ನಡೆದಿತ್ತು. ದಾಳಿಯ ವೇಳೆ ಸಿ.ಜೆ.ರಾಯ್ ಅವರ ಬಳಿ ಪರವಾನಗಿ ಪಡೆದ ಪಿಸ್ತೂಲ್ ಇದ್ದರೂ ಐಟಿ ಅಧಿಕಾರಿಗಳು ಅದನ್ನು ವಶಪಡಿಸಿಕೊಂಡಿರಲಿಲ್ಲ. ಕಾನೂನು ಪ್ರಕಾರ ದಾಳಿ ವೇಳೆ ಪರವಾನಗಿ ಪಡೆದು ಶಸ್ತ್ರಾಸ್ತ್ರಗಳನ್ನು ತಾತ್ಕಾಲಿಕವಾಗಿ ವಶಪಡಿಸಿಕೊಂಡು, ಸ್ಥಳೀಯ ಪೊಲೀಸರ ಸುಪರ್ದಿಗೆ ಒಪ್ಪಿಸಬೇಕು. ಆದರೆ, ಕಳೆದ ಎರಡೂವರೆ ತಿಂಗಳ ಅವಧಿಯಲ್ಲಿ ಸಿ.ಜೆ.ರಾಯ್ ಮೇಲೆ ಎರಡು ಬಾರಿ ದಾಳಿ ನಡೆದಿದ್ದರೂ, ಪಿಸ್ತೂಲ್ ವಶಕ್ಕೆ ಪಡೆದಿರಲಿಲ್ಲ. ಐಟಿ ಅಧಿಕಾರಿಗಳಿಗೆ ಸಿ.ಜೆ.ರಾಯ್ ಬಳಿ ಗನ್ ಲೈಸೆನ್ಸ್ ಇತ್ತು ಎಂಬ ಮಾಹಿತಿ ಇರಲಿಲ್ಲವೇ ಎಂಬ ಪ್ರಶ್ನೆ ಮೂಡಿದೆ.

**ಎದೆಗೆ ಹೊಕ್ಕಿದ್ದ ಗುಂಡು ಹೊರ ಹೋಗಿಲ್ಲ:** ಬೌರಿಂಗ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಮುಕ್ತಾಯವಾಗಿದ್ದು, ಕುಟುಂಬಸ್ಥರ ನಿರ್ಧಾರದಂತೆ ನಾಳೆಗೆ ಮೃತದೇಹವನ್ನ ಹಸ್ತಾಂತರಿಲಾಗುತ್ತದೆ. ಈ ಬಗ್ಗೆ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಅರವಿಂದ್ ಎಂ.ಎನ್ ಮಾಹಿತಿ ನೀಡಿದ್ದಾರೆ.ಎದೆ ಭಾಗಕ್ಕೆ ಹೊಕ್ಕಿದ್ದ ಗುಂಡು ತೆಗೆಯಲಾಗಿದೆ. ಹೃದಯ, ಶ್ವಾಸಕೋಶ, ಹೊಟ್ಟೆಯ ಭಾಗಕ್ಕೂ ಗುಂಡು ತಗುಲಿದೆ. 6.35 ಎಂಎಂ ಬುಲೆಟ್ ಇದಾಗಿದೆ. ಬೆನ್ನಿನ ರಿಬ್ಸ್ ವರೆಗೆ ಬುಲೆಟ್ ಹೋಗಿದ್ದು ಹೊರಗೆ ಬಂದಿಲ್ಲ. ಶ್ವಾಸಕೋಶ ಲೋವರ್ ಲೋಪ್ ಡ್ಯಾಮೇಜ್ ಆಗಿದೆ. ಎದೆ ಭಾಗ ಬಿಟ್ಟರೆ ದೇಹದ ಬೇರೆ ಯಾವ ಭಾಗಕ್ಕೂ ಡ್ಯಾಮೇಜ್ ಆಗಿಲ್ಲ. ಪಿಸ್ತೂಲ್ ಹಿಡಿದಿದ್ದ ಫಿಂಗರ್ ಟೆಸ್ಟ್ ಮಾಡಲಾಗಿದೆ. ಗನ್ ಪೌಡರ್ ಇದೆಯಾ ಅಂತಾ ಪರೀಕ್ಷೆಗೆ ಕಳುಹಿಸಲಾಗಿದೆ. ದೇಹದಿಂದ ರಕ್ತ ಹಾಗೂ ಬೆರಳಿನ ಸ್ಯಾಂಪಲ್ ತೆಗೆದುಕೊಂಡು ಎಫ್‌ಎಸ್‌ಎಲ್ ಗೆ ಕಳುಹಿಸಲಾಗಿದೆ ಎಂದರು.

**ಇಂದು ಅಂತ್ಯಕ್ರಿಯೆ:** ಡಾ.ಸಿ.ಜೆ. ರಾಯ್ ಅವರ ಅಂತ್ಯಕ್ರಿಯೆ ಇಂದು ಮಾಡಲು ಕುಟುಂಬಸ್ಥರು ನಿರ್ಧರಿಸಿದ್ದಾರೆ. ತಮ್ಮ ಆಪ್ತರ ಬಳಿ ಈ ಹಿಂದೆ ವ್ಯಕ್ತಪಡಿಸಿದ್ದ ಇಚ್ಛೆಯಂತೆ, ಕೋರಮಂಗಲದಲ್ಲಿರುವ ವೈಟ್ ಹೌಸ್‌ನಲ್ಲಿ ಮೃತದೇಹವನ್ನ ಬೆಳಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ಅಂತಿಮ ದರ್ಶನಕ್ಕೆ ಇಡಲಾಗುತ್ತದೆ. ಬಳಿಕ ಪ್ರಾರ್ಥಿವ ಶರೀರವನ್ನು ಹೊಸೂರು ರಸ್ತೆಯಲ್ಲಿರುವ ಸೇಂಟ್ ಜಾನ್ಸ್ ಚರ್ಚ್‌ಗೆ ಕೊಂಡೊಯ್ಯಲಾಗುತ್ತದೆ. ಬನ್ನೇರುಘಟ್ಟದ ಕಾಸಾಗ್ರ್ಯಾಂಡ್‌ನಲ್ಲಿ ರಾಯ್ ಅವರ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಸ್ಥರು ತಿಳಿಸಿದ್ದಾರೆ.

**ಸಹೋದರ ಬಾಬು ಹಾಗೂ ರಾಯ್ ಪುತ್ರನ ವಿಚಾರಣೆ:** ಆತ್ಮಹತ್ಯೆ ಪ್ರಕರಣ ಸಂಬಂಧ ಸಹೋದರ ಬಾಬು ಹಾಗೂ ಮೃತ ರಾಯ್ ಅವರ ಮಗನನ್ನು ಠಾಣೆಗೆ ಕರೆಯಿಸಿ ವಿಚಾರಣೆ ನಡೆಸಲಾಗುತ್ತಿದೆ. ಜಂಟಿ ಪೊಲೀಸ್ ಆಯುಕ್ತ ವಂಶಿಕೃಷ್ಣ ಹಾಗೂ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ನೇತೃತ್ವದಲ್ಲಿ ಅಶೋಕನಗರ ಪೊಲೀಸರು ಹೇಳಿಕೆ ದಾಖಲಿಸಿಕೊಳ್ಳುತ್ತಿದ್ದಾರೆ.ರಾಯ್ ಅವರ ಆತ್ಮಹತ್ಯೆಗೆ ಐಟಿ ಅಧಿಕಾರಿಗಳ ಒತ್ತಡವೇ ಕಾರಣ ಎಂದು ಸಹೋದರ ಬಾಬು ಆರೋಪಿಸಿದ್ದಾರೆ. ಸಾವಿಗೂ ಮುನ್ನ ಐಟಿ ಅಧಿಕಾರಿಗಳ ಒತ್ತಡ ವಿಚಾರ ಸಂಬಂಧ ಏನಾದರೂ ಹೇಳಿಕೊಂಡಿದ್ದರಾ ಹಣಕಾಸು ಹಾಗೂ ಆಸ್ತಿ ವಿಚಾರವಾಗಿ ವ್ಯಾಜ್ಯವಿತ್ತಾ.. ಎಂಬುದರ ಬಗ್ಗೆ ತನಿಖಾಧಿಕಾರಿಗಳು ಪ್ರಶ್ನಿಸಿದ್ದಾರೆ ಎಂದು ತಿಳಿದು ಬಂದಿದೆ.

## ಸಾಕ್ಷಾತ್ ದೇವತೆಗಳ ಲೋಕವನ್ನೇ ಸೃಷ್ಟಿಸಿದ ಶ್ರೀರಂಗನಹಳ್ಳಿ ಶನೇಶ್ವರ ಸ್ವಾಮಿಯ ಪುಣ್ಯಕ್ಷೇತ್ರ

● 22ನೇ ವರ್ಷದ ಜಾತ್ರಾ ಮಹೋತ್ಸವ ಶ್ರೀ ಆಂಜನೇಯ ಸ್ವಾಮಿ ಶ್ರೀ ಆದಿಶಕ್ತಿ ದುರ್ಗಾಪರಮೇಶ್ವರಿ ದೇವಿ ಹಾಗೂ ಶ್ರೀ ಆದಿಪರಾಶಕ್ತಿ ಕಾಳಿಕಾದೇವಿಯವರ ಜಾತ್ರೆ

• ಉದಯವಾಹಿನಿ ತಿಪಟೂರು

28ರಿಂದ ಬುಧವಾರದಿಂದ 31 ನೇ ತಾರೀಖಿನ ಶನಿವಾರದ ವರೆಗೂ 22ನೇ ವರ್ಷದ ಜಾತ್ರಾ ಮಹೋತ್ಸವ ಶ್ರೀ ಆಂಜನೇಯ ಸ್ವಾಮಿ ಶ್ರೀ ಆದಿಶಕ್ತಿ ದುರ್ಗಾಪರಮೇಶ್ವರಿ ದೇವಿಯ ಹಾಗೂ ಶ್ರೀ ಆದಿಪರಾಶಕ್ತಿ ಕಾಳಿಕಾದೇವಿಯವರ ಜಾತ್ರೆಗೆ ನಾಡಿನಲ್ಲೆಡೆಯಿಂದ ಆಗಮಿಸಿದ್ದ ಸಹಸ್ರಾರು ಭಕ್ತಾದಿಗಳು ಹಾಗೂ ತುರುವೇಕೆರೆ ತಿಪಟೂರು ತಾಲ್ಲೂಕಿನ ಹಲವಾರು ಗ್ರಾಮಗಳ ಶಕ್ತಿ ದೇವತೆಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಜಾತ್ರಾ ಮಹೋತ್ಸವ ನಡೆಯಿತು.

ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಶ್ರೀ ಶ್ರೀ ಡಾಕ್ಟರ್ ನಿರ್ಮಲಾನಂದ ಮಹಾ ಸ್ವಾಮೀಜಿ ಬೆಂಗಳೂರಿನಲ್ಲಿರುವ ಕೆಂಗೇರಿ ಮಠದ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಶ್ರೀ ನಿಶ್ಚಲಾನಂದ ಮಹಾಸ್ವಾಮೀಜಿ. ನುಗ್ಗೆಹಳ್ಳಿ ಹಿರೇಮಠದ ಶ್ರೀಮದ್ ರಂಭಾಪುರಿ ಶಾಖ ಪುರ ವರ್ಗ ಹಿರೇಮಠದ ಶ್ರೀ ಶ್ರೀ ಡಾ. ಮಹೇಶ್ವರ ಶಿವಾಚಾರ್ಯ ಮಹಾ ಸ್ವಾಮೀಜಿ, ಯಳನಡು ಮಹಾಸಂಸ್ಥಾನದ ಶ್ರೀ ಶ್ರೀ ಜ್ಞಾನಪ್ರಭು ಸಿದ್ದರಾಮ ದೇಶಿ ಕೇಂದ್ರ ಸ್ವಾಮೀಜಿ. ಚಿತ್ರದುರ್ಗದ ಸರ್ದಾರ್ ಸೇವಾಲಾಲ್ ಸ್ವಾಮೀಜಿ. ಸೇರಿದಂತೆ ನಾಡಿನ ಹಲವಾರು ಮಠಮಾನ್ಯಗಳ ಹರ ಗುರು ಚರ ಮೂರ್ತಿಗಳು ಶನಿವಾರ ಮಧ್ಯಾಹ್ನ ನಡೆದ ಸರ್ವಧರ್ಮ ಸಮ್ಮೇಳನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಪ್ರಸ್ತುತ ಇಂದಿನ ದಿನಮಾನಗಳಲ್ಲಿ ಮೊಬೈಲ್ ಮತ್ತು ಟಿವಿ ಯಿಂದ ಹಲವಾರು ದುಷ್ಪರಿಣಾಮಗಳು ಕಂಡುಬರುತ್ತಿದ್ದು ಯುವಜನತೆ ತಂದೆ ತಾಯಿಗಳಲ್ಲಿ ಗುರು ಹಿರಿಯರಲ್ಲಿ ಪೂಜ್ಯ ಭಾವನೆಯಿಂದ ನಡೆಸಿಕೊಂಡು ಧಾರ್ಮಿಕ ಮತ್ತು ಆಧ್ಯಾತ್ಮಿಕ



ವಿಚಾರಗಳಲ್ಲಿ ತೊಡಗಿಸಿಕೊಳ್ಳಬೇಕೆಂದರು.

ಇತ್ತೀಚಿನ ದಿನಗಳಲ್ಲಿ ರಂಗನಹಳ್ಳಿಯಲ್ಲಿ ನಡೆಯುತ್ತಿರುವ ಜಾತ್ರಾ ಸಮಾರಂಭ ಮತ್ತು ಪೂಜೆ ಹೋಮ ಹವನಗಳಂತೆ ನಾಡಿನಲ್ಲಿಡೆ ಹೆಚ್ಚಿನ ರೀತಿಯಲ್ಲಿ ನಡೆದು ಧಾರ್ಮಿಕ ಆದ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ನಾಡಿನ ಹಲವಾರು ಶ್ರೀಗಳು ತಿಳಿಸಿದರು.

ಜೆಡಿಎಸ್ ನ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ ರಂಗನಹಳ್ಳಿಯಲ್ಲಿ ನಡೆದ ಧಾರ್ಮಿಕ ಸಮಾರಂಭ ನಾಡಿಗೆ ಒಳ್ಳೆಯದಾಗುವಂತೆ ಮತ್ತು ರೈತರಿಗೆ ಒಳ್ಳೆ ಮಳೆ ಬೆಳೆ ಆಗುವಂತೆ ಹೆಚ್ಚಾಗಿ ಗ್ರಾಮೀಣ ಪ್ರದೇಶದ ರೈತರು ಮತ್ತು ಕಾರ್ಮಿಕ ವರ್ಗಕ್ಕೆ ಅನುಕೂಲವಾಗಲೆಂದು ರಂಗನಹಳ್ಳಿಯ ಶ್ರೀ ಶನೇಶ್ವರ ಸ್ವಾಮಿ ದೇವಾಲಯದಲ್ಲಿ ಇಷ್ಟೊಂದು ಬೃಹದಾಕಾರದಲ್ಲಿ ಪೂಜೆ ಹೋಮ ಹವನ ನಡೆದಿದೆ ಬರುವ ದಿನಗಳಲ್ಲಿ ಪ್ರತಿ ವರ್ಷ ನಾವು ಈ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊಳ್ಳುವುದಾಗಿ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಶ್ರೀರಾಮ ಸೇನೆಯ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷರಾದ ಪ್ರಮೋದ್ ಮುತಾಲಿಕ್ ರವರು ಮಾತನಾಡಿ ತಿಪಟೂರು ತಾಲ್ಲೂಕಿನ ರಂಗನಹಳ್ಳಿಯ ಶ್ರೀ ಶನೇಶ್ವರ ಸ್ವಾಮಿ ದೇವಾಲಯ ತುಂಬಾ ಶಕ್ತಿಯುತವಾಗಿದೆ ನಾವು ಇಲ್ಲಿಗೆ ಬಂದಿರುವುದರಿಂದ ಮನಸ್ಸಿಗೆ ಹೆಚ್ಚಿನ ಸಂತೋಷವಾಗಿದೆ ಈ ಜಾತ್ರೆ ಸಮಾರಂಭದಲ್ಲಿ ಇಷ್ಟೊಂದು ದೇವತೆಗಳನ್ನು ಒಮ್ಮೆ ದರ್ಶನ ಮಾಡುವ ಪುಣ್ಯ ದೊರಕಿರುವುದು ಈ ರಂಗನಹಳ್ಳಿಯ ಶನೀಶ್ವರ ಸ್ವಾಮಿಯ ಕೃಪೆಯಿಂದ ಇಲ್ಲಿಗೆ ಬರುವ ಪ್ರತಿ ಭಕ್ತಾದಿಗಳಿಗೆ ಸಹ ಆಧ್ಯಾತ್ಮಿಕ ಶಕ್ತಿ ದೊರೆಯಲಿದೆ ಎಂದರು. ತುರುವೇಕೆರೆ ಕ್ಷೇತ್ರದ ಶಾಸಕರಾದ ಎಂಟಿ ಕೃಷ್ಣಪ್ಪ ತಿಪಟೂರು ಜೆಡಿಎಸ್ ಪಕ್ಷದ ಮುಖಂಡರಾದ ಕೆ ಟಿ ಶಾಂತಕುಮಾರ್ ಜೆಡಿಎಸ್ ಮುಖಂಡರಾದ ದೊಡ್ಡೇಗೌಡ ಸೇರಿದಂತೆ ಹಲವಾರು ಮುಖಂಡರು ಹಾಗೂ ಶ್ರೀ ಶ್ರೀ ಶನೇಶ್ವರ ಸೇನಾ ಸಮಿತಿಯ ಪದಾಧಿಕಾರಿಗಳು ಹಾಗೂ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಕಾಮಿಡಿ ಕಿಲಾಡಿಗಳು ಖ್ಯಾತಿಯ ತುಕಾಲಿ ಸ್ಟಾರ್ ಸಂತೋಷ್ ಹಾಗೂ ಮಾನಸ ಸಂತೋಷ್ ಜೂನಿಯರ್ ಅಂಬರೀಶ್ ಆರಾಧ್ಯ ಹಾಗೂ ಸೂರಜ್ ಹಾಸ್ಯೋತ್ಸವ ಸಮಾರಂಭವನ್ನು ನೀಡಿ ನೆರೆದಿದ್ದ ಭಕ್ತರ ಮನ ತಣಿಸಿದರು.

**ಉದಯವಾಹಿನಿ ಕ್ಯಾಲೆಂಡರ್ ಬಿಡುಗಡೆ**

ಆದಿಚುಂಚನಗಿರಿ ಮಠದ ಪೀಠಾಧಿಪತಿಗಳಾದ ಡಾಕ್ಟರ್ ಶ್ರೀ ಶ್ರೀ ನಿರ್ಮಲಾನಂದ ಮಹಾಸ್ವಾಮಿಜಿಗಳು ಉದಯವಾಹಿನಿ ದಿನಪತ್ರಿಕೆಯ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮುದ್ರಣ ಶೈಲಿಯನ್ನು ಕಂಡು ಸಂತಸ ವ್ಯಕ್ತಪಡಿಸಿದರು ಉದಯವಾಹಿನಿ ದಿನಪತ್ರಿಕೆ ಸಂಪಾದಕರಾದ ಟಿ. ಹೊಂಬೇಗೌಡ ಉಪಸ್ಥಿತರಿದ್ದರು





**ಅಮೂಲ್ಯ ಫೌಂಡೇಶನ್ ಹಾಗೂ ಸಿದ್ದಗಂಗಾ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ**

ತುಮಕೂರು ಜಿಲ್ಲೆಯ ಪ್ರಖ್ಯಾತಿ ಪಡೆದಿರುವ ಸಿದ್ದಗಂಗಾ ಆಸ್ಪತ್ರೆ ಹಾಗೂ ಸಮಾಜ ಸೇವೆಯಲ್ಲಿ ಹೆಸರುಗಳಿಸಿರುವ ಅಮೂಲ್ಯ ಫೌಂಡೇಶನ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ನಡೆಸಲಾಯಿತು ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ನೂರಾರು ಭಕ್ತಾದಿಗಳು ತಮ್ಮ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಂಡರು.

ಕರ್ನಾಟಕ ರಾಜ್ಯ ಅರಣ್ಯ ಪರಿಸರ ನಾಗರಿಕ ಹಿತರಕ್ಷಣಾ ವೇದಿಕೆ ಹಾಗೂ ಅಮೂಲ್ಯ ಫೌಂಡೇಶನ್ ವತಿಯಿಂದ ಪ್ರತಿವರ್ಷದಂತೆ ಈ ವರ್ಷವೂ ಸಹ ಉಚಿತವಾಗಿ ರೈತರಿಗೆ ಮತ್ತು ಪರಿಸರ ಪ್ರೇಮಿಗಳಿಗೆ ಸಸಿಗಳನ್ನು ವಿತರಿಸಲಾಯಿತು.



**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 91.67 ₹/L ಬಂಗಾರ: ₹16,058/Gram24ct ₹14,720/Gram22ct ಬೆಳ್ಳಿ: ₹350.00/Gram

# ಭಾರತೀನಗರ: ಕಿಡಿಗೇಡಿಗಳಿಂದ ಎರಡು ಹುಲ್ಲಿನ ಬಣವೆಗೆ ಬೆಂಕಿ

• ಉದಯವಾಹಿನಿ, ಭಾರತೀನಗರ

ಸಮೀಪದ ಹುಣ್ಣನದೊಡ್ಡಿ ಗ್ರಾಮದಲ್ಲಿ ಎರಡು ಹುಲ್ಲಿನ ಬಣವೆಗೆ (ಮೆದೆಗೆ) ಕಿಡಿಗೇಡಿಗಳು ಬೆಂಕಿ ಹಾಕಿದ್ದು, ಎರಡೂ ಬಣವೆಗಳಲ್ಲಿನ ಹುಲ್ಲು ಸುಟ್ಟು ಭಸ್ಮವಾಗಿದೆ. ಹುಣ್ಣನದೊಡ್ಡಿ ಗ್ರಾಮದ ಚಿಕ್ಕಣ್ಣನ ಮಗ ಕುಳ್ಳಯ್ಯ, ಚನ್ನೇಗೌಡರ ಮಗ ರವಿ ಎಂಬುವವರಿಗೆ ಸೇರಿದ ಹುಲ್ಲಿನ ಬಣವೆಗಳು ಭಸ್ಮಗೊಂಡಿದ್ದು, ಸಂಜೆ 4.30 ರಲ್ಲಿ ಯಾರೂ ಇಲ್ಲದ ಸಮಯವನ್ನು ಗಮನಿಸಿದ ಕಿಡಿಗೇಡಿಗಳು ಕೃತ್ಯವೆಸಗಿದ್ದಾರೆ. ಬೆಂಕಿ ಕಂಡ ತಕ್ಷಣ ಗ್ರಾಮಸ್ಥರು ಅಗ್ನಿಶಾಮಕ ಠಾಣೆಗೆ ಸುದ್ದಿ ಮುಟ್ಟಿಸಿದ್ದು, ತುಸು ಸಮಯದಲ್ಲೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದವರು ಗ್ರಾಮಸ್ಥರೊಂದಿಗೆ ಬೆಂಕಿ ನಂದಿಸಿದ್ದಾರೆ.


ಉದಯವಾಹಿನಿ ಚಿತ್ರ

ಚೆನ್ನಾಗಿ ಒಣಗಿದ್ದರಿಂದ ಆ ವೇಳೆಗಾಗಲೇ ಎರಡೂ ಬಣವೆಗಳಲ್ಲಿನ ಹುಲ್ಲು ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಪಕ್ಕದಲ್ಲಿದ್ದ ಇನ್ನೂ 5 ಹುಲ್ಲಿನ ಬಣವೆಗಳಿದ್ದು, ಅವಕ್ಕೆ ಹಾನಿಯಾಗದಂತೆ ಬೆಂಕಿ ನಂದಿಸಲಾಗಿದೆ. ಕಳೆದ ಒಂದು ವಾರದ ಹಿಂದೆಯೂ ಸಹ ಕಿಡಿಗೇಡಿಗಳು ಕಡಲೆಗೌಡರ ಶಿವು ಎಂಬುವವರ 3 ಎಕರೆ ಹುಲ್ಲಿಗೆ ಬೆಂಕಿ ಹಾಕಿದ್ದರು. ಈಗ ಮತ್ತೆ ಕಿಡಿಗೇಡಿಗಳು ಹುಲ್ಲಿನ ಮೆದೆಗೆ ಬೆಂಕಿ ಹಾಕಿರುವುದರಿಂದ ಗ್ರಾಮಸ್ಥರು ಆತಂಕ್ಕೆ ಒಳಗಾಗಿದ್ದಾರೆ. ಇದರ ಬಗ್ಗೆ ಪೊಲೀಸರು ಸೂಕ್ತ ತನಿಖೆ ನಡೆಸಿ ಕಿಡಿಗೇಡಿಗಳನ್ನು ಪತ್ತೆಹಚ್ಚುವಂತೆ ಕುಳ್ಳಯ್ಯ, ರವಿ, ಶಿವು ಒತ್ತಾಯಿಸಿದ್ದಾರೆ.

### ಅನಧಿಕೃತ ಕಟ್ಟಡ ತೆರವಿಗೆ ತಹಶೀಲ್ದಾರ್‌ಗೆ ಪತ್ರ ಬರೆದ ವಲಯ ಅರಣ್ಯಾಧಿಕಾರಿ

# ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಮುಂದಿನ ಕ್ರಮ

• ಉದಯವಾಹಿನಿ, ಗುಂಡ್ಲುಪೇಟೆ

ಪರಿಸರ ಸಂರಕ್ಷಣೆ , ವನ್ಯಜೀವಿಗಳ ರಕ್ಷಣೆ ಎಂದು ತಿಳುವಳಿಕೆ ಪಾಠ ಮಾಡುವ ಕೆಲವು ಸಭ್ಯಸ್ಥರೆ ಒಮ್ಮೊಮ್ಮೆ ಪರಿಸರಕ್ಕೆ ದಕ್ಕೆ, ವನ್ಯಜೀವಿಗಳಿಗೆ ಉಪದ್ರ ನೀಡುವಂತ ಘನಕಾರ್ಯಕ್ಕೆ ಮುಂದಾಗಿ ಸಾರ್ವಜನಿಕರ ಹಿಡಿಶಾಪಕ್ಕೆ ಗುರಿಯಾಗುತ್ತಾರೆ, ಈಗ ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಕುಂದಕೆರೆ ವಲಯಕ್ಕೆ ಸೇರಿದ ಸರ್ವೇ ನಂಬರ್ 24ರಲ್ಲಿ ಅರಣ್ಯ ಇಲಾಖೆ ನಿಯಮವನ್ನ ಉಲ್ಲಂಘಿಸಿ ಅನಧಿಕೃತ ಕಟ್ಟಡ ನಿರ್ಮಾಣದ ಆರೋಪವನ್ನ ಬಿಜೆಪಿ ಮಾಜಿ ವಿಧಾನ ಪರಿಷತ್ ಸದಸ್ಯ, ಗೋ.ಮಧುಸೂದನ್ ಎದುರಿಸುತ್ತಿದ್ದಾರೆ. ಮಂಗಲ ಸರ್ವೇ ನಂಬರ್ 24ರಲ್ಲಿ ನಿಯಮಾವಳಿಯಂತೆ ಯಕೊ ಸೆನ್ಸಿಟೀವ್ ಜೋನ್ ಮಾನಿಟರಿಂಗ್ ಕಮಿಟಿ ಅನುಮತಿ ಪಡೆಯದೆ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಲಾಗಿದೆ ಎಂದು ಕುಂದಕೆರೆ ಅರಣ್ಯ ವಲಯದ ಆರ್ ಎಫ್ ಓ ತಹಶೀಲ್ದಾರ್ ತನ್ಮಯ್ ಅವರಿಗೆ ಪತ್ರ ಬರೆದಿರುವುದು ಬಂಡೀಪುರದಲ್ಲಿ ಅಕ್ರಮ ರೆಸಾರ್ಟ್‌ಗಳ ಕಾರುಬಾರು ಜೋರಾಗಿದೆ ಎಂಬುದು ಸಾಭೀತಾಗಿದೆ. ಪಂಪ್ ಹೌಸ್ ಮನೆ ನಿರ್ಮಾಣಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದಾರೆ ಆದರೆ ಇಲಾಖೆಯಿಂದ ಯಾವುದೇ ಅನುಮತಿ ಪತ್ರ ಕೈ ಸೇರದಿದ್ದರೂ ಸಹ ಕಟ್ಟಡ ಕಾಮಗಾರಿ ನಡೆಸಿ ನಿಗದಿಗಿಂತ ಹೆಚ್ಚುವರಿಯಾಗಿ ಕಟ್ಟಡ ನಿರ್ಮಾಣ ಮಾಡಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಸದ್ಯ ಕಟ್ಟಡ ನಿರ್ಮಾಣ ಸ್ಥಳವು ಮೊಯಾರ್ ಕಣಿಯನಪುರ ಆನೆ ಕಾರಿಡಾರ್ ಎಂದು ಗುರುತಿಸಲಾಗಿದ್ದರೂ ಸಹ ಸಿಮೆಂಟ್ ಕಾಂಪೌಂಡ್ ನಿರ್ಮಾಣ ಮಾಡುವ ಮೂಲಕ ನಿಯಮಾವಳಿಗೆ ಸೆಡ್ಡು ಹೊಡೆದಿದ್ದಾರೆ.


ಉದಯವಾಹಿನಿ ಚಿತ್ರ

ಅಕ್ರಮವಾಗಿ ಕಟ್ಟಡ ನಿರ್ಮಾಣ

> ಬಂಡೀಪುರದಲ್ಲಿ ಅನಧಿಕೃತ ರೇಸಾರ್ಟ್ಸ್ ಹೋಮ್ ಸ್ಟೇಗಳ ಕುರಿತು ದೂರುಗಳು ಕೇಳಿಬಂದ ಹಿನ್ನಲೆ ಅಧಿಕಾರಿಗಳೊಟ್ಟಿಗೆ ತೆರಳಿ ಸ್ಥಳ ಪರಿಶೀಲನೆ ನಡೆಸಲಾಗಿದ್ದು ಸಂಬಂದಪಟ್ಟ ಇಲಾಖೆಯಿಂದಲೂ ಮಾಹಿತಿ ಸಂಗ್ರಹಿಸಲಾಗಿದೆ, ಕಂಟ್ರೀ ಕ್ಲಬ್ ಹಾಗೂ ಸರ್ವೇ ನಂಬರ್ 24ರಲ್ಲಿ ನಿರ್ಮಾಣ ಮಾಡಲಾಗಿರುವ ಕಟ್ಟಡದ ಕುರಿತು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.
>
> -ಎಂ.ಎಸ್.ತನ್ಮಯ್ , ತಹಶೀಲ್ದಾರ್

ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಪರಿಸದ ಸೂಕ್ಷ್ಮ ಪ್ರದೇಶದಲ್ಲಿ ಯಾವುದೇ ರೀತಿಯ ವಾಣಿಜ್ಯೋದ್ಯಮ ಕಟ್ಟಡ ನಿರ್ಮಾಣಕ್ಕೆ ಮುಂದಾಗುವುದು ಕಾನೂನು ಬಾಹಿರ ಆಗಿದೆ ಆದರೆ ಆನೆ ಕಾರಿಡಾರ್ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುವ ಕುರಿತು ಕುಂದಕೆರೆ ಆರ್‌ಎಫ್ ತಹಶೀಲ್ದಾರ್‌ರಿಗೆ ಮೂಲಕ ಟಾಸ್ಕ್ ಫೋರ್ಸ್ ಮುಖಾಂತರ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

## ಮಿನಿ ನ್ಯೂಸ್

### ಶಿಕ್ಷಕರಿಗಾಗಿ ಡಿ.ಸಿ ಕಚೇರಿಗೆ ಬಂದ ಮೊರಾರ್ಜಿ ವಸತಿ ಶಾಲೆಯ ಮಕ್ಕಳು

• ಉದಯವಾಹಿನಿ, ಚಿಕ್ಕಬಳ್ಳಾಪುರ

ತಾಲ್ಲೂಕಿನ ಪೆರೇಸಂದ್ರದ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಯ ಶಿಕ್ಷಕರ ದೇವರಾಜ್ ಅವರನ್ನು ಅಮಾನತುಗೊಳಿಸಿರುವ ಕ್ರಮ ಖಂಡಿಸಿ ಶಾಲೆಯ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿಗೆ ಬಂದು ಮನವಿ ಸಲ್ಲಿಸಿದ್ದಾರೆ. ವಸತಿ ಶಾಲೆಯ ಶಿಕ್ಷಕರ ನಡುವಿನ ತಿಕ್ಕಾಟದಿಂದ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿ ಮೆಟ್ಟಿಲು ತುಳಿಯುವಂತಾಗಿದೆ ಎಂದು ಶಿಕ್ಷಕ ವಲಯದಲ್ಲಿ ಮಾತುಗಳು ಕೇಳಿ ಬರುತ್ತಿವೆ. ಹಿಂದಿ ಭಾಷಾ ಶಿಕ್ಷಕ ದೇವರಾಜ್ ಅವರನ್ನು ಎರಡು ದಿನಗಳ ಹಿಂದೆ ಅಲ್ಪಸಂಖ್ಯಾತ ಇಲಾಖೆಯು ಕೆಲಸದಿಂದ ಅಮಾತುಗೊಳಿಸಿತ್ತು. ಈ ಅಮಾನತಿಗೆ ವಸತಿ ಶಾಲೆಯಲ್ಲಿನ ಶಿಕ್ಷಕರ ನಡುವಿನ ತಿಕ್ಕಾಟವೇ ಪ್ರಮುಖ ಕಾರಣ ಎನ್ನುವ ಮಾತುಗಳಿವೆ. ಅಮಾನತಿಗೆ ಆಕ್ರೋಶಗೊಂಡ ವಿದ್ಯಾರ್ಥಿಗಳು ಜಿಲ್ಲಾಧಿಕಾರಿ ಕಚೇರಿಗೆ ಬಂದು, 'ನಮ್ಮ ಶಿಕ್ಷಕರು ಯಾವುದೇ ತಪ್ಪು ಮಾಡಿಲ್ಲ. ಅವರ ಅಮಾನತು ವಾಪಸ್ ಪಡೆಯಬೇಕು' ಎಂದು ಮನವಿ ಮಾಡಿದರು. ಜಿಲ್ಲಾಧಿಕಾರಿ ಅವರ ಕಚೇರಿಯಲ್ಲಿ ಇಲ್ಲದ ಕಾರಣ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಎನ್.ಭಾಸ್ಕರ್‌ಅವರಿಗೆ ಮನವಿ ಸಲ್ಲಿಸಿದರು. ಈ ಬಗ್ಗೆ ತನಿಖೆ ನಡೆಸುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ನೀಡಿದ್ದಾರೆ ಎನ್ನುತ್ತವೆ ಮೂಲಗಳು. ಅಧಿಕಾರಿಗಳು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ವಿದ್ಯಾರ್ಥಿಗಳನ್ನು ವಸತಿ ಶಾಲೆಗೆ ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಶಾಲೆಗೆ ತಹಶೀಲ್ದಾರ್ ಸಹ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ.

### ಚಿನ್ನ ಗೆದ್ದ ಬಾಲಕಿಗೆ ಸನ್ಮಾನ

• ಉದಯವಾಹಿನಿ, ಶಿರಾ:

ನೇಪಾಳದ ಕಂಠ್ಮಡುನಲ್ಲಿ ನಡೆದ ಅಂತರರಾಷ್ಟ್ರೀಯ ಕರಾಟೆ ಪಂದ್ಯದಲ್ಲಿ ಚಿನ್ನದ ಪದಕ ಪಡೆದ ಎಚ್.ಆರ್. ಜಾನವಿ ಅವರನ್ನು ಸತ್ಕರಿಸಲಾಯಿತು. ಜಾನವಿ ಅಂತರರಾಷ್ಟ್ರೀಯ ಕರಾಟೆ ಪಂದ್ಯದಲ್ಲಿ ಬಾಲಕಿಯರ 45 ಕೆ.ಜಿ ವಿಭಾಗದಲ್ಲಿ ದೇಶವನ್ನು ಪ್ರತಿನಿಧಿಸಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದಿದ್ದಾರೆ. ತಾಲ್ಲೂಕಿನ ಹೇರೂರು ಗ್ರಾಮದ ರೈತ ಎಚ್.ಟಿ.ರಂಗನಾಥ್, ಲಕ್ಷ್ಮಿ ದಂಪತಿಗಳ ಪುತ್ರಿ ಎಚ್.ಆರ್.ಜಾನವಿ ಅವರು ಹಿರಿಯೂರು ತಾಲ್ಲೂಕಿನ ಜವಗೊಂಡನಹಳ್ಳಿ ಶಾರದಾ ಶಾಲೆಯಲ್ಲಿ 8ನೇ ತರಗತಿ ಓದುತ್ತಿದ್ದಾರೆ.

### ಬಾಸುಂಡೆ ಬರುವಂತೆ ಪೆಟ್ಟು: ಚಿಕ್ಕನಾಯಕನಹಳ್ಳಿ ಅಂಗನವಾಡಿ ಸಹಾಯಕಿ ವಿರುದ್ಧ ಆರೋಪ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ತಾಲ್ಲೂಕಿನ ಕಂದಿಕೆರೆ ಗ್ರಾಮದ ಯಲ್ಲಮ್ಮ ದೇವಿ ದೇವಸ್ಥಾನದ ಬಳಿಯ ಅಂಗನವಾಡಿಯಲ್ಲಿ 4 ವರ್ಷದ ಬಾಲಕನಿಗೆ ಸಹಾಯಕಿ ಸಣ್ಣ ವಿಚಾರಕ್ಕಾಗಿ ಕೋಲಿನಿಂದ ಬಾಸುಂಡೆ ಬರುವಂತೆ ಹೊಡೆದಿದ್ದಾರೆ ಎಂದು ಪೋಷಕರು ದೂರಿದ್ದಾರೆ. ಮಗುವಿನ ಕೈಮೇಲೆ ಬಿದ್ದಿರುವ ಪೆಟ್ಟಿನ ಗುರುತುಗಳನ್ನು ಕಂಡ ಪೋಷಕರು ಮತ್ತು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಿಡಿಪಿಒ ಹೊನ್ನಪ್ಪ ಪ್ರತಿಕ್ರಿಯಿಸಿ, ಕಚೇರಿ ಸೂಪರ್‌ವೈಸರ್ ಕಂದಿಕೆರೆಗೆ ಭೇಟಿ ನೀಡಿ ಪರಿಶೀಲಿಸುತ್ತಾರೆ. ಅಂಗನವಾಡಿ ಸಹಾಯಕಿಗೆ ಅನಾರೋಗ್ಯವಿದ್ದ ಕಾರಣ ಬೇರೆಯವರು ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ಅನುಮತಿ ಇಲ್ಲದೆ ಸಹಾಯಕಿ ಪರವಾಗಿ ಇನ್ನೊಬ್ಬರನ್ನು ನೇಮಿಸಿಕೊಂಡಿದ್ದಕ್ಕಾಗಿ ಅಂಗನವಾಡಿ ಕಾರ್ಯಕರ್ತೆ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಮಗುವಿನ ಆರೋಗ್ಯ ವೆಚ್ಚವನ್ನು ಕಾರ್ಯಕರ್ತೆಯೇ ಭರಿಸಬೇಕು ಎಂದರು.

### ಲಂಚ: ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಚೇತನ್ ಲೋಕಾಯುಕ್ತ ಬಲೆಗೆ

• ಉದಯವಾಹಿನಿ, ತುಮಕೂರು

ಠಾಣೆಯ ವಶದಲ್ಲಿದ್ದ ವಾಹನ ಬಿಡುಗಡೆಗೆ 40 ಸಾವಿರ ಲಂಚ ಪಡೆದ ಆರೋಪದ ಮೇರೆಗೆ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಚೇತನ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬೆಳಗಿನ ಜಾವ ಬಂಧಿಸಿದ್ದಾರೆ. ವಾಹನ ಬಿಡುಗಡೆ ಮಾಡಲು 1 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. ಇದರಲ್ಲಿ 40 ಸಾವಿರ ಹಣವನ್ನು ಕ್ಯಾತ್ಸಂದ್ರ ಬಳಿಯ ಹೋಟೆಲ್ ಸಿಬ್ಬಂದಿಯೊಬ್ಬರಿಗೆ ನೀಡುವಂತೆ ವಾಹನ ಮಾಲೀಕರಿಗೆ ಚೇತನ್ ತಿಳಿಸಿದ್ದರು. ಈ ಕುರಿತು ವಾಹನ ಮಾಲೀಕರು ಲೋಕಾಯುಕ್ತ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ರಾತ್ರಿ ಕ್ಯಾತ್ಸಂದ್ರದ ಹೋಟೆಲ್ ಸಿಬ್ಬಂದಿ ಹಣ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಸಿಬ್ಬಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪಿಎಸ್‌ಐ ಚೇತನ್ ಬಗ್ಗೆ ಹೇಳಿದ್ದಾರೆ. ಶನಿವಾರ ಬೆಳಗಿನ ಜಾವ ಲೋಕಾಯುಕ್ತ ಪೊಲೀಸರು ಚೇತನ್ ಅವರನ್ನು ಬಂಧಿಸಿದ್ದಾರೆ.

# ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸಲು ಕರೆ

• ಉದಯವಾಹಿನಿ, ರಾಮನಗರ

ಜಿಲ್ಲೆಯನ್ನು ಕುಷ್ಠರೋಗ ಮುಕ್ತವನ್ನಾಗಿಸಲು ನಾಗರೀಕರು ಸಹಕರಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ಮಂಜುಳಾ ಅವರು ಹೇಳಿದರು. ನಗರದ ಜಿಲ್ಲಾ ಪಂಚಾಯತ್‌ನ ಮಿನಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿ ಹಾಗೂ ಐಕಾನ್ ನರ್ಸಿಂಗ್ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಸ್ಪರ್ಶ ಕುಷ್ಠರೋಗ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಾದ್ಯಂತ 14 ಪ್ರಕರಣಗಳು ವರದಿಯಾಗಿದ್ದು, ಮುಂದಿನ ದಿನಗಳಲ್ಲಿ ಪ್ರಕರಣವನ್ನು ಶೂನ್ಯಕ್ಕೆ ಇಳಿಸುವ ಮೂಲಕ ಕುಷ್ಠರೋಗ ಮುಕ್ತ ಜಿಲ್ಲೆಯನ್ನಾಗಿಸಲು ನಾಗರೀಕರು ಸಹಕರಿಸುವಂತೆ ಕೋರಿದರು. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಕುಮಾರ್ ಮಾತನಾಡಿ, ಸ್ಪರ್ಶ್ ಕುಷ್ಟರೋಗ ಜಾಗೃತಿ ಅಭಿಯಾನವು ಜನವರಿ 30 ರಿಂದ ಫೆಬ್ರವರಿ 13ರವರೆಗೆ ಜಿಲ್ಲೆಯಾದ್ಯಂತ ನಡೆಯಲಿದೆ, ಕುಷ್ಠರೋಗದ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ. ಇದು ಮೈಕೋ ಬ್ಯಾಕ್ಟೀರಿಯಂ ಲೆಪ್ರೆ ಎಂಬ ರೋಗಾಣುವಿನಿಂದ ಹರಡುತ್ತದೆ. ದೇಹದ ಮೇಲೆ ಯಾವುದೇ ಸ್ಪರ್ಶ ಜ್ಞಾನವಿಲ್ಲದ ತಿಳಿ ಬಿಳಿ, ತಾಮ್ರ ಬಣ್ಣದ ಮಚ್ಚೆಗಳು ಕಾಣಿಸುವುದು, ಕೈಕಾಲುಗಳಲ್ಲಿ ಜೋಮು ಹಿಡಿದು ಸ್ಪರ್ಶ ಜ್ಞಾನವಿಲ್ಲದಿರುವುದು, ಕೈಕಾಲುಗಳಲ್ಲಿ, ಮುಖದಲ್ಲಿ ಎಣ್ಣೆ ಸವರಿದಂತೆ ಹೊಳಪು ಇರುವುದು ರೋಗಲಕ್ಷಣವಾಗಿರುತ್ತದೆ. ಈ ರೋಗಲಕ್ಷಣಗಳು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷಿಸಿಕೊಂಡು ರೋಗವನ್ನು ಬಹು ಔಷಧಿ ಚಿಕಿತ್ಸೆಯಿಂದ ಸಂಪೂರ್ಣವಾಗಿ ಗುಣಪಡಿಸಬಹುದೆಂದು ತಿಳಿಸಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಅರ್ಪಿತ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಹುತಾತ್ಮರಾದ ದಿನವಾದ ಜ.30ರಂದು ಕುಷ್ಠರೋಗಿಗಳನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡು ಅವರ ಆತ್ಮ ಗೌರವಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕು.


ಉದಯವಾಹಿನಿ ಚಿತ್ರ


ಕುಷ್ಠರೋಗಕ್ಕೆ ಅಂಟಿರುವ ಕಳಂಕವನ್ನು ಹೋಗಲಾಡಿಸಲು ಬದ್ಧರಾಗಿ ಅವರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಗೌರವಯುತವಾಗಿ ಬದುಕಲು ಅವಕಾಶ ಕಲ್ಪಿಸಬೇಕು. ಮಹಾತ್ಮ ಗಾಂಧೀಜಿಯವರ ಕನಸಾದ ಕುಷ್ಠರೋಗ ಮುಕ್ತ ಭಾರತ ಕಟ್ಟಲು ಕಾಯ, ವಾಚ, ಮಾನಸಾ ಶ್ರಮಿಸಬೇಕೆಂದು ಪ್ರತಿಜ್ಞಾವಿಧಿ ಬೋಧಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ ಶಶಿಕಿರಣ್, ಜಿಲ್ಲಾ ಮಲೇರಿಯಾ ರೋಗ ನಿರ್ಮೂಲನಾಧಿಕಾರಿ ಡಾ. ಪದ್ಮಾವತಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ದಾಸಯ್ಯ, ಆರೋಗ್ಯ ನಿರೀಕ್ಷಣಾಧಿಕಾರಿ ಅನುರೂಪ, ಎಂಐಎಸ್ ಶೃತಿ, ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳು ಹಾಜರಿದ್ದರು.

## ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿದರೆ ಶಿಕ್ಷಕರು, ಅಧಿಕಾರಿಗಳೇ ಹೊಣೆ

• ಉದಯವಾಹಿನಿ, ಕೋಲಾರ

ಈ ಬಾರಿ ಜಿಲ್ಲೆಯ ಎಸ್‌ಎಸ್‌ಎಲಸಿ ಫಲಿತಾಂಶದಲ್ಲಿ ಇಳಿಕೆಯಾದಲ್ಲಿ ಸಂಬಂಧಪಟ್ಟ ಮುಖ್ಯ ಶಿಕ್ಷಕರು, ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆ, ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಜಿಲ್ಲೆಯ ಶೈಕ್ಷಣಿಕ ಘನತೆಯನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶದ ಗುಣಮಟ್ಟ ಮತ್ತು ಪ್ರಮಾಣವನ್ನು ಹೆಚ್ಚಿಸಲು ಪ್ರತಿ ಶಾಲೆಯೂ ಮೈಕ್ರೋಪ್ಲಾನಿಂಗ್ ರೂಪಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಕೇವಲ ಗುರುತಿಸುವುದಷ್ಟೇ ಅಲ್ಲ; ನಿರ್ದಿಷ್ಟ ಕಲಿಕಾ ನ್ಯೂನತೆ ಪತ್ತೆ ಹಚ್ಚಿ ಪರಿಹಾರ ಬೋಧನೆ ನಡೆಸಬೇಕು. ಪ್ರತಿ ಮಗುವೂ ಕನಿಷ್ಠ ಉತ್ತೀರ್ಣ ಅಂಕ ಪಡೆಯುವಂತೆ ಆತ್ಮವಿಶ್ವಾಸ ತುಂಬುವ ಕೆಲಸವಾಗಬೇಕು. ಹೆಚ್ಚಿನ ಗಮನದ ಅಗತ್ಯವಿರುವ ವಿದ್ಯಾರ್ಥಿಗಳನ್ನು ಶಿಕ್ಷಕರು ಮತ್ತು ಅಧಿಕಾರಿಗಳು ದತ್ತು ಪಡೆದು, ಅವರ ಶೈಕ್ಷಣಿಕ ಪ್ರಗತಿಯನ್ನು ವಾರಕ್ಕೊಮ್ಮೆ ಪರಿಶೀಲಿಸಬೇಕು. ಶೂನ್ಯ ಫಲಿತಾಂಶ ಬರುವ ಸಾಧ್ಯತೆ ಇರುವ ಶಾಲೆಗಳ ಮೇಲೆ ವಿಶೇಷ ನಿಗಾ ವಹಿಸಬೇಕು ಎಂದರು. ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಪೋಷಕರಿಗೆ ನಿಯಮಿತವಾಗಿ ಮಾಹಿತಿ ನೀಡಬೇಕು. ಶಾಲೆಯಿಂದ ಹೊರಗುಳಿಯುವ ಅಥವಾ ಗೈರು ಹಾಜರಾಗುವ ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ, ಪರೀಕ್ಷೆಗೆ ಸಿದ್ಧಪಡಿಸುವ ಜವಾಬ್ದಾರಿಯನ್ನು ಮುಖ್ಯ ಶಿಕ್ಷಕರು ವಹಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಪರೀಕ್ಷಾ ಭಯ ನಿವಾರಿಸಲು ಮಾದರಿ ಪ್ರಶ್ನೆ ಪತ್ರಿಕೆಗಳ ಆಧಾರದ ಮೇಲೆ ಸರಣಿ ಪರೀಕ್ಷೆಗಳನ್ನು ನಡೆಸಬೇಕು. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ, ವಿದ್ಯಾರ್ಥಿಗಳು ಮಾಡುತ್ತಿರುವ ತಪ್ಪುಗಳನ್ನು ಸರಿಪಡಿಸಲು ವೈಯಕ್ತಿಕ ಮಾರ್ಗದರ್ಶನ ನೀಡಬೇಕು ಎಂದರು.

> ಹೆಚ್ಚಿನ ಗಮನದ ಅಗತ್ಯವಿರುವ ವಿದ್ಯಾರ್ಥಿಗಳನ್ನು ಶಿಕ್ಷಕರು ಮತ್ತು ಅಧಿಕಾರಿಗಳು ದತ್ತು ಪಡೆದು ಅವರ ಶೈಕ್ಷಣಿಕ ಪ್ರಗತಿಯನ್ನು ವಾರಕ್ಕೊಮ್ಮೆ ಪರಿಶೀಲಿಸಬೇಕು.
>
> -ಎಂ.ಆರ್.ರವಿ ಜಿಲ್ಲಾಧಿಕಾರಿ

ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೇವಲ ಕಚೇರಿ ಕೆಲಸಕ್ಕೆ ಸೀಮಿತವಾಗದೆ, ನಿರಂತರವಾಗಿ ಶಾಲೆಗಳಿಗೆ ಭೇಟಿ ನೀಡಿ ಬೋಧನಾ ಕ್ರಮಗಳನ್ನು ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು.

ಹಾಸ್ಟೆಲ್ ವಿದ್ಯಾರ್ಥಿಗಳತ್ತ ಗಮನವಿಡಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಸಂಜೆ, ಬೆಳಿಗ್ಗೆ ಕಡ್ಡಾಯ ಅಧ್ಯಯನ ಅವಧಿಯನ್ನು ನಿಗದಿಪಡಿಸಬೇಕು. ನಿಲಯ ಪಾಲಕರು ವಿದ್ಯಾರ್ಥಿಗಳ ಓದಿಗೆ ಪೂರಕವಾದ ಪಠ್ಯ ಸಾಮಗ್ರಿ ಮತ್ತು ಮಾರ್ಗದರ್ಶನ ಸಿಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಎಂ.ಆರ್. ರವಿ ಹೇಳಿದರು.

## ರಾಷ್ಟ್ರೀಯ ಸ್ವಚ್ಛತಾ ದಿನಕ್ಕೆ ಚಾಲನೆ


ಉದಯವಾಹಿನಿ ಚಿತ್ರ


• ಉದಯವಾಹಿನಿ, ರಾಮನಗರ

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ದಕ್ಷಿಣ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾ ವಕೀಲರ ಸಂಘ, ರಾಮನಗರ ನಗರಸಭೆಯ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ, ಸತ್ರ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಸ್ವಚ್ಛತಾ ದಿನ ಕಾರ್ಯಕ್ರಮಕ್ಕೆ ಪ್ರಧಾನ ಜಿಲ್ಲಾ, ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಎಂ.ಎಚ್. ಅಣ್ಣಯ್ಯನವರ ಅವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ. ಕೆಂಪಯ್ಯ, ಒಂದನೇ ಹೆಚ್ಚುವರಿ ಜಿಲ್ಲಾ, ಸತ್ರ ನ್ಯಾಯಾಧೀಶರಾದ ಪಂಚಾಕ್ಷರಿ ಎಂ., ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ ಲೋಕೇಶ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತ ಪಿ.ಆರ್, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ ನಿವೇದಿತ ಟಿ.ಎಂ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ಪುಟ್ಟರಾಜ ಸಿ., ರಾಮನಗರ ನಗರಸಭೆ ಆಯುಕ್ತರಾದ ಜಯಣ್ಣ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಯರಾಮ್ ವಿ.ಎನ್, ಕಾರ್ಯದರ್ಶಿ ಚಂದ್ರಶೇಖರ್ ಟಿ.ಎಂ., ವಕೀಲರ ಸಂಘದ ನಿಕಟ ಪೂರ್ವಅಧ್ಯಕ್ಷ ಶ್ರೀವತ್ಸ, ನಗರಸಭೆ ಅಧಿಕಾರಿ ನಟರಾಜ್ ಗೌಡ ಸೇರಿದಂತೆ ಹಲವು ವಕೀಲರು ಹಾಗೂ ನ್ಯಾಯಾಲದಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## 8 ಕ್ಷೇತ್ರಗಳಲ್ಲಿ ಎನ್‌ಡಿಎ ಗೆಲುವು: ಸುಧಾಕರ್

• ಉದಯವಾಹಿನಿ, ಚಿಕ್ಕಬಳ್ಳಾಪುರ:

ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆಯಲ್ಲಿ 8ರಿಂದ 10 ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆಲ್ಲುವರು ಎಂದು ಸಂಸದ ಡಾ.ಕೆ.ಸುಧಾಕರ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ಮತಕ್ಕೆ 3 ಲಕ್ಷ, 5 ಲಕ್ಷ ನೀಡುತ್ತಿದ್ದಾರೆ. ಹೀಗೆ ಹಣ ನೀಡುವವರಿಂದ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ಮತ್ತು ರೈತರ ಅಭಿವೃದ್ಧಿ ಸಾಧ್ಯವೇ? ಎಂದು ಪ್ರಶ್ನಿಸಿದರು.

ಚಿಮುಲ್ ಜಿಲ್ಲೆಗೆ ತರಬೇಕು ಎನ್ನುವ ಆಸೆ ಬಹಳ ದಿನಗಳಿಂದ ಇತ್ತು. ಚಿಮುಲ್ ರಚನೆಯ ವೇಳೆ ಕಾಂಗ್ರೆಸ್‌ನವರು ಕ್ಷುಲ್ಲಕ ರಾಜಕೀಯ ಮಾಡಿದರು. ಚಿಮುಲ್ ಚುನಾವಣೆಯಲ್ಲಿ ಹಣ ಕೊಟ್ಟವರಿಗೆ ಮತ ನೀಡಬೇಡಿ. ರೈತರ ಪರವಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಮತ ನೀಡಿ ಎಂದು ಕೋರಿದರು.



ಹಾಲು ಒಕ್ಕೂಟ ಪವಿತ್ರವಾದ ಸಂಸ್ಥೆ. ನನ್ನ ತಂದೆ ತಾಯಿಯನ್ನು ಎಷ್ಟು ಗೌರವಿಸುವೆನೋ ಅದೇ ರೀತಿಯಲ್ಲಿ ಒಕ್ಕೂಟ ಗೌರವಿಸುವೆ. ಕಳ್ಳರು, ಸುಳ್ಳರು ಭ್ರಷ್ಟಾಚಾರ ಮಾಡುವವರನ್ನು ದಯ ಪಿಟ್ಟು ಆಯ್ಕೆ ಮಾಡಬೇಡಿ. ಕೆಲವರು ಪ್ಯಾಷನ್‌ಗಾಗಿ ಚುನಾವಣೆಗೆ ಬಂದಿದ್ದಾರೆ. ನಿಮಗೆ ಸ್ಪಂದಿಸುವ ನಿರ್ದೇಶಕರನ್ನು ಆಯ್ಕೆ ಮಾಡಿ ಎಂದು ಕೋರಿದರು.

ಚಿಕ್ಕಬಳ್ಳಾಪುರದ ನಂದಿ ಭಾಗದಲ್ಲಿ ಎನ್‌ಡಿಎ ಅಭ್ಯರ್ಥಿ ಇಲ್ಲ. ನಾನು ಈ ಕ್ಷೇತ್ರದಲ್ಲಿ ಯಾರಿಗೂ ಬೆಂಬಲ ನೀಡಿಲ್ಲ. ನನಗೂ ಅಲ್ಲಿನ ಅಭ್ಯರ್ಥಿಗಳಿಗೂ ಸಂಬಂಧವಿಲ್ಲ. ನಮ್ಮ ಸ್ಥಳೀಯ ಮುಖಂಡರಿಗೆ ಈ ಕ್ಷೇತ್ರದ ಜವಾಬ್ದಾರಿ ಕೊಟ್ಟಿದ್ದೆ. ಅವರು ಆ ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲವಾಗಿದ್ದಾರೆ. ಈ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ ಸುಲಭವಾಗಿ ಗೆಲ್ಲುತ್ತಿದ್ದರು ಎಂದರು. ಎರಡು ವರ್ಷಗಳ ನಂತರ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬರುತ್ತದೆ. ಆಗ ನಮ್ಮವರೇ ಅಧ್ಯಕ್ಷರಾಗುವರು. ರಾಜಕೀಯ ಪಕ್ಷ ಎಂದರೆ ವಿಶ್ವಾಸ ಮುಖ್ಯ. ಇಲ್ಲಿದ್ದು ಮತ್ತೊಂದು ಪಕ್ಷ, ಅಭ್ಯರ್ಥಿ ಬೆಂಬಲಿಸುವುದು. ಅಲ್ಲಿದ್ದು ಇಲ್ಲಿ ಕೆಲಸ ಮಾಡುವುದು ಆತ್ಮವಂಚನೆ. ನನ್ನ ರಾಜಕೀಯ ಜೀವನದಲ್ಲಿ ಎಂದಿಗೂ ಈ ಕೆಲಸ ಮಾಡಿಲ್ಲ ಎಂದು ಹೇಳಿದರು.

## ಬೂದನೂರು ಉತ್ಸವ; ನಾಗರಿಕರಿಗೆ 3 ದಿನ ಹೆಲಿ ಟೂರಿಸಂ

• ಉದಯವಾಹಿನಿ, ಮಂಡ್ಯ

ಕಳೆದ ವರ್ಷದಂತೆ ಈ ಬಾರಿಯೂ ಬೂದನೂರು ಉತ್ಸವವನ್ನು ಫೆ.21, 22ರಂದು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಶಾಸಕ ಪಿ. ರವಿ ಕುಮಾರ್ ಹೇಳಿದರು. ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಬೂದನೂರು ಉತ್ಸವ-2026ರ ಪೂರ್ವ ತಯಾರಿ ಚಟುವಟಿಕೆಗಳ ಕುರಿತು ಚರ್ಚಿಸಲು ಆಯೋಜಿಸಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಳೆದ ಬಾರಿ ಸರ್ಕಾರದಿಂದ 15 ಲಕ್ಷ ಮಾತ್ರ ಬೂದನೂರು ಉತ್ಸವಕ್ಕೆ ಬಿಡುಗಡೆ ಮಾಡಲಾಗಿತ್ತು. ಯಾರಿಂದಲೂ ಹಣ ಕೇಳದೆ ಸುಮಾರು 1 ಕೋಟಿ ವೆಚ್ಚದಲ್ಲಿ ಕಳೆದ ಬಾರಿ ಬುದನೂರು ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗಿತ್ತು ಎಂದು ಹೇಳಿದರು. ಸ್ಥಳೀಯ ಗ್ರಾಮಸ್ಥರ, ಸಾರ್ವಜನಿಕರ ಸಹಕಾರದಿಂದ ಈ ಬಾರಿಯ ಬುದನೂರು ಉತ್ಸವವನ್ನು ವಿಜೃಂಭಣೆಯಿಂದ ಆಚರಿಸೋಣ. ಪ್ರವಾಸಿಗರನ್ನು ಹಾಗೂ ಸ್ಥಳೀಯರಿಗಾಗಿ ಸದರಿ ವರ್ಷದ ಉತ್ಸವದಲ್ಲಿ ಫೆಬ್ರವರಿ 20ರಿಂದ 3 ದಿನ ರಿಯಾಯಿತಿ ದರದಲ್ಲಿ 'ಹೆಲಿ ಟೂರಿಸಂ' ಆಯೋಜನೆ ಮಾಡಲಾಗುತ್ತದೆ ಎಂದರು.


ಉದಯವಾಹಿನಿ ಚಿತ್ರ

**ಅನಂತ ಪದ್ಮನಾಭ ದೇಗುಲ:** ಕೇರಳದಲ್ಲಿ ಬಿಟ್ಟರೆ ಅನಂತಪದ್ಮನಾಭ ದೇವಾಲಯ ಇರುವುದು ಮಂಡ್ಯ ಜಿಲ್ಲೆಯ ಬೂದನೂರಿನಲ್ಲಿ ಮಾತ್ರ. ಇದು ನಮ್ಮ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ. ಬೂದನೂರು ಉತ್ಸವಕ್ಕೆ ಬರಲು ಸಾರ್ವಜನಿಕರಿಗೆ ವಾಹನಗಳ ಸೌಲಭ್ಯ, ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ವಿವಿಧ ಕಲಾತಂಡಗಳೊಂದಿಗೆ ಹಳೆ ಬೂದನೂರಿನಿಂದ ಮೆರವಣಿಗೆ ಪ್ರಾರಂಭವಾಗಲಿದೆ. ಸ್ಥಳೀಯರು ಸಹಕರಿಸಿದರೆ 37 ಪೂಜಾ ಕುಣಿತ ತಂಡಗಳನ್ನು ಮೆರವಣಿಗೆಯಲ್ಲಿ ಆಯೋಜಿಸಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಗುವುದು. ಆಹಾರ ಮೇಳವನ್ನು ಸಹ ನಡೆಸಲಾಗುವುದು ಎಂದು ತಿಳಿಸಿದರು. ಮಹಾತ್ಮ ಗಾಂಧಿ ಅವರು ಹುತಾತ್ಮರಾದ ದಿನದ ಅಂಗವಾಗಿ ಎಲ್ಲಾ ಅಧಿಕಾರಿಗಳು ಎರಡು ನಿಮಿಷ ಮೌನಾಚರಣೆ ಮಾಡಿದರು.

**ರಂಗೋಲಿ ಚಿತ್ರಕಲೆ ಸ್ಪರ್ಧೆ:** ಕಸಬಾ ಹೋಬಳಿ ಪ್ರತಿ ಮನೆಯಿಂದ ರಂಗೋಲಿ ಸ್ಪರ್ಧೆ ಆಯೋಜಿಸಲಾಗುವುದು ವಿಜೇತರಾದ ಮೂವರಿಗೆ ನಗದು ಬಹುಮಾನ ನೀಡಲಾಗುವುದು. ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳಿಗೆ ವೈಯಕ್ತಿಕವಾಗಿ ನನ್ನ ಕಡೆಯಿಂದ ವಿಶೇಷ ಉಡುಗೊರೆ ನೀಡಲಾಗುವುದು. ಹಗ್ಗ-ಜಗ್ಗಾಟ ಕಬಡ್ಡಿ, ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ಆಯೋಜಿಸಲಾಗುವುದು ಎಂದು ಶಾಸಕ ಪಿ. ರವಿಕುಮಾರ್ ತಿಳಿಸಿದರು.

# ಅಕ್ರಮ ಖಾತೆ ಮಾಡಿ ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟ

### ● ಆಶ್ರಯ ಯೋಜನೆ ಜಮೀನು : ಖಾಸಗಿ ವ್ಯಕ್ತಿಗಳ ಹೆಸರಿಗೆ ಖಾತೆ ಮಾಡಿದ ಅಧಿಕಾರಿಗಳ ವಿರುದ್ಧ ದೂರು ದಾಖಲು

• ಉದಯವಾಹಿನಿ, ರಾಮನಗರ

ಆಶ್ರಯ ಯೋಜನೆಯಡಿ ಬಡವರಿಗೆ ಹಂಚಲು ಸರ್ಕಾರವು ಕನಕಪುರ ತಹಶೀಲ್ದಾರವರ ಹೆಸರಿನಲ್ಲಿ ಖರೀದಿಸಿದ್ದ ಕನಕಪುರ ತಾಲ್ಲೂಕಿನ ಕಸಬಾ ಹೋಬಳಿಯ ಶಿವನಹಳ್ಳಿ ಗ್ರಾಮದ ಸರ್ವೇ ನಂಬರ್ 382/2 ರ 02 ಎಕರೆ 37 ಗುಂಟೆ ಜಮೀನನ್ನು ಕಾಳಮಾದಯ್ಯ ಅವರ ಹೆಸರಿಗೆ ತಮ್ಮ ಸ್ವಂತ ಲಾಭಕ್ಕಾಗಿ ಕಾನೂನು ಬಾಹಿರವಾಗಿ ಖಾತೆ ಮಾಡಿದ ಕಸಬಾ ಹೋಬಳ್ಳಿಯ ರಾಜಸ್ವ ನಿರೀಕ್ಷಕ (ಆರ್.ಐ) ತಂಗರಾಜು ಹಾಗೂ ಶಿವನಹಳ್ಳಿ ವೃತ್ತದ ಗ್ರಾಮ ಆಡಳಿತಾಧಿಕಾರಿ (ವಿ.ಎ.ಒ) ಚಂದ್ರೇಗೌಡ ರವರ ವಿರುದ್ಧ ಲೋಕಾಯುಕ್ತ ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ನಿರೀಕ್ಷಕರಾದ ಸಂದೀಪ್ ಕುಮಾರ್ ಅವರು ಪ್ರಥಮ ವರ್ತಮಾನ ವರದಿ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಕಸಬಾ ಹೋಬಳಿಯ ಶಿವನಹಳ್ಳಿ ಗ್ರಾಮದ ಸರ್ವೇ ನಂಬರ್ 383/2 ರಲ್ಲಿ 02 ಎಕರೆ 37 ಗುಂಟೆ ಜಮೀನನ್ನು ಗೂಳಯ್ಯ, ಕಾಳಮಾದಯ್ಯ ರವರಿಂದ ದಿನಾಂಕ: 10.08.1992ರಂದು ಕನಕಪುರ ತಾಲ್ಲೂಕು ತಹಶೀಲ್ದಾರ್‌ರವರು 95,000 ರೂ.ಗಳಿಗೆ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ. ಜಮೀನನ್ನು ಆಶ್ರಯ ಯೋಜನೆಯಡಿ ಬಡವರಿಗೆ ಹಂಚಲು ಸರ್ಕಾರವು ತಹಶೀಲ್ದಾರ್ ರವರ ಹೆಸರಿನಲ್ಲಿ ಖರೀದಿ ಮಾಡಿರುತ್ತದೆ. ನಂತರ ದಿನಾಂಕ: 26.02.1997 ರಂದು ಕನಕಪುರ ತಾಲ್ಲೂಕು ತಹಶೀಲ್ದಾರ್ ಮತ್ತು ಕನಕಪುರ ಪುರಸಭೆ ಮುಖ್ಯಾಧಿಕಾರಿ/ಆಯುಕ್ತರು ಫಲಾನುಭವಿಗಳಿಗೆ ಈ ಜಮೀನಿನಲ್ಲಿ ನಿವೇಶನಗಳನ್ನು ಹಂಚಿರುತ್ತಾರೆ. ಸದರಿ ಜಮೀನನ್ನು ಕನಕಪುರ ತಹಶೀಲ್ದಾರ್ ಹೆಸರಿನಲ್ಲಿ ಖರೀದಿಸಿದ ನಂತರ ಪಹಣಿಯಲ್ಲಿ ಖಾತೆಯಾಗಿರುವುದಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡು ಜಮೀನನ್ನು ಸರ್ಕಾರಕ್ಕೆ ಮಾರಿದ ಮಾಲೀಕರಾದ ಕಾಳಮಾದಯ್ಯ ಮತ್ತು ಲಕ್ಷಮ್ಮ ಅವರಿಗೆ ಕನಕಪುರ ತಾಲ್ಲೂಕು ಕಸಬಾ ಹೋಬಳಿಯ ರಾಜಸ್ವ ನಿರೀಕ್ಷಕರಾದ ತಂಗರಾಜು ಮತ್ತು ಶಿವನಹಳ್ಳಿ ವೃತ್ತದ ಗ್ರಾಮ ಆಡಳಿತಾಧಿಕಾರಿಯಾದ ಚಂದ್ರೇಗೌಡ ಅವರು, ತಮ್ಮ ಸ್ವಂತ ಲಾಭಕ್ಕಾಗಿ ಈ ಜಮೀನು ಸರ್ಕಾರಿ ಜಮೀನು ಹಾಗೂ ಆಶ್ರಯ ಯೋಜನೆಯಡಿ ಫಲಾನುಭವಿಗಳಿಗೆ ಹಂಚಿಕೆಯಾಗಿರುವ ಜಮೀನು ಎಂದು ತಿಳಿದಿದ್ದರೂ ಸಹ, ಸದರಿ 02.37 ಎ/ಗು ಜಮೀನನ್ನು ಎಂಆರ್ ನಂಬರ್ 94ರಲ್ಲಿ 01-31.01.2023 ರಂದು 03.06 ಎ/ಗು ಎಂದು ಪೌತಿ ಖಾತೆ ಮಾಡಿದ್ದು, ನಂತರ ಎಂ.ಆರ್. ನಂ ಹೆಚ್ 64ರಲ್ಲಿ ದಿನಾಂಕ: 27.09.2023 ರಂದು ಸದರಿ ಜಮೀನನ್ನು ವಿಭಾಗ ಮಾಡಿ ಕಾಳಮಾದಯ್ಯ ಅವರ ಹೆಸರಿಗೆ ಸದರಿ ಆರ್‌ಐ, ವಿಎಗಳು ಕಾನೂನು ಬಾಹಿರವಾಗಿ ಖಾತೆ ಮಾಡಿರುತ್ತಾರೆ. ಇದರಿಂದಾಗಿ ಸರ್ಕಾರಕ್ಕೆ ಮತ್ತು ಫಲಾನುಭವಿಗಳಿಗೆ ಮೋಸವಾಗಿದ್ದು, ಸದರಿ 02 ಎಕರೆ 37 ಗುಂಟೆ ಜಮೀನಿನ ಪ್ರಸ್ತುತ ಎಸ್‌ಆರ್ ಮೌಲ್ಯ (ಸಬ್-ರಿಜಿಸ್ಟರ್ ವ್ಯಾಲ್ಯೂ) 3,15,90,000 ರೂ.ಗಳಿದ್ದು ಮಾರುಕಟ್ಟೆ ಮೌಲ್ಯವು ಇನ್ನು ಹೆಚ್ಚಿದ್ದು, 03 ಎಕರೆ 06 ಗುಂಟೆ ಜಮೀನಿಗೆ ಎಸ್ ಆರ್ ಮೌಲ್ಯವು 3,40,20,000 ಆಗಿದ್ದು, ಮಾರುಕಟ್ಟೆ ಮೌಲ್ಯವು ಇನ್ನೂ ಹೆಚ್ಚಿದೆ. ಈ ಸರ್ಕಾರಿ ನೌಕರರಿಬ್ಬರು ಕಾನೂನು ಬಾಹಿರವಾಗಿ ಸದರಿ ಜಮೀನಿಗೆ ಅಕ್ರಮ ಖಾತೆ ಮಾಡಿ ಸರ್ಕಾರಕ್ಕೆ ಕೋಟ್ಯಾಂತರ ರೂ. ನಷ್ಟವುಂಟು ಮಾಡಿ ಫಲಾನುಭವಿಗಳಿಗೆ ಮೋಸ ಮಾಡಿರುತ್ತಾರೆ. ಕನಕಪುರ ತಾಲ್ಲೂಕು ಕಸಬಾ ಹೋಬಳಿಯ ರಾಜಸ್ವ ನಿರೀಕ್ಷಕರಾದ ತಂಗರಾಜು ಮತ್ತು ಶಿವನಹಳ್ಳಿ ವೃತ್ತದ ಗ್ರಾಮ ಆಡಳಿತಾಧಿಕಾರಿಯಾದ ಚಂದ್ರೇಗೌಡ ಮತ್ತು ಸದರಿ ಜಮೀನು ಈಗಾಗಲೇ ಮಾರಾಟವಾಗಿದ್ದರೂ, ಸದರಿ ಜಮೀನಿನ ಖಾತೆ ಮಾಡಿಸಿಕೊಂಡ ಕುರುಪೇಟೆ ಗ್ರಾಮದವರಾದ ಕಾಳಮಾದಯ್ಯ, ಲಕ್ಷಮ್ಮ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಜಗದೀಶ್ ಎಸ್.ಕೆ. ಎಂಬುವರು ದೂರು ನೀಡಿದ್ದರು. ಸದರಿ ದೂರಿನಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನಲೆಯಲ್ಲಿ ದೂರು ಅರ್ಜಿಯ ಹೆಚ್ಚಿನ ವಿಚಾರಣೆ ಅವಶ್ಯಕತೆ ಇರುವುದರಿಂದ ದೂರು ಅರ್ಜಿಯಲ್ಲಿನ ಎದುರುದಾರರ ವಿರುದ್ಧ ಆರೋಪಗಳ ಕುರಿತಾಗಿ ವಿಚಾರಣೆ/ತನಿಖೆ ಕೈಗೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ-2018) ಕಲಂ 17(ಎ) ಅಡಿಯಲ್ಲಿ ಪೂರ್ವಾನುಮತಿ ದೊರಕಿಸಿಕೊಡಬೇಕೆಂದು ಶಿಫಾರಸ್ಸು ಮಾಡಿದನ್ವಯ ಕರ್ನಾಟಕ ಲೋಕಾಯುಕ್ತದ ಅಪರ ಪೊಲೀಸ್ ಮಹಾನಿರ್ದೇಶಕರು ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿಗಳು ಸದರಿ ಆರ್‌ಐ ಹಾಗೂ ವಿಎ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ಪೂರ್ವಾನುಮತಿಯನ್ನು ನೀಡಿರುತ್ತಾರೆ. ಆ ಅನುಮತಿಯಂತೆ ಕರ್ನಾಟಕ ಲೋಕಾಯುಕ್ತದ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಇನ್ಸ್‌ಪೆಕ್ಟರ್ ಕುಮಾರ್ ಎಂ. ರವರು ಪ್ರಾಥಮಿಕ ವಿಚಾರಣೆಯನ್ನು ನಡೆಸಿ ಗ್ರಾಮ ಆಡಳಿತಾಧಿಕಾರಿ ಚಂದ್ರೇಗೌಡ, ಶ್ರೀರಾಜಸ್ವ ನಿರೀಕ್ಷಕ ತಂಗರಾಜು ಮತ್ತು ಖಾಸಗಿ ವ್ಯಕ್ತಿಗಳಾದ ಕನಕಪುರ ಟೌನಿನ ಕುರುಪೇಟೆಯ ಕಾಳಮಾದಯ್ಯ, ಲಕ್ಷ್ಮಮ್ಮ ಅವರುಗಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬಂದಿರುವುದಾಗಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲು ಅನುಮತಿ ನೀಡುವಂತೆ ಪ್ರಾಥಮಿಕ ವಿಚಾರಣಾ ವರದಿಯನ್ನು ಕರ್ನಾಟಕ ಲೋಕಾಯುಕ್ತದ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸಲ್ಲಿಸಿದ್ದರು.



ಕಾನೂನು ಕ್ರಮ ಜರುಗಿಸಿ

**ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಸೂಚನೆ**

**ಸದರಿಯವರ ವರದಿಯನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತದ ಅಪರ ಪೊಲೀಸ್ ಮಹಾನಿರ್ದೇಶಕರಿಗೆ ಸಲ್ಲಿಸಿದ್ದರು. ಕರ್ನಾಟಕ ಲೋಕಾಯುಕ್ತ ಪೊಲೀಸ್ ಮಹಾನಿರೀಕ್ಷಕರವರ ಪ್ರಾಥಮಿಕ ವಿಚಾರಣೆಯಲ್ಲಿ ಆರೋಪಗಳು ಧೃಢಪಟ್ಟ ಹಿನ್ನೆಲೆ ಸದರಿ ಸರ್ಕಾರಿ ನೌಕರರು ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ಆರೋಪಗಳ ಕುರಿತಾಗಿ ಭ್ರಷ್ಟಚಾರ ಪ್ರತಿಬಂಧಕ ಕಾಯ್ದೆ 1988 (ತಿದ್ದುಪಡಿ ಕಾಯ್ದೆ-2018) ಕಲಂ 13(1)(ಎ) ಜೊತೆಗೆ 13(2) ಹಾಗೂ 406, 420 ಜೊತೆಗೆ 120 (ಬಿ) ಐಪಿಸಿ ಅನ್ವಯ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಳ್ಳಲು ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ಸೂಚಿಸಿದ್ದರು.**

**ಲಂಚ ಪ್ರಕರಣವೊಂದರಲ್ಲಿ ಭಾಗಿ**

**ಅದರಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ಅಧೀಕ್ಷಕರ ಪತ್ರದಂತೆ ಬೆಂಗಳೂರು ದಕ್ಷಿಣ ಜಿಲ್ಲಾ ಲೋಕಾಯುಕ್ತ ಪೊಲೀಸ್ ನಿರೀಕ್ಷಕರು ಸದರಿ ಸರ್ಕಾರಿ ನೌಕರರಾದ ಆರ್‌ಐ ಮತ್ತು ವಿಎ ಹಾಗೂ ಖಾಸಗಿ ವ್ಯಕ್ತಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿ ದಾಖಲಿಸಿ ತನಿಖೆ ಕೈಗೊಂಡಿರುತ್ತಾರೆ. ಸದರಿ ನೌಕರರು ಈಗಾಗಲೇ ಲಂಚ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ ಹಿನ್ನೆಲೆ ಅಮಾನತುಗೊಂಡಿರುತ್ತಾರೆ.**

ಅಂತರಾಳದಿಂದ... EDITORIAL

# ಮುಡಾ: ಮುಖ್ಯಮಂತ್ರಿಗೆ ನಿರಾಳ; ಪ್ರಾಧಿಕಾರದ ಕಳಂಕ ಉಳಿದೇ ಇದೆ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಅಕ್ರಮವಾಗಿ ನಿವೇಶನ ಪಡೆದಿದ್ದಾರೆಂದು ಆರೋಪಿಸಲಾದ ಪ್ರಕರಣದಲ್ಲಿ 'ಕ್ಲೀನ್ ಚಿಟ್' ದೊರೆತಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರಾಳಭಾವ ಉಂಟುಮಾಡುವಂತಹ ಬೆಳವಣಿಗೆ. ಸಿದ್ದರಾಮಯ್ಯ ಮತ್ತು ಅವರ ಪತ್ನಿ ಬಿ.ಎಂ. ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಾನ್ಯ ಮಾಡಿದೆ. ಹೀಗಾಗಿ, ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಸದ್ಯಕ್ಕೆ ನಿರಾಳರಾದಂತಾಗಿದೆ. ಮುಖ್ಯಮಂತ್ರಿ ಪಾಲಿಗೆ ಕಾನೂನು ಹೋರಾಟಕ್ಕೆ ಸಂಬಂಧಿಸಿದಂತೆ ಮಾತ್ರವಲ್ಲದೆ ರಾಜಕೀಯವಾಗಿ ಕೂಡ ಈ ವಿದ್ಯಮಾನ ಮಹತ್ವದ್ದಾಗಿದೆ. ನಾಯಕತ್ವ ಬದಲಾವಣೆಗೆ ಸಂಬಂಧಿಸಿದ ಊಹಾಪೋಹಗಳು ಚಾಲ್ತಿಯಲ್ಲಿರುವ ಸಂದರ್ಭದಲ್ಲಿ, ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ವರದಿಯನ್ನು ನ್ಯಾಯಾಲಯ ಒಪ್ಪಿಕೊಂಡಿರುವುದು ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಿದಂತಾಗಿದೆ. ಒಂದುವೇಳೆ, ಈ ವರದಿಯನ್ನು ನ್ಯಾಯಾಲಯ ಒಪ್ಪಿಕೊಳ್ಳದೆ ಹೋಗಿದ್ದಲ್ಲಿ ಸರ್ಕಾರ ಹಾಗೂ ಪಕ್ಷದಲ್ಲಿ ಅವರ ಸ್ಥಾನ ಅತಂತ್ರವಾಗುವ ಸಾಧ್ಯತೆಯಿತ್ತು. ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸುತ್ತಿದ್ದ ವಿರೋಧ ಪಕ್ಷದ ಆಗ್ರಹವನ್ನೂ ನ್ಯಾಯಾಲಯದ ಆದೇಶ ದುರ್ಬಲಗೊಳಿಸಿದೆ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮೇಲಿನ ಸಿದ್ದರಾಮಯ್ಯನವರ ಹಿಡಿತವನ್ನು ಮತ್ತಷ್ಟು ಬಲಪಡಿಸಿದೆ.



**ಮುಡಾ ಹಗರಣದ ಆರೋಪಗಳಿಂದ ಹೊರಬಂದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ಶಕ್ತಿ ತುಂಬಲಿದೆ. ಆದರೆ, ಪ್ರಾಧಿಕಾರದ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಶ್ನೆಗಳು ಮುಂದುವರಿದೇ ಇವೆ.**

ಸುಮಾರು ನಾಲ್ಕು ದಶಕಗಳ ಅವಧಿಯ ತಮ್ಮ ಕಳಂಕರಹಿತ ರಾಜಕೀಯ ಪಯಣದ ಬಗ್ಗೆ ಹೆಮ್ಮೆ ಪಡುತ್ತಿದ್ದ ಮುಖ್ಯಮಂತ್ರಿ ಅವರ ಸಾರ್ವಜನಿಕ ಜೀವನದ ವರ್ಚಸ್ಸನ್ನು ಅಕ್ರಮ ನಿವೇಶನ ಪಡೆದಿರುವ ಆರೋಪಗಳು ಮಬ್ಬಾಗಿಸಿದ್ದವು.

ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಮುಡಾ 14 ಪರಿಹಾರ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದೆ ಎನ್ನುವ ಆರೋಪ ಮುಖ್ಯಮಂತ್ರಿ ಅವರ ರಾಜಕೀಯ ವಿರೋಧಿಗಳಿಗೆ ಆಯುಧವಾಗಿ ಪರಿಣಮಿಸಿತ್ತು. ಮುಖ್ಯಮಂತ್ರಿ ಪತ್ನಿ ನಿವೇಶನಗಳನ್ನು ಹಿಂದಿರುಗಿಸಿದರೂ, ಕಾನೂನು ಪ್ರಕ್ರಿಯೆ ಮುಂದುವರಿದಿತ್ತು. ಪ್ರಸ್ತುತ ನ್ಯಾಯಾಲಯ ನೀಡಿರುವ ಕಾನೂನು ಪರಿಭಾಷೆಯಲ್ಲಿನ ಕ್ಲೀನ್ ಚಿಟ್, ವಿಚಾರಣೆಗೆ ಅಗತ್ಯವಾದ ಪುರಾವೆಗಳು ಇಲ್ಲದಿರುವುದರಿಂದ ಸಿದ್ದರಾಮಯ್ಯ ಸೇರಿದಂತೆ ಎಲ್ಲಾ ಆರೋಪಿಗಳನ್ನೂ ಕ್ರಿಮಿನಲ್ ಹೊಣೆಗಾರಿಕೆಯಿಂದ ಮುಕ್ತಗೊಳಿಸಿದೆ. ಮುಖ್ಯಮಂತ್ರಿಗೆ ದೊರೆತಿರುವ ಈ ನಿರಾಳಭಾವದ ಹಾದಿ, ಸಾಂವಿಧಾನಿಕ ಹಾಗೂ ಕಾನೂನು ನಡುವಿನ ಸಂಘರ್ಷದಿಂದ ಕೂಡಿತ್ತು. ಈ ಸಂಘರ್ಷ, ಸಿದ್ದರಾಮಯ್ಯನವರ ವಿರುದ್ಧದ ಆರೋಪಗಳ ವಿಚಾರಣೆಗೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು 2024ರಲ್ಲಿ ಅನುಮತಿ ನೀಡುವುದರೊಂದಿಗೆ ಆರಂಭವಾಗಿತ್ತು. ರಾಜ್ಯಪಾಲರ ತೀರ್ಮಾನವನ್ನು ಸರ್ಕಾರ ಅಸ್ಥಿರಗೊಳಿಸುವ ಪ್ರಯತ್ನ ಎಂದು ಕಾಂಗ್ರೆಸ್ ಟೀಕಿಸಿತ್ತು. ಹೈಕೋರ್ಟ್ ಏಕಸದಸ್ಯ ಪೀಠ ರಾಜ್ಯಪಾಲರ ನಿರ್ಧಾರವನ್ನು ಎತ್ತಿಹಿಡಿದರೂ, ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಜಾರಿ ನಿರ್ದೇಶನಾಲಯ (ಇಡಿ) ನೀಡಿದ್ದ ನೋಟಿಸ್‌ಗಳಿಗೆ ತಡೆನೀಡಿತ್ತು. ಸುಪ್ರೀಂ ಕೋರ್ಟ್ ಕೂಡ ಇಡಿ ಮೇಲ್ಮನವಿಯನ್ನು ತಳ್ಳಿಹಾಕಿತ್ತು. ಪ್ರಸ್ತುತ ನ್ಯಾಯಾಲಯ ಒಪ್ಪಿಕೊಂಡಿರುವ ಲೋಕಾಯುಕ್ತರ ವರದಿ, ಇಡೀ ಪ್ರಕ್ರಿಯೆಯನ್ನು ರಾಜಕೀಯ ಪ್ರೇರಿತ ಎಂದು ವಾದಿಸಲು ಕಾಂಗ್ರೆಸ್‌ಗೆ ಅವಕಾಶ ಮಾಡಿಕೊಟ್ಟಿದೆ. ಲೋಕಾಯುಕ್ತರ 'ಬಿ' ರಿಪೋರ್ಟ್ ಅನ್ನು ನ್ಯಾಯಾಲಯ ಒಪ್ಪಿಕೊಂಡಿರುವುದರಿಂದಾಗಿ, ಮುಡಾ ಹಗರಣಗಳ ಪ್ರಕರಣ ಕೊನೆಗೊಂಡಿದೆ ಎಂದು ಹೇಳಲಾಗದು. 'ಬಿ' ರಿಪೋರ್ಟ್ ಪ್ರಶ್ನಿಸಿ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು ವಿಶೇಷ ನ್ಯಾಯಾಲಯ ತಿರಸ್ಕರಿಸಿರುವುದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸುವ ಇಂಗಿತವನ್ನು ದೂರುದಾರ ಸ್ನೇಹಮಯಿ ಕೃಷ್ಣ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮುಡಾದ ದೊಡ್ಡಮಟ್ಟದ ಅಕ್ರಮಗಳ ತನಿಖೆಯನ್ನು ಮುಂದುವರಿಸಬೇಕೆಂದು ವಿಶೇಷ ನ್ಯಾಯಾಲಯ ಆದೇಶಿಸಿದೆ. ಮುಡಾದ ಮಾಜಿ ಆಯುಕ್ತರನ್ನು ಜಾರಿ ನಿರ್ದೇಶನಾಲಯ ಈಗಾಗಲೇ ಬಂಧಿಸಿದ್ದು, 450 ಕೋಟಿಗೂ ಹೆಚ್ಚಿನ ಸ್ಥಿರಾಸ್ತಿ ವಶಪಡಿಸಿಕೊಂಡಿದೆ. ಹಾಗಾಗಿ, ಪ್ರಸಕ್ತ ಬೆಳವಣಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವೈಯಕ್ತಿಕ ಹಾಗೂ ರಾಜಕೀಯ ಗೆಲುವಷ್ಟೇ ಆಗಿದೆ. ಈ ಗೆಲುವಿನಿಂದಾಗಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಂಟಿಕೊಂಡಿರುವ ಕೊಳೆ ತೊಳೆದುಹೋಗದು. ಹಗರಣಗಳ ಬಗೆಗಿನ ತನಿಖೆಯನ್ನು ಸರ್ಕಾರ ಮುಂದುವರಿಸಬೇಕು. ಪಾರದರ್ಶಕ, ತ್ವರಿತ ತನಿಖೆಯ ಮೂಲಕ ಸಾರ್ವಜನಿಕ ವಿಶ್ವಾಸಕ್ಕೆ ಚ್ಯುತಿ ಆಗದಂತೆ ನಡೆದುಕೊಳ್ಳುವ ಜವಾಬ್ದಾರಿಯಿಂದ ಸರ್ಕಾರ ನುಣುಚಿಕೊಳ್ಳಬಾರದು.

# ರಾಮಾಯಣ

## ಹತನಾದ ವಾಲಿಯೆನ್ನು ನೋಡಲು ತಾರೆಯ ಆಗಮನ




• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ತಾರಾದೇವಿಯು ಅವರನ್ನು ಕುರಿತು ಎಲೈ ಪಿನಾಯಕರುಗಳಿರಾ, ನಿಮ್ಮ ಒಡೆಯನಾದ ವಾಲಿಯನ್ನು ಬಿಟ್ಟು ಓಡಿಬರಬಹುದೆ ? ಸುಗ್ರೀವನು ನಗೆ ಶತ್ರುವಾದ ವಾಲಿಯನ್ನು ಶ್ರೀರಾಮನಿಂದ ಬೀಳಿಸಿದ ಮಾತ್ರದಿಂದ ನಿಮಗಾದುದೇನು ಗ್ರೀವನಿಂದ ನಿವಂಗೆ ಭಯವೇನು? ಎಂದು ಕೇಳಿದಳು. ಆ ಮಾತನ್ನು ಕೇಳಿ ಕಾಮರೂಪಿಗಳಾದ ಆ ಕಪಿನಾಯಕರು ಕಾಲೋಚಿತವೂ ಹಿತವೂ ಆದ ಮಾತುಗಳಿಂದ ಆ ದೇವಿಯನ್ನು ಕುರಿತು ಹೀಗೆಂದರು: ತಾರಾದೇವಿ, ನೀನು ಬುದ್ಧಿವಂತಳಾದರೆ ನಿನ್ನ ಕುಮಾರನಾದ ಅಂಗದನನ್ನು ರಕ್ಷಿಸಿಕೊಂಡಿರು. ಸಾಕ್ಷಾತ್ ಯಮನೇ ಶ್ರೀರಾಮನ ರೂಪದಿಂದ ಬಂದು ವಾಲಿಯನ್ನು ಕೊಂದನು. ವಾಲಿಯು ಸುಗ್ರೀವನ ಸಂಗಡ ಯುದ್ಧವನ್ನು ಮಾಡುತ್ತ ಅನೇಕ ವೃಕ್ಷಗಳನ್ನೂ ಕಲ್ಲುಗಳನ್ನೂ ಎಸೆಯುತ್ತಿರುವ ಸಮಯದಲ್ಲಿ, ಶ್ರೀರಾಮನು ವಜ್ರಾಯುಧಕ್ಕೆ ಸಮಾನವಾದ ಬಾಣಗಳನ್ನು ಆತನ ಮೇಲೆ ಪ್ರಯೋಗಿಸಿದನು. ಅದರಿಂದ ವಾಲಿಯು ಗಾಯ ಪಡೆದು ಬಲ ಮುರಿದು ಬಿದ್ದನು. ದೇವೇಂದ್ರನಿಗೆ ಪರಾಕ್ರಮದಲ್ಲಿ ಸಮಾನನಾದ ವಾಲಿಯು ಬಿದ್ದಮೇಲೆ ಅಂಗದನನ್ನು ಕರೆದುಕೊಂಡು ಹೋಗುವುದು ಉಚಿತವಲ್ಲ. ನೀನು ಅಂಗವನನ್ನು ರಕ್ಷಿಸಿಕೊಂಡು ಆತನಿಗೆ ಪಟ್ಟಾಭಿಷೇಕವನ್ನು ಮಾಡು. ಆತನು ತನ್ನ ಸ್ವಸ್ಥಾನದಲ್ಲಿದ್ದರೆ ನಾವೆಲ್ಲರೂ ಸೇವೆಯನ್ನು ಮಾಡಿಕೊಂಡಿರುವೆವು. ಅಲ್ಲದ ಪಕ್ಷದಲ್ಲಿ ಈಗಲೇ ಅಲ್ಲಲ್ಲಿ ಬೆಟ್ಟಗಳನ್ನು ಸೇರಿಕೊಳ್ಳುವೆವು. ಸುಗ್ರೀವನ ಕಡೆಯವರಿಗೆ ನಾವು ಈ ಒಂದೆ ಅಪಕಾರ ಮಾಡಿದ್ದೇವೆ. ಅವರಲ್ಲಿ ಕೆಲವರಿಗೆ ಭಾರ್ಯೆಯರಿದ್ದಾರೆ. ಕೆಲವರಿಗೆ ಇಲ್ಲ. ಅದರಿಂದ ನಮಗೆ ಭಯವುಂಟು. ನಾವು ಶ್ರೀರಾಮನ ಬಲವನ್ನು ಕಂಡೂ ಇಲ್ಲಿರಲು ಅಂಜುತ್ತೇವೆ ಎಂದು ದೂರದಲ್ಲಿ ನಿಂತುಕೊಂಡು ನುಡಿದರು.

ತಾರಾದೇವಿಯು ಅವರನ್ನು ಕುರಿತು ಎಲ್ವೆ ಕಪಿಗಳೆ, ನನ್ನ ಪ್ರಾಣಕುಂಶನಾದ ವಾಲಿಯು ಹೋದ ಮಲೆ ನನಗೆ ಈ ರಾಜ್ಯದಿಂದಲಾದರೂ ನನ್ನ ಮಗನಾದ ಅಂಗದನಿ:ದಲಾದರೂ ಏನು ಕಾರ್ಯ ಕಡೆಗೆ ನನ್ನ ಶರೀರವಿದ್ದು ತಾನೇ ಏನು ಪ್ರಯೋಜನ ರಾಮಬಾಣದಿಂದ ಗಾಯ ಪಡೆದು ಬಿದ್ದ ವಾಲಿಯ ಸಮೀಪಕ್ಕೆ ಹೋಗಿ ಆತನ ಪಾದಗಳ ಮೇಲೆ ಬೀಳುವೆನು'' ಎಂದು ನುಡಿದಳು. ಅನಂತರ, ಅತ್ಯಂತ ಮಃಖಾಕ್ರಾಂತಳಾಗಿ ಕೈಗಳಿಂದ ಎದೆಯನ್ನೂ ಮುಖವನ್ನೂ ಚಚ್ಚಿಕೊಳ್ಳುತ್ತ ಓಡುತ್ತ ಹೋಗಿ ಯುದ್ಧರಂಗದಲ್ಲಿ ಹಿಮ್ಮುಟ್ಟದವನೂ ದಾನವರನ್ನು ಸಂಹರಿಸಿದವನೂ ದೇವೇಂದ್ರನು ಪಜ್ರಾಯುಧದ ಪೆಟ್ಟಿನಿಂದ ಸಮಸ್ತ ಪರ್ವತಗಳನ್ನೂ ಚೂರ್ಣ ಮಾಡುವಂತೆ ತನ್ನ ಮುಷ್ಟಿಯ ಪೆಟ್ಟಿನಿಂದ ಸಮಸ್ತ ಶತ್ರುಗಳನ್ನೂ ಜರ್ಝರಿತಮಾಡಿದವನೂ ಬಿರುಗಾಳಿಯಿಂದ ಮೇಘವು ಗುಡುಗುವಂತ ಆರ್ಭಟಿಸುತ್ತಿದ್ದ ವನೂ ಆದ ವಾಲಿಯು, ಸಿಂಹರಾಜನಿಂದ ಹತವಾದ ಇನ್ನೊಂದು ಸಿಂಹದಂತೆ ಮಹಾಬಲಪರಾಕ್ರಮಿಯಾದ ಶ್ರೀರಾಮನ ಬಾಣದಿಂದ ಗಾಯಪಡೆದು. ನೆಲದಮೇಲೆ ಬಿದ್ದಿರುವುದನ್ನು ಕಂಡಳು. ಸಮೀಪದಲ್ಲಿಯೇ ಧನುಸ್ಸನ್ನು ಊರಿಕೊಂಡು ನಿಂತಿದ್ದ ಶ್ರೀರಾಮನನ್ನೂ ಲಕ್ಷ್ಮಣನನ್ನೂ ತನ್ನ ಗಂಡನ ತಮ್ಮನಾದ ಸುಗ್ರೀವನನ್ನೂ ನೋಡಿದಳು. ಆದರೆಲ್ಲರನ್ನೂ ಲೆಕ್ಕಿಸದೆ ತಾರೆಯು ರಣರಂಗದಲ್ಲಿ ಹತನಾಗಿ ಮಲಗಿದ್ದ ವಾಲಿಯ ಬಳಿಗೆ ಹೋಗಿ ದುಃಖಾತಿಶಯದಿಂದ ಮೂರ್ಛೆಹೋದಳು. ಪುನಃ ಎಚ್ಚೆತ್ತು ಹಾ ಆರ್ಯಪುತ್ರ ಎಂದು ಗೋಳಾಡಲಾರಂಭಿಸಿದಳು. ಅಷ್ಟರಲ್ಲಿ ಅಂಗದನೂ ಆಲ್ಲಿಗೆ ಬಂದುದನ್ನು ನೋಡಿ ಸುಗ್ರೀವನ ಮನಸ್ಸು ಕರಗಿ ಅವನು ಅತ್ಯಂತ ವಿಷಣ್ಣನಾದನು.

ಮುಂದುವರಿಯುವುದು...

# ಯು ಕ್ಯಾನ್ ಹೀಲ್ ಯುವರ್ ಲೈಫ್



ಉದಯವಾಹಿನಿ ಚಿತ್ರ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಲೂಯಿಸ್ ಒಬ್ಬ ಅಮೇರಿಕನ್ ಮಹಿಳೆ. ಅವರ ಬಾಲ್ಯದಲ್ಲಿ ಅವರು 5-15 ನೇ ವಯಸ್ಸಿನಲ್ಲಿ ಸಾಕಷ್ಟು ದೈಹಿಕ ಕಿರುಕುಳಕ್ಕೆ ಒಳಗಾಗಿದ್ದರು. ಈ ಕಾರಣದಿಂದಾಗಿ, ಪ್ರಪಂಚದ ಬಗ್ಗೆ ಅವರ ದೃಷ್ಟಿಕೋನವು ತುಂಬಾ ನಕಾರಾತ್ಮಕವಾಗಿತ್ತು, ಇಡೀ ಪ್ರಪಂಚವು ಕೆಟ್ಟದಾಗಿದೆ. ಎಲ್ಲಾ ಪುರುಷರು ಕೊಳಕು ಮತ್ತು ನಾನು ಬದುಕಲು ಅರ್ಹಳಲ್ಲ ಎಂಬ ದ್ವೇಷ, ಕೀಳು ಭಾವನೆ ಆಕೆಯ ಮನಸ್ಸಿನಲ್ಲಿತ್ತು. ಕ್ರಿಶ್ಚಿಯನ್ ಧರ್ಮದ ಪ್ರಕಾರ ಅವರು ನನ್ ಆಗುತ್ತಾರೆ ಮತ್ತು ಅವರ ಧರ್ಮದ ಆಧ್ಯಾತ್ಮಿಕ ಪುಸ್ತಕಗಳನ್ನು ಓದುತ್ತಾರೆ. ನಂತರ, 40 ನೇ ವಯಸ್ಸಿನಲ್ಲಿ, ಅವರು ಕ್ಯಾನ್ಸರ್‌ಗೆ ಒಳಗಾದರು. ಅವರು ಈ ಬಗ್ಗೆ ಚಿಂತನೆ ಮಾಡಿದರು- ನನಗೆ ಅನ್ಯಾಯ ಮಾಡಿದವರು ಆರಾಮವಾಗಿದ್ದಾರೆ; ಅವರ ಜೀವನದಲ್ಲಿ ಏನೂ ಬದಲಾಗಿಲ್ಲ. ಅನ್ಯಾಯಕ್ಕೆ ಒಳಗಾದ ತಾನು ಮಾತ್ರ ಕ್ಯಾನ್ಸರ್‌ನಿಂದ ಬಳಲುತ್ತಿದ್ದೇನೆ. ಏಕೆಂದರೆ, ಇಷ್ಟು ವರ್ಷಗಳಿಂದ ನಾನು ಅವರೆಲ್ಲರ ಬಗ್ಗೆ ಎಲ್ಲಾ ನಕಾರಾತ್ಮಕ ಭಾವನೆಗಳನ್ನು (ಕೋಪ, ದ್ವೇಷ, ಅಸಹ್ಯ) ಇಟ್ಟುಕೊಂಡಿದ್ದೇನೆ. ನಾನು ಇದರಿಂದ ಹೊರಬರಲು ಬಯಸಿದರೆ, ಅವರೆಲ್ಲರನ್ನು ಕ್ಷಮಿಸುವುದು ಬಹಳ ಮುಖ್ಯ.

ಆದರೆ ನನಗೆ ಅನ್ಯಾಯ ಮಾಡಿದವರು ಕ್ಷಮಾರ್ಹರೆ? ನಮ್ಮ ದೃಷ್ಟಿಯಲ್ಲಿ ಖಂಡಿತವಾಗಿಯೂ ಅಲ್ಲ. ಆದರೆ 'ಲೂಯಿಸ್ ಹೇ' ತಮ್ಮ ಮನಸ್ಸನ್ನು ತೆರವುಗೊಳಿಸಿದಳು. ಆ ಎಲ್ಲಾ ಜನರ ಮೇಲಿನ ಕೋಪವನ್ನು ಅವನು ತೆಗೆದುಹಾಕಿದರು. ಎಲ್ಲರನ್ನು ಮನಃಪೂರ್ವಕವಾಗಿ ಕ್ಷಮಿಸಿ ಯಾವುದೇ ಆಪರೇಷನ್ ಇಲ್ಲದೆ ಸಂಪೂರ್ಣವಾಗಿ ಚೇತರಿಸಿಕೊಂಡಳು. ನಂತರ, ಅವರು 90 ನೇ ವರ್ಷದವರೆಗೆ ಉಪನ್ಯಾಸಗಳನ್ನು ನೀಡುತ್ತಾ ಪ್ರಪಂಚದಾದ್ಯಂತ ಪ್ರಯಾಣಿಸಿದರು.

ಯು ಕ್ಯಾನ್ ಹೀಲ್ ಯುವರ್ ಲೈಫ್ ಎಂಬ ಸುಂದರ ಪುಸ್ತಕವನ್ನು ಬರೆದಿದ್ದಾರೆ. ಆ ಪುಸ್ತಕದ ಕೊನೆಯ ಪುಟಗಳಲ್ಲಿ ಮೊದಲ ಅಂಕಣದಲ್ಲಿ ಅನಾರೋಗ್ಯ, ಎರಡನೇ ಅಂಕಣದಲ್ಲಿ ಅದರ ಹಿಂದಿರುವ ಋಣಾತ್ಮಕ ಭಾವನೆಗಳು, ಮೂರನೇ ಅಂಕಣದಲ್ಲಿ ಹೇಗೆ ಧನಾತ್ಮಕವಾಗಿ ಯೋಚಿಸಬೇಕು, ಆ ಮೂಲಕ ಕಾಯಿಲೆ ವಾಸಿಯಾಗುತ್ತದೆ ಎಂಬ ಚಾರ್ಟ್ ಅನ್ನು ಕೊಟ್ಟಿದ್ದಾರೆ. ನೆಗಡಿ ಕೆಮ್ಮಿನಿಂದ ಹಿಡಿದು ಕ್ಯಾನ್ಸರ್ ವರೆಗೆ ಇದು ಎಲ್ಲಾ ಕಾಯಿಲೆಗಳ ಹಿಂದೆ ನಕಾರಾತ್ಮಕ ಭಾವನೆಗಳನ್ನು ಒಳಗೊಂಡಿದೆ. ಈ ಚಾರ್ಟ್ ಖಂಡಿತವಾಗಿಯೂ ನಿಮ್ಮ ಮನಸ್ಸನ್ನು ಸ್ವಚ್ಛಗೊಳಿಸಲು ಮಾರ್ಗದರ್ಶಿಯಾಗಿದೆ. ಇನ್ನೊಂದು ಉದಾಹರಣೆ 'ಬ್ರಾಂಡನ್ ಬೇಜ್'. ಆಕೆಯ ಹೊಟ್ಟೆಯಲ್ಲಿ ಫುಟ್ಬಾಲ್ ಗಾತ್ರದ ಗಡ್ಡೆ ಇರುವುದು ಕಂಡು ಬಂತು. ಕೆಲ ದಿನಗಳಿಂದ ಹೊಟ್ಟೆ ದೊಡ್ಡದಾಗುತ್ತಿರುವ ಅನುಮಾನವಾಗಿ, ರೊಟೀನ್ ಚೆಕಪ್ ಗೆ ಸೋನೋಗ್ರಫಿ ಮಾಡಿದ್ದು, ಅವರ ಹೊಟ್ಟೆಯಲ್ಲಿ ಎಷ್ಟು ದೊಡ್ಡ ಗಡ್ಡೆಯನ್ನು ಕಂಡ ಡಾ. ಸ್ತ್ರೀರೋಗ ತಜ್ಞ ಹೌಹಾರಿದರು. ತಕ್ಷಣ ಅಡ್ಮಿಟ್ ಮಾಡಿ ನಾಳೆ ಸರ್ಜರಿ ಮಾಡಿ ತೆಗೆಯಿರಿ ಎಂದಳು. ಆದರೆ ಬ್ರಾಂಡನ್ ಬೇಜ್ ಮನಸ್ಸು-ಭಾವನೆ-ದೇಹದ ಸಂಬಂಧಗಳ ಬಗ್ಗೆ ಚೆನ್ನಾಗಿ ಅರಿವಿದ್ದವಳು. ನನಗೆ ಒಂದು ತಿಂಗಳ ಸಮಯ ಕೊಡಿ. ಉಪಯೋಗವಾಗದಿದ್ದರೆ ಆಪರೇಷನ್ ಮಾಡಿ ಎಂದಳು. ಒಂದು ತಿಂಗಳ ಕಾಲ ತನ್ನ ಮನಸ್ಸನ್ನು ಶುಚಿಗೊಳಿಸಿದರು ಮತ್ತು ಹಳೆಯ ಅನಗತ್ಯ ನೆನಪುಗಳನ್ನು ಅಗೆದು ಅವುಗಳನ್ನು ತ್ಯಜಿಸಿದರು. ಅವರು ತನ್ನೊಂದಿಗೆ ಅನ್ಯಾಯ ಮಾಡಿದ್ದ ಜನರನ್ನು ಕ್ಷಮಿಸಿದರು. ಒಂದು ತಿಂಗಳ ನಂತರ, ಸೋನೋಗ್ರಫಿಯಲ್ಲಿ ಗೆಡ್ಡೆಯ ಗಾತ್ರ ಅರ್ಧದಷ್ಟು ಚಿಕ್ಕದಾಗಿತ್ತು ಮತ್ತು ಮುಂದಿನ ಮೂರು ತಿಂಗಳಲ್ಲಿ, ಸೋನೋಗ್ರಫಿ ಸಾಮಾನ್ಯ ಸ್ಥಿತಿಗೆ ಮರಳಿತು. 'ದಿ ಜರ್ನಿ' ಎಂಬ ಪುಸ್ತಕವನ್ನು ಅವರು ಬರೆದಿದ್ದಾರೆ, ಇದರಿಂದ ಇತರರು ಪ್ರಯೋಜನ ಪಡೆಯುತ್ತಾರೆ. ಅಲ್ಲದೆ, ಈ ವಿಧಾನದ ಮೂರು ದಿನಗಳ ಬೋಧನಾ ಕೋರ್ಸ್ ಕೂಡ ಆರಂಭಿಸಲಾಗಿದೆ. ಆ ಕೋರ್ಸ್ ಅನೇಕರಿಗೆ ತುಂಬಾ ಉಪಯುಕ್ತವಾಗಿತ್ತು. ಹಾಗೆಯೇ ನಮ್ಮ ದೇಶದಲ್ಲಿ ಡಾ. ದೀಪಕ್ ಚೋಪ್ರಾ ಅವರು ಪ್ರಖ್ಯಾತ ಅಂತಃಸ್ರಾವಶಾಸ್ತ್ರಜ್ಞರಾಗಿದ್ದು, ಅಮೆರಿಕದ ಪ್ರಸಿದ್ಧ ಆಸ್ಪತ್ರೆಯೊಂದರಲ್ಲಿ ಪ್ರಮುಖ ಹುದ್ದೆಯಲ್ಲಿದ್ದಾರೆ. ನಾನು ಪೂರ್ಣ ಹೃದಯದಿಂದ ಕ್ಯಾನ್ಸರ್ ಗೆಡ್ಡೆಗಳನ್ನು ಮೂಲದಿಂದ ಕತ್ತರಿಸಿದ್ದೇನೆ ಎಂದು ಅವರು ಹೇಳುತ್ತಿದ್ದರು, ಆದ್ದರಿಂದ, ಆದರ್ಶಪ್ರಾಯವಾಗಿ ಅದು ಮರುಕಳಿಸಬಾರದು. ವಾಸ್ತವವಾಗಿ, ಇದು ಮತ್ತೆ ಸಂಭವಿಸಬಾರದು. ಇಂಥ ರೋಗಗಳು ಮತ್ತೆ ಏಕೆ ಮರುಕಳಿಸುತ್ತವೆ?

ಅವರು ಇದನ್ನು ಶೋಧಿಸಲು ಪ್ರಾರಂಭಿಸಿದಾಗ, ಕೆಲವು ಮಹತ್ವದ ಅಂಶಗಳನ್ನು ಅವರು ಅರಿತುಕೊಂಡರು. ಮುಲಾಮು ಹಚ್ಚಿದರೆ ಗಾಯ ಬೇಗ ಗುಣವಾಗುತ್ತದೆ. ಆದರೆ ಅದನ್ನು ಹಚ್ಚದಿದ್ದರೂ, ಗಾಯವು ವಾಸಿಯಾಗುತ್ತದೆ. ಈ ಗಾಯವನ್ನು ಯಾರು ಗುಣಪಡಿಸುತ್ತಾರೆ? ನಿಮ್ಮದೇ ದೇಹ. ಗಾಯದ ಬಳಿ ಇರುವ ತಾಯಿ ಕೋಶಗಳಿಂದ ಮಗು ಜೀವಕೋಶಗಳು ರೂಪುಗೊಳ್ಳುತ್ತವೆ ಮತ್ತು ಗಾಯವು ವಾಸಿಯಾಗುತ್ತದೆ. ಸಾಮಾನ್ಯವಾಗಿ, ಮಗುವಿನ ಸಂಸ್ಕೃತಿ ಮತ್ತು ಮನಸ್ಥಿತಿಯು ತಾಯಿಯಂತೆ ಇರುತ್ತದೆ. ನಮ್ಮ ನಕಾರಾತ್ಮಕ ಭಾವನೆಗಳು ವಿವಿಧ ಕೋಶಗಳಲ್ಲಿ ಸಂಗ್ರಹವಾಗುತ್ತವೆ. ಆದ್ದರಿಂದ ಗಡ್ಡೆಯನ್ನು ಕತ್ತರಿಸಿದಾಗಲೂ ಅಲ್ಲಿ ಗಾಯವಾಗಿರುತ್ತದೆ. ಅದನ್ನು ವಾಸಿಮಾಡುವ ಕೆಲಸವನ್ನು ಮಾತೃಕೋಶಗಳು ಮಾಡುತ್ತವೆ. ಆದರೆ ಅವುಗಳಲ್ಲಿ ನಕಾರಾತ್ಮಕ ಭಾವನೆಗಳು ಸಂಗ್ರಹವಾಗಿದ್ದರೆ, ಹೊಸ ಜೀವಕೋಶಗಳು ಮತ್ತೆ ಮುಂಚಿನಂತೆಯೆ (ಗಡ್ಡೆಯಂತೆ) ಆಗಿರುತ್ತವೆ. ಗಡ್ಡೆಗಳು ಮತ್ತೆ ಬೆಳೆಯುತ್ತವೆ. ಅನಾರೋಗ್ಯದ ಕಾರಣವನ್ನು ಮೂಲ ಸಮೇತ ತೆಗೆಯುವುದು ಅನಿವಾರ್ಯವಾಗಿದೆ. ಅವರು ಇದನ್ನು ಅರಿತುಕೊಂಡಾಗ, ಅವರು ವೈದ್ಯಕೀಯ ಅಭ್ಯಾಸವನ್ನು ನಿಲ್ಲಿಸಿದರು ಮತ್ತು ಈಗ ಅವರು ಸಂಪೂರ್ಣವಾಗಿ ಸೆಲ್ಯುಲಾರ್ ಹೀಲಿಂಗ್‌ನಲ್ಲಿ ಕೆಲಸ ಮಾಡುತ್ತಾರೆ. ಅಂದರೆ, ಪ್ರತಿಯೊಬ್ಬ ವ್ಯಕ್ತಿಗೆ ಮನಸ್ಸನ್ನು ಶುದ್ಧೀಕರಿಸಲು ಕಲಿಸಲಾಗುತ್ತದೆ.

ಆದ್ದರಿಂದ, ನಾವೆಲ್ಲರೂ ದಿನಕ್ಕೆ 15 ನಿಮಿಷಗಳನ್ನು ನಮಗಾಗಿ ತೆಗೆದುಕೊಂಡು ನಮ್ಮ ಮನಸ್ಸನ್ನು ಶುದ್ಧೀಕರಿಸಿದರೆ, ನಾವು ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ ಕಡಿಮೆ. ಸರಿ, ಒಂದು ದಿನ ಮನಸ್ಸನ್ನು ಸ್ವಚ್ಛಗೊಳಿಸುವಾಗ ಅದು ತುಂಬಾ ಸಂತೋಷ ಮತ್ತು ಹಗುರವಾಗಿರುತ್ತದೆ. ಆದರೆ, ಮರುದಿನ ಮತ್ತೆ ಏನಾದರೂ ಸಂಭವಿಸುತ್ತದೆ ಮತ್ತು ನನ್ನ ಬಳಿಗೆ ಹಿಂತಿರುಗಿ ಮನಸ್ಸಿನಲ್ಲಿ ನಕಾರಾತ್ಮಕ ಆಲೋಚನೆಗಳು ಬರಲು ಪ್ರಾರಂಭಿಸುತ್ತವೆ. ಮದ್ಯಪಾನ ಕೆಟ್ಟದ್ದು ಎಂದು ಕುಡುಕನಿಗೆ ಎಷ್ಟೇ ಮನವರಿಕೆ ಮಾಡಿದರೂ ಪರವಾಗಿಲ್ಲ, ಆದರೆ ಮದ್ಯದಂಗಡಿ ಕಂಡರೆ ಅಲ್ಲಿಗೇ ತಿರುಗುತ್ತಾರೆ. ಅಂತೆಯೇ, ನಾವು ಸಹ ಸಕಾರಾತ್ಮಕವಾಗಿ ಯೋಚಿಸಲು ರೂಢಿ ಮಾಡುಕೊಳ್ಳಬೇಕು. ಆದರೆ ನಕಾರಾತ್ಮಕ ಆಲೋಚನೆಗಳ ಸರಪಳಿಯನ್ನು ತಕ್ಷಣವೇ ಪ್ರಾರಂಭಿಸಲು ಒಂದು ಕಿಡಿ ಮಾತ್ರ ಸಾಕು. ಇದು ಸಾಕಷ್ಟು ಸಹಜ. ಮನೆಯಲ್ಲಿರುವ ಧೂಳನ್ನು ಪ್ರತಿನಿತ್ಯ ಹೇಗೆ ಸ್ವಚ್ಛಗೊಳಿಸಬೇಕೋ ಅದೇ ರೀತಿ ಮನಸ್ಸನ್ನೂ ಪ್ರತಿನಿತ್ಯ ಸ್ವಚ್ಛಗೊಳಿಸಬೇಕು. ಇದನ್ನು ಪ್ರಯೋಗವಾಗಿ ಪ್ರಯತ್ನಿಸಿ. ನೀವು ಅದನ್ನು ಪ್ರಯತ್ನಿಸುವವರೆಗೂ ನೀವು ಅದನ್ನು ನಂಬುವುದಿಲ್ಲ, ಆದರೆ, ಒಮ್ಮೆ ನೀವು ಅನುಭವವನ್ನು ಪಡೆದರೆ, ನೀವು ಒಮ್ಮೆ ನಿಮ್ಮ ಮನಸ್ಸನ್ನು ಸ್ವಚ್ಛಗೊಳಿಸುವ ಅಭ್ಯಾಸವನ್ನು ಹೊಂದುತ್ತೀರಿ ಎಂದು ನನಗೆ ಖಾತ್ರಿಯಿದೆ, ನೀವು ಪ್ರತಿದಿನ ಎದ್ದಾಗ ಹಲ್ಲುಜ್ಜಲು, ಸ್ನಾನ ಮಾಡಲು ಮತ್ತು ನಿಮ್ಮ ಕೈಕಾಲುಗಳನ್ನು ತೊಳೆಯಲು ಮರೆಯುವುದಿಲ್ಲ. ಬೆಳಿಗ್ಗೆ ಮತ್ತು ರಾತ್ರಿ ಮಲಗಲು ಹೋದಾಗ, ನೀವು ಈ ಅಭ್ಯಾಸವನ್ನು ಎಂದಿಗೂ ಬಿಡುವುದಿಲ್ಲ.

# ಚಪಾತಿ ಹಿಟ್ಟನ್ನು ಫ್ರಿಜ್‌ನಲ್ಲಿಟ್ಟು, ಚಪಾತಿ ಮಾಡಿ ತಿಂತೀರಾ? ಬೇಡ ಅಂತಾರೆ ತಜ್ಞರು!

ನಮಗೆಲ್ಲಾ ಗೊತ್ತಿರಬಹುದು ಹಿಂದೆಯಲ್ಲ ಮನೆಗೆ ಅಗತ್ಯವಿರುವ ಹಿಟ್ಟನ್ನು ಮಿಲ್ಲಿಗೆ ಹೋಗಿ ಗೋಧಿ ಕೊಟ್ಟು, ಅವರು ಹೇಳಿದ ಸಮಯಕೆ ಹೋಗಿ ತೆಗೆದುಕೊಂಡು ಬರಬೇಕಿತ್ತು. ಆದರೆ ಈಗ ಕಾಲ ಬದಲಾಗಿದೆ. ಈಗ ಯಾವ ಬ್ರಾಂಡ್ ನ ಹಿಟ್ಟು ಬೇಕಾದರೂ ಕೂಡ ಸುಲಭವಾಗಿ ಎಲ್ಲಾ ಅಂಗಡಿಗಳಲ್ಲೂ ಆನ್‌ಲೈನ್ ಮೂಲಕ ನಮಗೆ ಸಿಗುತ್ತಿದೆ. ಇನ್ನು ನಮ್ಮಲ್ಲಿ ಮನೆಯಲ್ಲಿ ಚಪಾತಿ ಮಾಡುವುದಕ್ಕೋಸ್ಕರ ಹೆಚ್ಚಿನವರು ಗೋಧಿಹಿಟ್ಟನ್ನೇ ಬಳಸುತ್ತಾರೆ. ಅದೇ ಮಹಾರಾಷ್ಟ್ರದ ಕಡೆಗೆ ಹೋದರೆ, ಅಲ್ಲಿನ ಜನಕ್ಕೆ ಗೋಧಿ ಹಿಟ್ಟಿನ ಚಪಾತಿ ಇಲ್ಲದ ಊಟವೇ ಇಲ್ಲ ಎನ್ನುವಂತಿದೆ! ಅದು ಏನೇ ಇರಲಿ ಇಂದಿನ ಲೇಖನದಲ್ಲಿ ಹಿಟ್ಟು ಕಲಸಿ ಉಳಿದಿರುವ ಹಿಟ್ಟಿನಲ್ಲಿ ಚಪಾತಿ ಮಾಡಿ ಸೇವನೆ ಮಾಡುವುದರಿಂದ, ಆರೋಗ್ಯದ ಮೇಲೆ ಏನೆಲ್ಲಾ ಅಡ್ಡಪರಿಣಾಮಗಳು ಬೀರುತ್ತದೆ.

**ಸ್ವಲ್ಪ ಹೆಚ್ಚು ಚಪಾತಿ ಹಿಟ್ಟು ಕಲಿಸಿಡುವುದು:** ಇನ್ನು ಮನೆಯಲ್ಲಿ ಮಹಿಳೆಯರು ಕೆಲವೊಮ್ಮೆ ಚಪಾತಿ ಅಥವಾ ಸಂಜೆಯ ಸಮಯದಲ್ಲಿ ಪೂರಿ ಮಾಡುವ ಸಂದರ್ಭದಲ್ಲಿ, ಗೋಧಿ ಹಿಟ್ಟನ್ನು ಕಲಿಸುವಾಗ ಸ್ವಲ್ಪ ಹೆಚ್ಚು ಕಲಸಿ ಬಿಡುತ್ತಾರೆ. ಯಾಕೆಂದ್ರೆ ಕೆಲವೊಮ್ಮೆ ಅತಿಯಾದ ಇತರ ಕೆಲಸದ ಒತ್ತಡದಿಂದಾಗಿ, ಸಮಯ ಸಿಗದೆ ಇರುವ ಕಾರಣ, ಒಮ್ಮೆಲೇ ಸ್ವಲ್ಪ ಹೆಚ್ಚಿಗೆ ಅಂದರೆ ಮರುದಿನಕ್ಕೆ ಆಗುವಷ್ಟು ಹಿಟ್ಟನ್ನು ಕಲಸಿಕೊಳ್ಳುತ್ತಾರೆ, ಹಾಗೂ ಇಂದಿಗೆ ಬೇಕಾಗುಷ್ಟು ಚಪಾತಿ ಮಾಡಿ ಕೊಂಡು, ಉಳಿದಿರುವ ಹಿಟ್ಟನ್ನು ಹಾಗೆಯೇ ಒಂದು ಏರ್ ಟೈಟ್ ನರ್ ಡಬ್ಬದಲ್ಲಿ ಹಿಟ್ಟನ್ನು ಇಟ್ಟು, ಫ್ರಿಜ್‌ನಲ್ಲಿ ಇಟ್ಟು ಬಿಡುವ ಅಭ್ಯಾಸ ನಮ್ಮಲ್ಲಿ ಬಹುತೇಕ ಜನರಿಗೆ ಇದೆ.

ಅಂದರೆ ಮರುದಿನಕ್ಕೆ ಕೆಲಸ ಸುಲಭವಾಗುತ್ತದೆ ಎನ್ನುವ ಉದ್ದೇಶ ಅವರಲ್ಲಿ ರುತ್ತದೆ ಅಷ್ಟೇ. ಆದರೆ ಈ ಬಗ್ಗೆ ಆರೋಗ್ಯ ತಜ್ಞರು ಹೇಳುವ ಪ್ರಕಾರ, ಉಳಿದಿರುವ ಹಿಟ್ಟನ್ನು ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಿ ಮರುದಿನ ಇದರಿಂದ ಚಪಾತಿ ಅಥವಾ ಪೂರಿ ಮಾಡಿ ಸೇವನೆ ಮಾಡಬಾರದು, ಇದರಿಂದ ಆರೋಗ್ಯದ ಮೇಲೆ ಅನೇಕ ರೀತಿಯ ಅಡ್ಡಪರಿಣಾಮಗಳು ಕಾಣಿಸಿ ಕೊಳ್ಳಬಹುದು ಎಂದು ಎಚರಿಕೆಯನ್ನು ನೀಡುತ್ತಾರೆ.

**ಪ್ರಿಯಾಂಕ್ ಮೆಹ್ತಾ ಪ್ರಕಾರ**

**ಫಿಟ್‌ನೆಸ್ ತರಬೇತುದಾರ ಪ್ರಿಯಾಂಕ್ ಅವರು ತಮ್ಮ ವೀಡಿಯೊದಲ್ಲಿ ಹೇಳಿರುವ ಪ್ರಕಾರ, ರೆಫ್ರಿಜರೇಟರ್‌ನಲ್ಲಿ 24 ಗಂಟೆಗಳ ನಂತರ ಹಿಟ್ಟು ನಿಷ್ಪ್ರಯೋಜಕ ವಾಗುತ್ತದೆ. ಇದರರ್ಥ ನೀವು ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಿದ ಹಿಟ್ಟನ್ನು ಒಂದು ದಿನದ ನಂತರ ಬಳಸಲಾಗುವುದಿಲ್ಲ. ವಾಸ್ತವವಾಗಿ, ರೆಫ್ರಿಜರೇಟರ್ ಹುದುಗುವಿಕೆಯನ್ನು ನಿಲ್ಲಿಸುವುದಿಲ್ಲ, ಅದು ಅದನ್ನು ನಿಧಾನಗೊಳಿಸುತ್ತದೆ. ಶೀತ ತಾಪಮಾನದಲ್ಲಿ ಯೀಸ್ಟ್ ಕಡಿಮೆ ಕೆಲಸ ಮಾಡುತ್ತದೆ, ಆದರೆ ಬ್ಯಾಕ್ಟೀರಿಯಾ ಗಳು ಹೆಚ್ಚು ನಿಧಾನವಾಗಿ ಕೆಲಸ ಮಾಡುತ್ತವೆ. ಇದು ಕಾಲಾನಂತರದಲ್ಲಿ ಹೆಚ್ಚು ಇಂಗಾಲದ ಡೈಆಕ್ಸೈಡ್ ಅನ್ನು ಉತ್ಪಾದಿಸುತ್ತದೆ. ಇದು ಹಿಟ್ಟಿನ ವಿನ್ಯಾಸ ಮತ್ತು ರುಚಿಯನ್ನು ಬದಲಾಯಿಸಲು ಕಾರಣವಾಗುತ್ತದೆ.**



**ಯಾವುದೇ ಪೋಷಕಾಂಶಗಳು ದೇಹಕ್ಕೆ ಸಿಗಲ್ಲ:** ರೆಫ್ರಿಜರೇಟರ್ ಅಥವಾ ಫ್ರಿಡ್ಜ್ ನಲ್ಲಿ ಇಟ್ಟಿರುವ ಹಿಟ್ಟಿನಿಂದ ತಯಾರಿಸಿದ ಚಪಾತಿ ತಾಜಾ ಹಿಟ್ಟು ತಿನ್ನುವಷ್ಟು ಪೌಷ್ಟಿಕಾಂಶದ ಪ್ರಯೋಜನಗಳನ್ನು ಒದಗಿಸು ವುದಿಲ್ಲ. ಏಕೆಂದರೆ ರೆಫ್ರಿಜರೇಟೆಡ್ ಹಿಟ್ಟು ತನ್ನ ಗುಣಮಟ್ಟವನ್ನು ಕಳೆದುಕೊಳ್ಳುತ್ತದೆ. ಇಲ್ಲಿ ಹಿಟ್ಟು ಹುದುಗುವಿಕೆ ಪ್ರಕ್ರಿಯೆಗೆ ಒಳಗಾಗಿರುವುದರಿಂದ ಕ್ರಮೇಣ ಗೋಧಿ ಹಿಟ್ಟಿನ ಜೀವಸತ್ವಗಳು ಅಂದರೆ ಇದರಲ್ಲಿರುವ ವಿಟಮಿನ್ಸ್ ಗಳು ಹಾಗೂ ಇತರ ಬಗೆಯ ಮತ್ತು ಖನಿಜಾಂಶಗಳನ್ನು ತನ್ನಲ್ಲಿ ಹೀರಿಕೊಳ್ಳುತ್ತದೆ. ಅಷ್ಟೇ ಅಲ್ಲದೆ ಫ್ರಿಡ್ಜ್ ನಲ್ಲಿ ಇಟ್ಟಿರುವ ಹಿಟ್ಟು ಹುದುಗುವಿಕೆ ಪ್ರಕ್ರಿಯೆಗೆ ಒಳಗಾಗು ವುದರಿಂದ, ಬಹಳ ಬೇಗನೇ ಹಿಟ್ಟಿನಲ್ಲಿ ಬ್ಯಾಕ್ಟೀರಿಯಾಗಳು ಬೆಳೆಯಲು ಶುರು ವಾಗುತ್ತದೆ. ಹೀಗಾಗಿ ಈ ಹಿಟ್ಟಿನಿಂದ ಮಾಡಿರುವ ಚಪಾತಿ ತಿನ್ನುವುದರಿಂದ ಹೊಟ್ಟೆ ಏನೋ ತುಂಬುತ್ತದೆ ಆದರೆ ಯಾವುದೇ ಪೋಷಣೆ ದೊರೆಯುವುದಿಲ್ಲ.

**ಶುಗರ್ ಏರಿಕೆ ಆಗಬಹುದು!:** ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಲಾದ ಹಿಟ್ಟು ಪಿಷ್ಟವನ್ನು ತ್ವರಿತವಾಗಿ ಕಡಿಮೆ ಮಾಡುತ್ತದೆ ಮತ್ತು ಸಕ್ಕರೆಯ ಏರಿಕೆಗೆ ಕಾರಣವಾಗುತ್ತದೆ ಎಂದು ಫಿಟ್‌ನೆಸ್ ತರಬೇತುದಾರರಾದ ಪ್ರಿಯಾಂಕ್ ಮೆಹ್ತಾ ಅವರು. ಆದ್ದರಿಂದ, ಮಧುಮೇಹಿಗಳು, ತಮ್ಮ ತೂಕವನ್ನು ನಿಯಂತ್ರಿಸಲು ಪ್ರಯತ್ನಿ ಸುವವರು ರೆಫ್ರಿಜರೇಟರ್‌ನಲ್ಲಿ ಸಂಗ್ರಹಿಸಲಾದ ಹಿಟ್ಟಿನಿಂದ ಮಾಡಿದ ರೊಟ್ಟಿ, ಚಪಾತಿಯನ್ನು ತಿನ್ನುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಆದಷ್ಟು ತಾಜಾ ಗೋಧಿ ಹಿಟ್ಟಿನಿಂದ ಮಾಡಿದ ಚಪಾತಿಯನ್ನು ತಿನ್ನುವ ಅಭ್ಯಾಸ ಮಾಡಿಕೊಳ್ಳಬೇಕು ಇನ್ನೂ ಮುಖ್ಯವಾಗಿ 24 ಗಂಟೆಗಳಿಗಿಂತ ಹೆಚ್ಚು ಕಾಲ ರೆಫ್ರಿಜರೇಟರ್‌ನಲ್ಲಿ ಹಿಟ್ಟನ್ನು ಸಂಗ್ರಹಿಸಿಟ್ಟುಕೊಳ್ಳುವ ಅಭ್ಯಾಸವನ್ನು ನಿಲ್ಲಿಸಿ ಎಂದು ತಜ್ಞರು ಸಲಹೆ ನೀಡುತ್ತಾರೆ.

# ಹಣ್ಣಿನ ಮೇಲೆ ಉಪ್ಪು ಚಿಮುಕಿಸಿ ತಿಂತೀರಾ?

ಹಸುವಿನ ಹಾಲಿನಂತೆಯೇ, ನೈಸರ್ಗಿಕವಾಗಿ ಸಿಗುವ ಹಣ್ಣನ್ನು ಸಂಪೂರ್ಣ ಆಹಾರವೆಂದು ಪರಿಗಣಿಸಲಾಗುತ್ತದೆ. ಪ್ರಮುಖವಾಗಿ ಹಣ್ಣುಗಳಲ್ಲಿ ಕಂಡುಬರುವ ವಿಟಮಿನ್ಸ್‌ಗಳು, ಖನಿಜಾಂಶಗಳು, ಫೈಬರ್ ಮತ್ತು ಪೊಟ್ಯಾಸಿಯಮ್ ಸೇರಿದಂತೆ ಹಲವಾರು ಪೋಷಕಾಂಶಗಳನ್ನು ಹೊಂದಿರುತ್ತದೆ. ಹಣ್ಣುಗಳ ಬಗ್ಗೆ ತಜ್ಞರು ಕೂಡ ಹೇಳುವಂತೆ ಹಣ್ಣುಗಳನ್ನು ನಮ್ಮ ದೈನಂದಿನ ಆಹಾರಪದ್ಧತಿಯಲ್ಲಿ ಸೇರಿಸಿಕೊಳ್ಳುವುದರಿಂದ ನಮ್ಮ ಚಯಾ ಪಚಯ ಕ್ರಿಯೆ ಮತ್ತು ರೋಗನಿರೋಧಕ ಶಕ್ತಿ ಬಲಗೊಳ್ಳುತ್ತದೆ, ಜೊತೆಗೆ ದೇಹದ ರೋಗನಿರೋಧಕ ಶಕ್ತಿಯೂ ಕೂಡ ಬಲಗೊಳ್ಳುತ್ತದೆ.

**ರುಚಿಯನ್ನು ಹೆಚ್ಚಿಸಲು ಉಪ್ಪು ಚಿಮುಕಿಸುವುದು:** ಆದರೆ ನಮ್ಮಲ್ಲಿ ಕೆಲವರು ಹಣ್ಣಿನ ರುಚಿಯನ್ನು ಹೆಚ್ಚಿಸಲು ಉಪ್ಪು, ಸಕ್ಕರೆ, ಚಾಟ್ ಮಸಾಲೆಗಳನ್ನು ರುಚಿಗೆ ತಕ್ಕಷ್ಟು ಚುಮುಕಿಸಿ, ತಿನ್ನುವ ಅಭ್ಯಾಸ ಮಾಡಿಕೊಳ್ಳುತ್ತಾರೆ. ಆದರೆ ಪ್ರಶ್ನೆ ಇರುವುದು ಏನೆಂದರೆ ಹಣ್ಣುಗಳ ಮೇಲೆ ಚಿಟಿಕಯಷ್ಟು ಉಪ್ಪು ಚುಮುಕಿಸುವುದರಿಂದ ಆರೋಗ್ಯಕ್ಕೆ ಒಳ್ಳೆಯದಾ? ಇದರಿಂದ ಏನೆಲ್ಲಾ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳ ಬಹುದು.

**ಹಣ್ಣುಗಳ ಮೇಲೆ ಉಪ್ಪು ಅಥವಾ ಚಾಟ್ ಮಸಾಲೆ ಸಂಪಡಿಸಬೇಡಿ:** ನಮ್ಮಲ್ಲಿ ಬಹುತೇಕರಿಗೆ ಮಿಕ್ಸ್ ಫ್ರೂಟ್ಸ್ ಅಂದ್ರೆ, ಮೂರು-ನಾಲ್ಕು ಬಗೆಯ ಹಣ್ಣುಗಳನ್ನು ಸಣ್ಣಗೆ ಕತ್ತರಿಸಿ, ಬೌಲ್ ನಲ್ಲಿ ಹಾಕಿಕೊಂಡು, ಅದರ ಮೇಲೆ ಚಿಟಿಕೆಯಷ್ಟು ಉಪ್ಪು ಅಥವಾ ಚಾಟ್ ಮಸಾಲೆಯನ್ನು ಸಿಂಪಡಿಸಿ, ಸೇವನೆ ಮಾಡಲು ಇಷ್ಟಪಡುತ್ತಾರೆ. ಆದರೆ ಈ ಬಗ್ಗೆ ತಜ್ಞರು ಹೇಳುವ ಪ್ರಕಾರ ಹಣ್ಣುಗಳ ಮೇಲೆ ಉಪ್ಪು ಅಥವಾ ಮಸಾಲೆ ಸಿಂಪಡಿಸಿದ ನಂತರ, ನೀರಿನಾಂಶ ಇರುವ ಹಣ್ಣುಗಳು ಬೇಗನೇ ನೀರು ಬಿಡಲು ಶುರುವಾಗುತ್ತದೆ. ಉದಾಹರಣೆಗೆ ಕಲ್ಲಂಗಡಿ, ಪಪ್ಪಾಯ, ಹಣ್ಣುಗಳು. ಹೀಗೆ ಹಣ್ಣಿನಿಂದ ನೀರು ಬಿಡುಗಡೆಯಾಗುವುದರಿಂದ ಅದು ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ. ಇದಲ್ಲದೆ, ಉಪ್ಪು, ಚಾಟ್ ಮಸಾಲದಲ್ಲಿರುವ ಸೋಡಿಯಂ ಪ್ರಮಾಣ ನಮ್ಮ ಆರೋಗ್ಯದಲ್ಲಿ ಸೇರಿಕೊಳ್ಳುತ್ತಾ ಹೋಗುತ್ತದೆ. ನೆನಪಿಡಿ ಹಣ್ಣಿನ ಮೇಲೆ ಉಪ್ಪು,ಚಾಟ್ ಮಸಾಲ ಅಥವಾ ಸಕ್ಕರೆ ಸಿಂಪಡಿಸುವ ಅಗತ್ಯವಿಲ್ಲ. ಇಲ್ಲಾಂದ್ರೆ ದೇಹದ ಪ್ರಮುಖ ಅಂಗಾಂಗಗಳಿಗೆ ಸಮಸ್ಯೆ ಎದುರಾಗುವ ಸಾಧ್ಯತೆಗಳು ಇರುತ್ತವೆ ಎಂದು ತಮ್ಮ ವರದಿಯಲ್ಲಿ ತಿಳಿಸಿದೆ.





## ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಧರ್ಮಾಚರಣೆ, ಸಾಧನೆ ಮಾಡಿ ಆಧ್ಯಾತ್ಮಿಕ ಬಲ ಹೆಚ್ಚಿಸಿ: ಪೂಜ್ಯ ರಮಾನಂದ ಗೌಡ

# ಸಂತರ ಚೈತನ್ಯಮಯ ಮಾರ್ಗದರ್ಶನದಿಂದ ಜಾಗೃತರಾದ ಉದ್ಯಮಿಗಳು

• ಉದಯವಾಹಿನಿ, ಬೆಂಗಳೂರು

ಹೀನಾನಿ ಗುಣಾನಿ ದೂಷಯತಿ ಇತಿ ಹಿಂದು ಅಂದರೆ ಹೀನ ದುರ್ಗುಣಗಳನ್ನು ದೂರ ಮಾಡಿ ಸಾತ್ವಿಕ ಜೀವನ ನಡೆಸುವವನೆ ಹಿಂದೂ. ಹಿಂದೂ ರಾಷ್ಟ್ರ ಎಂದರೆ ಇಂತಹ ಸಾತ್ವಿಕ ಜನತೆಯುಳ್ಳ ರಾಷ್ಟ್ರವಾಗಿರುತ್ತದೆ. 2026ರ ನಂತರ ಭಾರತದಲ್ಲಿ ವಿಶಾಲ ಹಿಂದೂ ರಾಷ್ಟ್ರ ಸ್ಥಾಪನೆ ಆರಂಭವಾಗಲಿದೆ. ಈ ಸಾತ್ವಿಕ ರಾಷ್ಟ್ರವು ನಿರ್ಮಾಣವಾಗಬೇಕಿದ್ದರೆ ಈಗಿನಿಂದಲೇ ಸಾಧನೆಯನ್ನು ಆರಂಭಿಸಿ ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕಿದೆ ಎಂದು ಸನಾತನ ಸಂಸ್ಥೆಯ ಧರ್ಮಪ್ರಚಾರಕರಾದ ಪೂಜ್ಯ ರಮಾನಂದ ಗೌಡ ಇವರು ಕರೆ ನೀಡಿದರು. ಅವರು ಬೆಂಗಳೂರಿನ ಪೀಣ್ಯ ಕೈಗಾರಿಕಾ ಸಂಘದಲ್ಲಿ ಉದ್ಯಮಿಗಳಿಗಾಗಿ ಹಿಂದೂ ಜನಜಾಗೃತಿ ಸಮಿತಿ ಆಯೋಜಿಸಿದ್ದ ವಿಶೇಷ ಪ್ರವಚನದಲ್ಲಿ ಮಾತನಾಡುತ್ತಿದ್ದರು. ಈ ವೇಳೆ ಹಿಂದೂ ಜನಜಾಗೃತಿ ಸಮಿತಿಯ ಬೆಂಗಳೂರು ಜಿಲ್ಲಾ ಸಮನ್ವಯಕರಾದ ಶ್ರೀ. ಶರತ್ ಕುಮಾರ್ ಇವರು ಉಪಸ್ಥಿತರಿದ್ದರು.




ವಿಶಾಲ ಹಿಂದೂ ರಾಷ್ಟ್ರ ಸ್ಥಾಪನೆ

ಪೂಜ್ಯ ರಮಾನಂದ ಗೌಡ ಇವರು ಮುಂದೆ ಮಾತನಾಡಿ ಹಿಂದೆ ಗುರುವಿನ ಮೂಲಕ ಜ್ಞಾನವನ್ನು ಪಡೆದು ಶಿಷ್ಯರು ಸಾಧನೆಯನ್ನು ಮಾಡುತ್ತಿದ್ದರು. ಭಾರತದಲ್ಲಿ ಗುರುವಿಗೆ ಅಗ್ರಸ್ಥಾನವಿದೆ. ಛತ್ರಪತಿ ಶಿವಾಜಿ ಮಹಾರಾಜರು ಮತ್ತು ಹಕ್ಕ ಬುಕ್ಕರು ಸಹ ತಮ್ಮ ರಾಜ್ಯ ಸ್ಥಾಪನೆಯನ್ನು ಮಾಡುವಾಗ ಗುರುಗಳ ಮಾರ್ಗದರ್ಶನ ಪಡೆದು ಕಾರ್ಯ ಮಾಡಿದರು. ಇದರಿಂದಾಗಿ ಅವರ ಧರ್ಮಸಂಸ್ಥಾಪನೆಯ ಕಾರ್ಯವು ಪೂರ್ಣವಾಯಿತು. ಪ್ರಸ್ತುತ ಕಾಲದಲ್ಲಿ ಅನೇಕ ದಾರ್ಶನಿಕರು ಮತ್ತು ಸಂತರು ಈ ಹಿಂದೂ ರಾಷ್ಟ್ರದ ಸ್ಥಾಪನೆಗೆ ಕೇವಲ ಶಾರೀರಿಕ, ಮಾನಸಿಕ ಸ್ತರದಲ್ಲಿ ಪ್ರಯತ್ನ ಮಾಡುವುದಷ್ಟೇ ಅಲ್ಲದೆ ಸಾಧನೆಯನ್ನು ಮಾಡಿ ಆಧ್ಯಾತ್ಮಿಕ ಬಲವನ್ನೂ ಹೆಚ್ಚಿಸಬೇಕಿದೆ ಹಾಗಾಗಿ ನಾವು ಈ ಹಿಂದೂ ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಗುರುಗಳ ಮಾರ್ಗದರ್ಶನ ಪಡೆದು ಕಾರ್ಯ ಮಾಡಿದರೆ ಯಶಸ್ಸು ಖಂಡಿತ ಸಿಗುವುದು ಎಂದರು. ಕೊನೆಗೆ ಅವರು ಧರ್ಮೋ ರಕ್ಷತಿ ರಕ್ಷಿತಃ ಅಂದರೆ ಧರ್ಮ ಉಳಿಯಬೇಕಾದರೆ ನಾವೆಲ್ಲ ಹಿಂದೂಗಳು ಧರ್ಮಾಚರಣೆಯನ್ನು ಮಾಡಬೇಕು ಹಾಗೂ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ಕುರಿತು ಶಿಕ್ಷಣ ಪಡೆಯಬೇಕು ಮತ್ತು ಆಧ್ಯಾತ್ಮಿಕ ಸಾಧನೆಯನ್ನು ಹೆಚ್ಚಿಸಬೇಕು ಎಂದರು. ಈ ಸಂದರ್ಭದಲ್ಲಿ 70ಕ್ಕೂ ಅಧಿಕ ಧರ್ಮಪ್ರೇಮಿ ಉದ್ಯಮಿಗಳು ಉಪಸ್ಥಿತರಿದ್ದರು.

**ದೇಶದಲ್ಲಿ ಮತಾಂತರ, ಲವ್ ಜಿಹಾದ್, ಹಲಾಲ್ ಜಿಹಾದ್, ವಕ್ಫ್ ಕಾಯ್ದೆ, ಭಯೋತ್ಪಾದನೆ, ಭ್ರಷ್ಟಾಚಾರ ಸೇರಿದಂತೆ ಅನೇಕ ಅಹಿತಕರ ಘಟನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ನಮ್ಮ ದೇಶದಲ್ಲಿ ಬೆಳೆಯುತ್ತಿರುವ ಹೊಸ ಪೀಳಿಗೆಗಳಿಗೆ ಧರ್ಮದ ಕುರಿತು ಜ್ಞಾನ ಸಿಗದಿರುವುದೇ ಈ ಅಧರ್ಮಾಚರಣೆಗೆ ಮೂಲ ಕಾರಣವೆಂದು ತೋರುತ್ತಿದೆ. ಅನ್ಯ ಧರ್ಮೀಯರಿಗೆ ಅವರ ಶೈಕ್ಷಣಿಕ ಸಂಸ್ಥೆಗಳಲ್ಲಿ ಧರ್ಮದ ಶಿಕ್ಷಣ ಪಡೆಯುವ ಅವಕಾಶವಿದೆ, ಆದರೆ ಹಿಂದೂಗಳಿಗೆ ಎಲ್ಲಿಯೂ ಧರ್ಮಶಿಕ್ಷಣ ಸಿಗದ ಕಾರಣ ಅವರು ಧರ್ಮದಿಂದ ದೂರವಾಗುತ್ತಿದ್ದಾರೆ. ಈ ಕೊರತೆಯನ್ನು ನೀಗಿಸಲು ಹಿಂದೂ ಜನಜಾಗೃತಿ ಸಮಿತಿಯು ಕಳೆದ 22 ವರ್ಷಗಳಿಂದ ದೇಶದಾದ್ಯಂತ ಉಚಿತ ಧರ್ಮಶಿಕ್ಷಣ ವರ್ಗಗಳನ್ನು ನಡೆಸುತ್ತಿದ್ದು ಹಳ್ಳಿ ಹಳ್ಳಿಗಳಲ್ಲಿ ಹಿಂದುಗಳಲ್ಲಿ ಧರ್ಮದ ಆಚರಣೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಪ್ರತಿ ವಾರ ನಡೆಯುವ ಈ ವರ್ಗಗಳಲ್ಲಿ ಧರ್ಮದ ಕುರಿತಾದ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಗಲಿವೆ.**

-ಶರತ್ ಕುಮಾರ್

ಫೆಬ್ರವರಿ 13 ಹಾಗೂ 16 ರಂದು ಈ ವಿಶೇಷ ರೈಲು ಸಂಚಾರ, ಪ್ರಯಾಣದ ಅವಧಿ ಕಡಿಮೆ ಮಾಡುವ ಕುರಿತ ಚರ್ಚೆ

# ವಿಜಯಪುರ - ಬೆಂಗಳೂರು ನಡುವೆ ನೇರ ರೈಲು

• ಉದಯವಾಹಿನಿ ಗದಗ

ವಿಜಯಪುರ - ಬೆಂಗಳೂರು ನಡುವಿನ ರೈಲ್ವೆ ಪ್ರಯಾಣದ ಅವಧಿ ಕಡಿಮೆ ಮಾಡುವ ಕುರಿತ ಚರ್ಚೆಗಳು ತೀವ್ರಗೊಂಡಿರುವುದು ಒಂದೆಡೆಯಾದರೆ, ವಿಜಯಪುರ-ಬೆಂಗಳೂರು ಮಧ್ಯೆ ಶಿವರಾತ್ರಿ ನಿಮಿತ್ತ ಮತ್ತೊಂದು ವಿಶೇಷ ರೈಲು ಗದಗ ಬೈಪಾಸ್ ಮೂಲಕ ಓಡಲು ಸಿದ್ಧವಾಗಿದೆ. 2025 ಡಿಸೆಂಬರ್ ನಲ್ಲಿ ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಗೆ ವಿಜಯಪುರ -ಬೆಂಗಳೂರು ಮಧ್ಯೆ ಒಂದು ಬಾರಿ ವಿಶೇಷ ರೈಲು ಸಂಚಾರ ಮಾಡಿತ್ತು. ಅದಕ್ಕೂ ಮೊದಲು ಬೆಳಗಾವಿ-ಗೋಮತಿ ರೈಲು ಸಹ ಗದಗ ಬೈಪಾಸ್ ಮೂಲಕ ಸಂಚರಿಸಿತ್ತು. ಈಗ ಶಿವರಾತ್ರಿ ನಿಮಿತ್ತ ಮತ್ತೊಮ್ಮೆ ವಿಜಯಪುರ-ಬೆಂಗಳೂರು ಮಧ್ಯೆ ವಿಶೇಷ ರೈಲು ಸಂಚರಿಸಲಿದ್ದು, ಈ ಬಾರಿಯೂ ಹುಬ್ಬಳ್ಳಿ ಮತ್ತು ಗದಗ ಬೈಪಾಸ್ ಮಾಡಿಯೇ ಸಂಚರಿಸಲಿದೆ.

**ರೈಲಿನ ವೇಳಾಪಟ್ಟಿ ಏನು?:** 13.02.2026 ರಂದು ರೈಲು ಸಂಖ್ಯೆ 06503 ಬೆಂಗಳೂರು - ವಿಜಯಪುರ ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಮತ್ತು 16.02.2026 ರಂದು ರೈಲು ಸಂಖ್ಯೆ 06504 ವಿಜಯಪುರ - ಬೆಂಗಳೂರು ಎಕ್ಸ್‌ಪ್ರೆಸ್ ವಿಶೇಷ ರೈಲನ್ನು ಓಡಿಸಲಿದೆ. ಸಂಜೆ 7.15 ಕ್ಕೆ ಬೆಂಗಳೂರಿನ ಸರ್‌ಎಂ ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರೈಲು ಆರಂಭವಾಗಲಿದ್ದು, ಮರು ದಿನ ಬೆಳಿಗ್ಗೆ 7 ಕ್ಕೆ ವಿಜಯಪುರ ತಲುಪಲಿದೆ. ವಿಜಯಪುರದಿಂದ ಸಂಜೆ 5.30 ಕ್ಕೆ ಹೊರಟು ಮರುದಿನ ಬೆಳಿಗ್ಗೆ 6.30 ಕ್ಕೆ ಬೆಂಗಳೂರಿನ ಸರ್‌ಎಂ ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ.

ಸಚಿವರ ಪ್ರಯತ್ನದ ಫಲವಾಗಿ ಕಳೆದ ಡಿಸೆಂಬರ್‌ನಲ್ಲಿ ವಿಶೇಷ ರೈಲು ಗದಗ ಬೈಪಾಸ್ ಮೂಲಕ ಓಡಿಸಲಾಗಿತ್ತು. ಈಗ ಶಿವರಾತ್ರಿ ನಿಮಿತ್ತ ಫೆ. 13ಕ್ಕೆ ಬೆಂಗಳೂರು-ವಿಜಯಪುರ, ಫೆ. 16ಕ್ಕೆ ವಿಜಯಪುರ -ಬೆಂಗಳೂರು ವಿಶೇಷ ರೈಲು ಓಡಲಿದೆ.

ಹೀಗೆ ವಿಶೇಷ ರೈಲನ್ನು ಮುಂದೆ ಕಾಯಂ ಆಗಿ ಓಡಿಸಲು ತೆರೆಮರೆಯಲ್ಲಿಕಸರತ್ತುಗಳು ಆರಂಭವಾಗಿದ್ದು, ಗದಗ ರೈಲ್ವೆ ನಿಲ್ದಾಣದ ಅಸ್ತಿತ್ವಕ್ಕೆ ಮತ್ತೊಮ್ಮೆ ಆತಂಕ ಎದುರಾಗಿದೆ.

ಇನ್ನು ಹುಬ್ಬಳ್ಳಿಯಲ್ಲಿ ಪ್ಲಾಟ್ ಫಾರ್ಮ್ ಸಮಸ್ಯೆಯಿಂದ ಇಂಜಿನ್ ಬದಲಿಸಿಕೊಳ್ಳಲು ಗರಿಷ್ಠ 1 ಗಂಟೆ ಹಿಡಿಯುತ್ತದೆ. ಒಂದು ವೇಳೆ ಬೈಪಾಸ್ ಮೂಲಕ ಓಡಿಸಿದರೆ ಕೇವಲ ಒಂದೂವರೆ ಗಂಟೆ ಮಾತ್ರ ಉಳಿತಾಯವಾಗುತ್ತದೆ. ಆದರೆ, ಅದರಿಂದ ಗದಗ ಮತ್ತು ಹುಬ್ಬಳ್ಳಿ ಭಾಗದ ಪ್ರಯಾಣಿಕರಿಗೆ ಅನಾನುಕೂಲತೆಯೂ ಆಗಲಿದೆ. ಇದನ್ನು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅರ್ಥ ಮಾಡಿಕೊಳ್ಳಬೇಕು ಎನ್ನುತ್ತಾರೆ ಜಯ ಕರ್ನಾಟಕ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ ಚವ್ಹಾಣ.

**ಸಚಿವರೆ ವಂದೆ ಭಾರತ್ ಕೇಳಿ :** ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರಿಗೆ ನಿಜವಾಗಿಯೂ ವಿಜಯಪುರ-ಬೆಂಗಳೂರು ಮಧ್ಯದ ಪ್ರಯಾಣದ ಅವಧಿ ಕಡಿಮೆ ಮಾಡುವ ಇಚ್ಛೆ ಇದ್ದರೆ, ತತ್‌ಕ್ಷಣಕ್ಕೆ ಈ ಮಾರ್ಗದ ರೈಲುಗಳನ್ನು ಗದಗ - ಕೊಪ್ಪಳ-ಹೊಸಪೇಟೆ- ಕೊಟ್ಟೂರು-ದಾವಣಗೆರೆ ಮಾರ್ಗವಾಗಿ ಸಂಚರಿಸಲು ಕ್ರಮ ಕೈಗೊಳ್ಳಿ. ಅದರ ಜತೆಗೆ ಗದಗ-ಯಲವಗಿ 58 ಕಿಮೀ ರೈಲ್ವೆ ಮಾರ್ಗದ ಭೂಸ್ವಾಧೀನ ಆರಂಭಿಸಿ, ನೂತನ ರೈಲು ಮಾರ್ಗ ನಿರ್ಮಾಣಕ್ಕೆ ಮುಂದಾದರೆ ನಿಜವಾಗಿಯೂ 4 ತಾಸು ಉಳಿತಾಯ ಮಾಡಬಹುದು. ಇದ್ಯಾವುದೂ ಆಗದಿದ್ದರೆ ವಿಜಯಪುರ -ಬೆಂಗಳೂರು ಮಧ್ಯೆ ವಂದೆ ಭಾರತ್ ಸ್ಲೀಪರ್ ರೈಲು ಓಡಾಟಕ್ಕೆ ಕೇಂದ್ರ ಸಚಿವರಿಗೆ ಮನವಿ ಮಾಡಿ. ವಂದೆ ಭಾರತ್ ರೈಲಿಗೆ ಎರಡೂ ಬದಿಯೂ ಇಂಜಿನ್ ಇರುವುದರಿಂದ ಗದಗ ಬೈಪಾಸ್ ಮೂಲಕ ಓಡಿಸುವ ಪ್ರಮೇಯ ಬರುವುದಿಲ್ಲ. ಸಮಯದ ಉಳಿತಾಯದ ಜತೆಗೆ ವಿಜಯಪುರ, ಬಾಗಲಕೋಟ ಭಾಗದ ರೈಲ್ವೆ ಪ್ರಯಾಣಿಕರಿಗೆ ಉತ್ತಮ ಸೌಕರ್ಯ ಇರುವ ರೈಲ್ವೆ ಸೌಲಭ್ಯ ಕಲ್ಪಿಸಿದ ಭಾಗ್ಯ ನಿಮ್ಮದಾಗುತ್ತದೆ ಎನ್ನುತ್ತಾರೆ ರೈಲ್ವೆ ಬಳಕೆದಾರರು.

**ಅಮೃತ ಸ್ಟೇಷನ್ ಗತಿ:** ವಿಜಯಪುರ - ಬೆಂಗಳೂರು ಮಧ್ಯೆ ಸಂಚರಿಸುವ ರೈಲುಗಳು ಬೈಪಾಸ್ ಮೂಲಕ ಸಂಚರಿಸುವಂತಾದರೆ ಈಚೆಗಷ್ಟೆ 24 ಕೋಟಿ ರೂ. ವೆಚ್ಚದಲ್ಲಿ ಮರುನಿರ್ಮಾಣಗೊಂಡ ಗದಗ ರೈಲ್ವೆ ನಿಲ್ದಾಣದ ಅಸ್ತಿತ್ವ ಇಲ್ಲದಂತಾಗುತ್ತದೆ. ಇನ್ನೊಂದೆಡೆ ಗದಗ ರೈಲ್ವೆ ನಿಲ್ದಾಣದಿಂದ ಕೊಪ್ಪಳ, ಬಳ್ಳಾರಿ ಕಡೆಗೆ ಹೋಗುವ ಪ್ರಯಾಣಿಕರ ಸಂಪರ್ಕ ಕೊಂಡಿ ಕಡಿತವಾಗುತ್ತದೆ. ಹೀಗಾಗಿ ಸಚಿವರು, ರೈಲ್ವೆ ಅಧಿಕಾರಿಗಳು ಈ ಬಗ್ಗೆಯೂ ಚಿಂತನೆ ಮಾಡಬೇಕು ಎನ್ನುತ್ತಾರೆ ರೈಲ್ವೆ ಬಳಕೆದಾರರು.

### ಸಚಿವರ ಮನವಿಗೆ ಸ್ಪಂದನೆ

**ವಿಜಯಪುರ-ಬೆಂಗಳೂರು ನಡುವಿನ ಪ್ರಯಾಣದ ಅವಧಿ ಕಡಿಮೆ ಮಾಡಲು ವಿಶೇಷ ರೈಲನ್ನು ಗದಗ ಮತ್ತು ಹುಬ್ಬಳ್ಳಿ ಬೈಪಾಸ್ ಮೂಲಕ ಓಡಿಸಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಹಾಗೂ ವಿ. ಸೋಮಣ್ಣ ಅವರಿಗೆ ಮನವಿ ಮಾಡಿಕೊಂಡು, ರೈಲ್ವೆ ಇಲಾಖೆ ಉನ್ನತ ಮಟ್ಟದ ಅಧಿಕಾರಿಗಳ ಜತೆ ಸಭೆಯನ್ನೂ ನಡೆಸಿದ್ದರು.**

ಗದಗ ಬೈಪಾಸ್ ಮೂಲಕ ಸಂಚಾರ



### ಉಳಿತಾಯದ ಲೆಕ್ಕ

**ಗದಗ ಮತ್ತು ಹುಬ್ಬಳ್ಳಿ ಬೈಪಾಸ್ ಮೂಲಕ ರೈಲುಗಳನ್ನು ಓಡಿಸಿದರೆ 4 ಗಂಟೆ ಸಮಯ ಉಳಿತಾಯವಾಗಲಿದೆ. ಅಂದರೆ 14 ರಿಂದ 10 ಗಂಟೆಗೆ ಪ್ರಯಾಣದ ಅವಧಿ ಕಡಿಮೆ ಮಾಡಬಹುದು ಎಂದು ಹೇಳಲಾಗುತ್ತಿದೆ. ವಾಸ್ತವದಲ್ಲಿ ಗದಗ ರೈಲ್ವೆ ನಿಲ್ದಾಣದಲ್ಲಿಎಂಜಿನ್ ಬದಲಾಯಿಸಿಕೊಳ್ಳಲು ಗರಿಷ್ಠ 15 ನಿಮಿಷ ಸಾಕಾಗುತ್ತದೆ.**

## ದೇಶದಲ್ಲಿ ಸನಾತನ ಧರ್ಮದಲ್ಲಿ ಸಾಧು ಸಂತರ ಕೊಡುಗೆ ಅಪಾರ

• ಉದಯವಾಹಿನಿ ಯಡ್ರಾಮಿ

ಈ ದೇಶದಲ್ಲಿ ಸನಾತನ ಧರ್ಮದಲ್ಲಿ ಸಾಧು ಸಂತರ ಕೊಡುಗೆ ಅಪಾರವಾಗಿದೆ ಎಂದು ಕಾಶಿ ಜಗದ್ಗುರು ಶ್ರೀ ಡಾ.ಮಲ್ಲಿಕಾರ್ಜುನ ವಿಶ್ವಾರಾಧ ಶಿವಾಚಾರ್ಯ ನುಡಿದರು. ಕೋನಸಿರಸಗಿಯ ಶ್ರೀ ಸವಳಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ವಿವೇಕ ಚಿಂತಾಮಣಿ ಮಹಾರಾಜರು ಲೋಕ ಕಲ್ಯಾಣಕ್ಕಾಗಿ 6 ತಿಂಗಳು ಹನ್ನೊಂದು ದಿನಗಳ ಪರ್ಯಂತ ನಡೆಸಿದ ಉಪವಾಸ ಹಾಗೂ ಮೌನ ಅನುಷ್ಠಾನ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು. ಪುರಾತನ ಸಾಧು-ಸಂತರು, ಜಗದ್ಗುರುಗಳು ಕಾಲದಿಂದಲೂ ಧರ್ಮದ ಜಾಗೃತಿ ಹಾಗೂ ನಮ್ಮ ಸಂಸ್ಕೃತಿ ರಕ್ಷಣೆ ಮಾಡುವ ಮೂಲಕ ಸನಾತನ ಧರ್ಮದ ರಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಾಗಾ ಸಾಧುಗಳು ಹಿಮಾಲಯದ ಗಡಿಯಲ್ಲಿ ಕೊರೆವ ಚಳಿಯ ಮಧ್ಯೆ ಲೋಕ ಕಲ್ಯಾಣಕ್ಕಾಗಿ ತಪಸ್ಸು, ಅನುಷ್ಠಾನ ಮಾಡುತ್ತಿದ್ದಾರೆ. ಧರ್ಮ ರಕ್ಷಣೆ ಜತೆಗೆ ಸಮಯ ಬಂದಾಗ ಸೈನಿಕರಿಗೆ ಜತೆಯಾಗಿ ವೈರಿಗಳ ಸಂಹಾರ ಮಾಡುವ ಮೂಲಕ ದೇಶ ಕಾಯುವಂತ ಕೆಲಸ ಮಾಡುತ್ತಿದ್ದಾರೆ. ಆಪರೇಷನ್ ಸಿಂಧೂರ ಸಂದರ್ಭದಲ್ಲಿ ದೇಶದ ರಕ್ಷಣೆಗಾಗಿ ಹೋರಾಡಲು ನಮಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಕೋರಿದ್ದರು ಎಂದರು.



ಉದಯವಾಹಿನಿ ಚಿತ್ರ

ನಮ್ಮ ಸನಾತನ ಧರ್ಮದಲ್ಲಿ ಶಾಸ್ತ್ರವೂ ಇದೆ, ಶಸ್ತ್ರವೂ ಇದೆ. ಗುರುಕುಲ ಶಿಕ್ಷಣ ವ್ಯವಸ್ಥೆಯಲ್ಲಿ ಗುರುಗಳ ಸಾನ್ನಿಧ್ಯದಲ್ಲಿ ಎಲ್ಲಾ ಬಗೆಯ ಶಿಕ್ಷಣ ನೀಡಲಾಗುತ್ತಿತ್ತು. ಗುರುಕುಲದಲ್ಲಿ ರಾಜರ, ಮಂತ್ರಿಗಳ, ಸೈನಿಕರ, ಬ್ರಾಹ್ಮಣ, ವೈದ್ಯ, ಶೂದ್ರರ ಮಕ್ಕಳೆಲ್ಲರೂ ಅಧ್ಯಯನ ಮಾಡುತ್ತಿದ್ದರು. ಅವರಿಗೆ ಗುರುಕುಲ ಶಿಕ್ಷಣದಲ್ಲಿರುವ 64 ಕಲೆಗಳಲ್ಲಿ 17 ಪ್ರಕಾರ ಕಲೆಗಳನ್ನು ಕಲಿಸುವ ಮೂಲಕ ರಾಜ್ಯ, ದೇಶಕ್ಕೆ ಆಪತ್ತು ಬಂದಾಗ ಹೇಗೆ ಕೆಲಸ ಮಾಡಬೇಕು ಎಂಬುದು ತಿಳಿಸುತ್ತಿದ್ದರು.

ದೇಶದಲ್ಲಿ ಸದ್ಯ ಇರುವ ಗುಲಾಮಗಿರಿ ಶಿಕ್ಷಣ ಬದಲಾಗಿ ದೇಶಿಯ ಶಿಕ್ಷಣ ನೀಡಿದರೆ ನಮ್ಮ ಸನಾತನ ಧರ್ಮದ ಗರಿಮೆ-ಹಿರಿಮೆಯನ್ನು ಮಕ್ಕಳಿಗೆ ತಿಳಿಸಿದಂತಾಗುತ್ತದೆ. ಪ್ರಮುಖ ಬೀದಿಗಳಲ್ಲಿ ಕಾಶಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಯಿತು. ವಿವೇಕ ಚಿಂತಾಮಣಿ ಶ್ರೀಗಳಿಗೆ ತುಲಾಭಾರ ಹಾಗೂ ಎರಡು ಜೋಡಿಗಳ ಸಾಮೂಹಿಕ ವಿವಾಹ ನಡೆಯಿತು. ನಡೆದ ದೇವಿ ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಶ್ರೀ ದೇವಿಯ ತೊಟ್ಟಿಲನ್ನು ಕೋನಸಿರಸಗಿಯ ಭಕ್ತ ಸಿದ್ದಣ್ಣ ಕುಕನೂರ ಹರಾಜಿನಲ್ಲಿ 4.51 ಲಕ್ಷ ರೂ. ನೀಡಿ ತೆಗೆದುಕೊಳ್ಳುವ ಮೂಲಕ ಭಕ್ತಿ ಮೆರೆದರು.

## ಟೊಮೆಟೊ ದರ ಕುಸಿತ ರೈತ ಕಂಗಾಲು



ಉದಯವಾಹಿನಿ ಚಿತ್ರ

• ಉದಯವಾಹಿನಿ ಕನಕಗಿರಿ

ಟೊಮೆಟೊ ದರ ಕುಸಿತ ಕಂಡ ಹಿನ್ನೆಲೆ ರೈತರು ರಸ್ತೆಯಲ್ಲಿಯೇ ಟೊಮೆಟೊ ಸುರಿದು ಆಕ್ರೋಶ ವ್ಯಕ್ತಪಡಿಸಿ, ಖಾಲಿ ಬಾಕ್ಸ್‌ಗಳನ್ನು ಮನೆಗೆ ತೆಗೆದುಕೊಂಡು ಹೋದರು. ಅನೇಕ ರೈತರು ತಮ್ಮ ಪರಿಚಯಸ್ಥ ಜನರನ್ನು ಕೂಗಿ ಉಚಿತವಾಗಿ ಟೊಮೆಟೊ ಹಂಚಿದರು.

ಉತ್ತಮ ದರ ಸಿಗದ ಹಿನ್ನೆಲೆಯಲ್ಲಿ ಬಂದ ದಾರಿಗೆ ಸುಂಕ ಇಲ್ಲ ಎನ್ನುವಂತೆ ರೈತರು ಸಪ್ಪೆಮುಖ ಹಾಕಿಕೊಂಡು ಮನೆ ಕಡೆಗೆ ಹೆಜ್ಜೆ ಹಾಕಿದರು. ಕಳೆದ ಮೂರು ತಿಂಗಳ ಹಿಂದೆ ಒಂದು ಬಾಕ್ಸ್ ಟೊಮೆಟೊ ರೂ.500 ರಿಂದ ರೂ.600ಕ್ಕೆ ಮಾರಾಟವಾಗಿತ್ತು. ಒಂದು ತಿಂಗಳ ಹಿಂದೆ ಬಾಕ್ಸ್ ಗೆ ರೂ.150 ರಿಂದ ರೂ.250ಕ್ಕೆ ಮಾರಾಟವಾಗಿತ್ತು.

ಎಪಿಎಂಸಿಯಲ್ಲಿ ರೂ.30 ರಿಂದ ರೂ.50ಕ್ಕೆ ಮಾರಾಟವಾದರೂ ಖರೀದಿಸುವವರು ಇರಲಿಲ್ಲ ಎನ್ನುತ್ತಾರೆ ರೈತರು. ಈ ಭಾಗದಲ್ಲಿ ಉತ್ತಮ ಮಳೆ ಸುರಿದ ಹಿನ್ನೆಲೆಯಲ್ಲಿ ಬಹುತೇಕ ರೈತರು ಟೊಮೆಟೊ ಬೆಳೆದಿರುವುದು ದರ ಕುಸಿತಕ್ಕೆ ಕಾರಣ ಎಂದು ಮಾರುಕಟ್ಟೆಯ ದಲ್ಲಾಳಿ ವರ್ತಕ ನಾಗೇಂದ್ರ ನಾಯಕ ತಿಳಿಸಿದರು.

ಕಷ್ಟಪಟ್ಟು ಬೆಳೆದ ಟೊಮೆಟೊ ಬೆಳೆಗೆ ಬೆಲೆ ಸಿಗುತ್ತಿಲ್ಲ, ಕೂಲಿಕಾರರಿಗೆ ಕೂಲಿ ಹಣ ನೀಡುವಷ್ಟು ದರ ಸಿಕ್ಕಿಲ್ಲ, ರೈತನ ಪರಿಸ್ಥಿತಿ ದೇವರೆ ಬಲ್ಲ ಎನ್ನುವಂತಾಗಿದೆ ಎಂದು ಬೈಲಕ್ಕುಂಪುರ, ಕನಕಗಿರಿ, ಸೋಮಸಾಗರ ರೈತರು ಅಳಲು ತೋಡಿಕೊಂಡರು.

## ಯುಜಿಸಿ ಸಮಾನತೆ ಕಾಯ್ದೆ ಸ್ವಾಗತಾರ್ಹ

• ಉದಯವಾಹಿನಿ ಹೊಸಪೇಟೆ

ಸುಪ್ರೀಂ ಕೋರ್ಟ್‌ನ ಸೂಚನೆಯಂತೆ ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಯುಜಿಸಿ ಸುಧಾರಣೆಗಳು ಮತ್ತು ಸಮಾನತೆ ಕಾಯ್ದೆ ಸ್ವಾಗತಾರ್ಹವಾಗಿದ್ದು, ಈ ಕಾಯ್ದೆಗೆ ಸುಪ್ರೀಂ ಕೋರ್ಟ್‌ನಲ್ಲಿ ಇರುವ ತಡೆಯನ್ನು ತಕ್ಷಣ ತೆರವುಗೊಳಿಸುವ ಕೆಲಸ ಆಗಬೇಕು ಎಂದು ಎಸ್‌ಸಿ, ಎಸ್‌ಟಿ, ಒಬಿಸಿ ಸಮನ್ವಯ ಸುತಿ ಒತ್ತಾಸಿದೆ. ಸುತಿಯ ಜಿಲ್ಲಾ ಸಂಚಾಲಕ ಸ್ಲಂ ರಾಮಚಂದ್ರ ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಕಾಯ್ದೆಯಿಂದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಸ್ವಲ್ಪಮಟ್ಟಿಗಾದರೂ ತಡೆಗಟ್ಟುವುದು ಸಾಧ್ಯವಿದೆ ಎಂದರು.

ಹೈದರಾಬಾದ್ ಕೇಂದ್ರ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಅವರ ಸಾನ ಬಳಿಕ ಜಾತಿ ತಾರತಮ್ಯ ಚರ್ಚೆ ಮುನ್ನೆಲೆಗೆ ಬಂದಿದೆ. 2019ರಲ್ಲಿ ಮುಂಬೈಯಲ್ಲಿ ಡಾ.ಪಾಯಲ್ ತಡ್ವಿ ಅವರ ಸಾವು, 2023ರಲ್ಲಿ ಬಾಂಬೆ ಐಐಟಿ ವಿದ್ಯಾರ್ಥಿ ದರ್ಶನ್ ಸೋಲಂಕಿ ಪ್ರಕರಣ ಸತ ಕಳೆದ ಐದು ವರ್ಷಗಳಲ್ಲಿ 100ಕ್ಕೂ ಅಧಿಕ ವಿದ್ಯಾರ್ಥಿಗಳು ಐಐಟಿ, ಐಐಎಂ, ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗಾಗಿ ಇಂತಹ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಅನೇಕ ಸಂಘ ಸಂಸ್ಥೆಗಳು ಹೋರಾಟ ಮಾಡಿದ್ದರ ಫಲವಾಗಿ ಯುಜಿಸಿ ಸಮಾನತೆ ಕಾಯ್ದೆ ರೂಪಿಸಲಾಗಿದೆ. ಇದನ್ನು ತಡೆಗಟ್ಟುವ ಯಾವ ಪ್ರಯತ್ನಕ್ಕೂ ಸರ್ಕಾರ ಕುಮ್ಮಕ್ಕು ಕೊಡಬಾರದು. ಹಾಗೇನಾದರೂ ಆದರೆ ಶೇ 85ರಷ್ಟಿರುವ ಈ ಸಮುದಾಯದ ಜನರಿಂದ ಉಗ್ರ ಹೋರಾಟ ನಡೆಯುವುದು ನಿಶ್ಚಿತ ಎಂದು ರಾಮಚಂದ್ರ ಎಚ್ಚರಿಸಿದರು. ಸುತಿಯ ಇನ್ನೊಬ್ಬ ಮುಖಂಡ ಜೆ.ಶಿವಕುಮಾರ್ ಮಾತನಾಡಿ. ಕೆಲವು ಹಿತಾಸಕ್ತಿಗಳು ಈ ಸುಧಾರಣೆಗಳ ಬಗ್ಗೆ ಅಪಪ್ರಚಾರ ಮಾಡುತ್ತಿದ್ದು, ಸಾರ್ವಜನಿಕರು ಮತ್ತು ವಿದ್ಯಾರ್ಥಿ ಸಮುದಾಯ ಇದನ್ನು ನಂಬಬಾರದು ಎಂದರು.



ಉದಯವಾಹಿನಿ ಚಿತ್ರ

## ಬೆಟ್ಟವೇರುವ ಜೀವಕ್ಕೆ ಬೇಕಿದೆ ಪ್ರಾಣ ರಕ್ಷಣೆ

• ಉದಯವಾಹಿನಿ ಬಾದಾಮಿ

ಬೆಟ್ಟದ ಪರಿಸರದಲ್ಲಿ ಬೃಹತ್ ಎತ್ತರದ ಸಾಲು ಬಂಡೆಗಳನ್ನು ಹತ್ತುವ ಸಾಹಸ ಕ್ರೀಡೆಗೆ ಸ್ವದೇಶಿ ಹಾಗೂ ವಿದೇಶಿ ಪ್ರವಾಸಿಗರು ಇಲ್ಲಿಗೆ ಆಗಮಿಸುತ್ತಾರೆ. ಆದರೆ ಬೆಟ್ಟ ಹತ್ತುವ ಸಾಹಸಿಗಳಿಗೆ ಇಲ್ಲಿ ಪ್ರಾಣ ರಕ್ಷಣೆ ಬೇಕಿದೆ. ಬಾದಾಮಿಯಲ್ಲಿ ಎತ್ತರದ, ಆಕರ್ಷಕ ಬೆಟ್ಟಗಳನ್ನು ಹತ್ತುವ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋಗಳು ಹೆಚ್ಚು ಹರಿದಾಡುವುದರಿಂದ ಅಧಿಕ ಸಂಖ್ಯೆಯ ಸ್ವದೇಶಿ ಮತ್ತು ವಿದೇಶಿ ಸಾಹಸಿಗರು ಇಲ್ಲಿಗೆ ಆಗಮಿಸುತ್ತಾರೆ.

ರಂಗನಾಥ ಬೆಟ್ಟದ ಸಮೀಪ ಗಣೇಶ, ಪಾವರ್ ಸ್ಟಾರ್ ಏರಿಯಾ, ಹೆಸ್ಕಾಂ ಕಾರ್ಯಾಲಯದ ಹಿಂದಿನ ಬೆಟ್ಟದ ಸಾಲುಗಳಿಗೆ ಡಿಲಕ್ಸ್, ಟೆಂಪಲ್ ಏರಿಯಾ ಎಂದು ಹೆಸರಿಸಲಾಗಿದೆ. ಇಲ್ಲಿ ಬೆಟ್ಟ ಹತ್ತುವ ಸಾಹಸ ಕ್ರೀಡೆಗಳು ನಡೆಯುತ್ತವೆ. ಅಮೆರಿಕದ ಮಹಿಳೆಯೊಬ್ಬರು ಹಗ್ಗದ ಸಹಾಯದಿಂದ ಬೆಟ್ಟವನ್ನು ಹತ್ತುವಾಗ ಬಿದ್ದು ತೀವ್ರವಾಗಿ ಗಾಯಗೊಂಡಿದ್ದ ಘಟನೆ ಈಚೆಗೆ ನಡೆದಿತ್ತು. ಬೆಟ್ಟ ಹತ್ತುವ ಸಾಹಸ ಕ್ರೀಡೆಗಳು ನಡೆಯುವ ಸ್ಥಳವು ಮುಖ್ಯ ರಸ್ತೆಯ ಎಪಿಎಂಸಿ ಆವರಣದಿಂದ ಅಂದಾಜು 300 ಮೀ. ದೂರ ಇದೆ. ಬೆಟ್ಟ ಹತ್ತುವಾಗ ಆಕಸ್ಮಿಕವಾಗಿ ಯಾರಾದರೂ ಬಿದ್ದರೆ ಅವರನ್ನು ಹೊತ್ತುಕೊಂಡು ಬೆಟ್ಟದಿಂದ ನೂರಾರು ಮೆಟ್ಟಿಲುಗಳ ಮೂಲಕ ಕೆಳಗೆ ತರಬೇಕು. ಇಲ್ಲಿ ಯಾವುದೇ ವಾಹನಗಳು ಸಂಚರಿಸುವುದಿಲ್ಲ. ಯುವ ಸಬಲೀಕರಣ ಕ್ರೀಡಾ ಇಲಾಖೆಯ ಜನರಲ್ ತಿಮ್ಮಯ್ಯ ಅಕಾಡೆಮಿ ಮತ್ತು ಬೆಟ್ಟ ಹತ್ತುವ ತರಬೇತಿ ಪಡೆದ ಗುರುತಿನ ಚೀಟಿ ಹೊಂದಿದ ಯುವಕರು ತರಬೇತಿ ನೀಡುತ್ತಿದ್ದಾರೆ ಎಂದು ಕ್ರೀಡಾ ಇಲಾಖೆಯ ಜನರಲ್ ತಿಮ್ಮಯ್ಯ ಅಕಾಡೆಮಿ ವ್ಯವಸ್ಥಾಪಕ ರಾಜೇಂದ್ರ ಪ್ರತಿಕ್ರಿಯಿಸಿದರು.



ಉದಯವಾಹಿನಿ ಚಿತ್ರ

**ರಂಗನಾಥ ಬೆಟ್ಟದ ಸುತ್ತ 8 ಎಕರೆ ಪ್ರದೇಶವು 1935ರಲ್ಲಿಯೇ ಡಿನೋಟಿಫೈಡ್ ಆಗಿದೆ. ರಾಕ್ ಕ್ಲೈಂಬಿಂಗ್ ನಮಗೆ ಸಂಬಂಧಿಸಿದ್ದು ಅಲ್ಲ**
**-ಮಹೇಶ ಮರಿಯನ್ನರ ಪ್ರಾದೇಶಿಕ ವಲಯ ಅರಣ್ಯ ಇಲಾಖೆ ಅಧಿಕಾರಿ**

ರಾಜ್ಯ ಮತ್ತು ವಿವಿಧ ದೇಶಗಳಿಂದ ಆಗಮಿಸುವ ಬೆಟ್ಟ ಹತ್ತುವ ಶಿಬಿರಾರ್ಥಿಗಳ ಕುರಿತು ತರಬೇತಿಗೆ ಮೊದಲೇ ಅರಣ್ಯ ಇಲಾಖೆ ಮತ್ತು ಪೊಲೀಸ್ ಇಲಾಖೆಗೆ ತಿಳಿಸುತ್ತೇವೆ ಎಂದರು. ಸ್ವದೇಶ ಮತ್ತು ವಿದೇಶಗಳಿಂದ ಅನೇಕ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು, ವೃದ್ಧರು ಬೆಟ್ಟ ಹತ್ತುವುದಕ್ಕೆ ಬರುತ್ತಾರೆ. ಅವರು ಯಾರು, ಎಲ್ಲಿಂದ ಬಂದಿದ್ದಾರೆ ಎಂಬ ಕ್ರೀಡಾ ಸಾಹಸಿಗರ ಮಾಹಿತಿಯನ್ನು ಐ.ಡಿ ಕಾರ್ಡ್ ಹೊಂದಿದ ತರಬೇತಿ ಕೊಡುವವರು, ಹೋಮ್ ಸ್ಟೇದವರು ಕ್ರೀಡಾ ಇಲಾಖೆಯ ತಿಮ್ಮಯ್ಯ ಅಕಾಡೆಮಿಗೆ ಮತ್ತು ಅರಣ್ಯ ಇಲಾಖೆಗೆ ಕೊಡಬೇಕಾಗುತ್ತದೆ ಎಂದು ಹೇಳಿದರು.

ಬೆಟ್ಟ ಹತ್ತುವ ಸಾಹಸ ಕ್ರೀಡೆಗೆ ಸರ್ಕಾರ ಯುವಜನ ಸೇವಾ ಕ್ರೀಡಾ ಇಲಾಖೆಯ ಯುವ ಸಬಲೀಕರಣ ಇಲಾಖೆಯಿಂದ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯನ್ನು 1997ರಲ್ಲಿಯೇ ಆರಂಭಿಸಲಾಗಿದೆ. ಸಾವಿರಾರು ಯುವಕರು ಇಲ್ಲಿ ಬೆಟ್ಟ ಹತ್ತುವ ಸಾಹಸವನ್ನು ಮೆರೆದಿದ್ದಾರೆ.

## ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ: ಇಓ ದೊಡ್ಡಮನಿ

• ಉದಯವಾಹಿನಿ ಶಿರಹಟ್ಟಿ

ಸ್ಥಳೀಯ ತಾಲ್ಲೂಕು ಪಂಚಾಯಿತಿ ಸಭಾ ಭವನದಲ್ಲಿ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಹಾಗೂ ಗಿರಿಜನ ಉಪಯೋಜನೆ (ಟಿಎಸ್‌ಪಿ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳ ಗೈರು ಹಾಜರಾತಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರಾಮಣ್ಣ ದೊಡ್ಡಮನಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ತಾಲ್ಲೂಕು ಮಟ್ಟದ ಅತ್ಯಂತ ಪ್ರಮುಖವಾದ ಈ ಪ್ರಗತಿ ಪರಿಶೀಲನಾ ಸಭೆಗೆ ಒಟ್ಟು 28 ಇಲಾಖೆಗಳ ಅಧಿಕಾರಿಗಳು ಹಾಜರಾಗಬೇಕಿತ್ತು. ಆದರೆ, ಕೇವಲ 13 ಅಧಿಕಾರಿಗಳು ಮಾತ್ರ ಉಪಸ್ಥಿತರಿದ್ದರು. ವಿಶೇಷವಾಗಿ ವಲಯ ಅರಣ್ಯ ಇಲಾಖೆ, ಆರೋಗ್ಯ ಇಲಾಖೆ, ಕಾರ್ಮಿಕ ಇಲಾಖೆಯ ಹಾಗೂ ಕೆಲವು ಇಲಾಖೆಯ ಮುಖ್ಯಸ್ಥರು ಬಾರದೇ ತಮ್ಮ ಪರವಾಗಿ ಕೆಳಹಂತದ ಸಿಬ್ಬಂದಿಯನ್ನು ಸಭೆಗೆ ಕಳುಹಿಸಿಕೊಟ್ಟಿರುವುದು ಕಂಡುಬಂದಿತು. ಈ ಬಗ್ಗೆ ಕಿಡಿಕಾರಿದ ಇಓ ರಾಮಣ್ಣ ದೊಡ್ಡಮನಿ ಮುಂದಿನ ದಿನಗಳಲ್ಲಿ ವ್ಯವಸ್ಥೆ ಸುಧಾರಿಸಬೇಕು. ಒಂದು ವೇಳೆ ಹಿರಿಯ ಅಧಿಕಾರಿಗಳು ಸಭೆಗೆ ಗೈರಾದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

**ಶಿಶು ಅಭಿವೃದ್ಧಿ ಇಲಾಖೆ:** ತಾಲ್ಲೂಕಿನ 21 ಎಸ್‌ಸಿ ಹಾಗೂ 01 ಎಸ್‌ಟಿ ಕೇಂದ್ರಗಳ ಒಟ್ಟು 3081 ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ವಿತರಿಸಲಾಗಿದೆ. ಯೋಜನೆಗೆ ಒಟ್ಟು ರೂ. 31.25 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸಂಪೂರ್ಣ ಗುರಿ ಸಾಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

**ಕೃಷಿ ಇಲಾಖೆ:** ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ, ಕೃಷಿ ಯಂತ್ರೀಕರಣ ಉಪ ಅಭಿಯಾನ, ಸೂಕ್ಷ್ಮ ನೀರಾವರಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವನ್ನು ಶೇ 100 ರಷ್ಟು ಬಳಕೆ ಮಾಡಲಾಗಿದೆ. ಆದರೆ, ಬೀಜ ಪೂರೈಕೆ ಹಾಗೂ ಇತರ ಹೂಡುವಳಿಗಳಿಗೆ ಇನ್ನೂ ಅನುದಾನ ಬಿಡುಗಡೆಯಾಗಬೇಕಿದೆ ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

**ತೋಟಗಾರಿಕೆ ಇಲಾಖೆ:** ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಸೇರಿದಂತೆ ವಿವಿಧ ಯೋಜನೆಗಳಡಿ ಬಿಡುಗಡೆಯಾದ ಅನುದಾನವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿಗಳು ತಿಳಿಸಿದರು.

**ಅರಣ್ಯ ಇಲಾಖೆ:** ಪ್ರಾದೇಶಿಕ ಅರಣ್ಯ ಇಲಾಖೆಯಿಂದ 2020-21ನೇ ಸಾಲಿನಲ್ಲಿ ಗಿರಿಜನರಿಗೆ ವಿತರಿಸಲಾದ 50 ಗ್ಯಾಸ್ ಸಿಲಿಂಡರ್‌ಗಳ ಮರುಪೂರಣಕ್ಕಾಗಿ ರೂ. 42,800 ಅನುದಾನ ಒದಗಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

**ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ:** ಜಲಜೀವನ್ ಮಿಷನ್ ಯೋಜನೆಯಡಿ ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲ್ಲೂಕಿನ ವಿವಿಧ ಗ್ರಾಮಗಳ ಮನೆಗಳಿಗೆ ನಳ ಸಂಪರ್ಕ ಕಲ್ಪಿಸುವಲ್ಲಿ ಶೇ. 100ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಾಲ್ಲೂಕು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪ್ರಗತಿ ಪರಿಶೀಲನಾ ಸಭೆಯ ಕಾರ್ಯದರ್ಶಿ ಗೋಪಾಲ ಲಮಾಣಿ, ತಾಲ್ಲೂಕಾ ಮಟ್ಟದ ಅನುಷ್ಠಾನಾಧಿಕಾರಿ ಉಪಸ್ಥಿತಿದ್ದರು.



ಉದಯವಾಹಿನಿ ಚಿತ್ರ

# 1.11 ಲಕ್ಷ ಹಕ್ಕು ಪತ್ರ: ಜಿಲ್ಲೆಗೊಬ್ಬ ನೋಡಲ್ ಅಧಿಕಾರಿ

ಅರ್ಹರಿಗೆ ಹಕ್ಕು ಪತ್ರ ವಿತರಿಸಬೇಕು, ಹಕ್ಕುಪತ್ರ ವಿತರಣೆಯಲ್ಲಿ ಯಾವುದೇ ಲೋಪವಾಗಬಾರದು :ಕೃಷ್ಣಬೈರೇಗೌಡ

• ಉದಯವಾಹಿನಿ ಹಾವೇರಿ

ನಗರದಲ್ಲಿ ಫೆ. 13ರಂದು ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶ ಹಮ್ಮಿಕೊಳ್ಳಲು ಸಿದ್ಧತೆ ನಡೆಯುತ್ತಿದೆ. ಅಂದು ಸಮಾರಂಭದಲ್ಲಿ 1.11 ಲಕ್ಷ ಮಂದಿಗೆ ಹಕ್ಕು ಪತ್ರ ವಿತರಿಸಲಾಗುತ್ತಿದ್ದು, ಇದರ ತಯಾರಿಯ ಜವಾಬ್ದಾರಿ ನಿರ್ವಹಿಸಲು ಜಿಲ್ಲೆಗೊಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ. ಸಾಧನಾ ಸಮಾವೇಶದ ಸಿದ್ಧತೆ ಕೆಲಸಗಳನ್ನು ಪರಿಶೀಲಿಸಲು ಸಚಿವರ ನೇತೃತ್ವದಲ್ಲಿ ಬೆಂಗಳೂರಿನ ವಿಕಾಸಸೌಧದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಕಂದಾಯ ಹಕ್ಕು ಪತ್ರ, ದರಖಾಸ್ತು ಪೋಡಿ, ಪೋಡಿ ಮುಕ್ತ ಗ್ರಾಮ, ಪೌತಿ ಖಾತೆ ಸೇರಿದಂತೆ ಹಲವು ಸವಲತ್ತುಗಳ ವಿತರಣೆಗೆ ಇದುವರೆಗೆ ಆಗಿರುವ ಸಿದ್ಧತೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಕಂದಾಯ ಸಚಿವ ಕೃಷ್ಣಬೈರೇಗೌಡ, ಅರ್ಹರಿಗೆ ಹಕ್ಕು ಪತ್ರ ವಿತರಿಸಬೇಕು. ಹಕ್ಕುಪತ್ರ ವಿತರಣೆಯಲ್ಲಿ ಯಾವುದೇ ಲೋಪವಾಗಬಾರದು. ಹಕ್ಕುಪತ್ರ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗೊಬ್ಬರಂತೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹಾವೇರಿ ಸುತ್ತಮುತ್ತಲಿನ ಜಿಲ್ಲೆಗಳು ಮಾತ್ರವಲ್ಲದೇ, ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಫಲಾನುಭವಿಗಳು ಸಮಾವೇಶಕ್ಕೆ ಬರಲಿದ್ದಾರೆ. ಎಲ್ಲರಿಗೂ ಹಕ್ಕು ಪತ್ರವನ್ನು ವ್ಯವಸ್ಥಿತವಾಗಿ ವಿತರಣೆ ಮಾಡಲು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಹೇಳಿದರು. ರಾಜ್ಯ ಸರ್ಕಾರ ಸಾವಿರ ದಿನಗಳ ಆಡಳಿತವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಸಂದರ್ಭದಲ್ಲಿ ಫೆ. 13ರಂದು ಹಾವೇರಿಯಲ್ಲಿ ಸಾಧನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಈ ಸಮಾವೇಶವನ್ನು ಎಲ್ಲರೂ ಸೇರಿ ಸ್ಮರಣೀಯವಾಗಿಸಬೇಕು. ರಾಷ್ಟ್ರೀಯ ನಾಯಕರನ್ನೂ ಸರ್ಕಾರದ ಸಾಧನಾ ಸಮಾವೇಶಕ್ಕೆ ಆಹ್ವಾನಿಸಬೇಕು ಎಂದರು.

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಸೇರಿದಂತೆ ಹಲವು ಸಚಿವರು ಭಾಗವಹಿಸಿದ್ದ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಹಿಮ್ಸ್) ಉದ್ಘಾಟನಾ ಕಾರ್ಯಕ್ರಮ ತುಂಬಾ ಅಚ್ಚುಕಟ್ಟಾಗಿ ನಡೆಯಿತು. ಅದೇ ಅಚ್ಚುಕಟ್ಟು ಮತ್ತು ಶಿಸ್ತಿನಿಂದ ಸಾವಿರ ದಿನಗಳ ಸಾಧನಾ ಸಮಾವೇಶ ನಡೆಸಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಮಾತನಾಡಿ, ಹಾವೇರಿ ಹೊರವಲಯದಲ್ಲಿರುವ ಅಜ್ಜಯ್ಯ ಸ್ವಾಮಿ ದೇವಸ್ಥಾನ ಎದುರಿನ ಖುಲ್ಲಾ ಜಾಗದಲ್ಲಿ ಸಮಾವೇಶಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಇದೇ ಸ್ಥಳದಲ್ಲಿ ಸಾಹಿತ್ಯ ಸಮ್ಮೇಳನ ಆಯೋಜನೆ ಮಾಡಲಾಗಿತ್ತು. ಈಗಾಗಲೇ ವೇದಿಕೆ ನಿರ್ಮಾಣ ಬಹುತೇಕ ಅಂತಿಮ ಹಂತಕ್ಕೆ ಬಂದಿದೆ. ವೇದಿಕೆ ಪಕ್ಕದಲ್ಲೇ ಅತೀ ಗಣ್ಯರು ಮತ್ತು ಗಣ್ಯರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು. ಜಿಲ್ಲೆಯ ಶಾಸಕರಾದ ರುದ್ರಪ್ಪ ಲಮಾಣಿ, ಬಸವರಾಜ ಶಿವಣ್ಣನವರ, ಯು.ಬಿ. ಬಣಕಾರ, ಶ್ರೀನಿವಾಸ ಮಾನೆ, ಪ್ರಕಾಶ ಕೋಳಿವಾಡ ಸಭೆಯಲ್ಲಿದ್ದರು.



ಉದಯವಾಹಿನಿ ಚಿತ್ರ

**ಈ ಹಿಂದೆ ವಿಜಯನಗರದಲ್ಲಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಲಾಗಿತ್ತು. ನಿರೀಕ್ಷೆ ಮೀರಿ ರಾಜ್ಯದ ವಿವಿಧ ಭಾಗಗಳಿಂದ ಜನ ಆಗಮಿಸಿದ್ದರು. ಕಾರ್ಯಕ್ರಮ ನಗರ ಪ್ರದೇಶದಲ್ಲಿ ಆಯೋಜನೆ ಮಾಡಿದ್ದರಿಂದ. ಅನೇಕ ಜನರಿಗೆ ಸಮಾವೇಶದ ಸ್ಥಳಕ್ಕೆ ಆಗಮಿಸಲು ಸಮಸ್ಯೆಯಾಯಿತು. ಹಾವೇರಿಯಲ್ಲಿ ಹೊರವಲಯದಲ್ಲಿ ಕಾರ್ಯಕ್ರಮ ಆಯೋಜನೆ ಮಾಡುತ್ತಿರುವುದರಿಂದ, ಅಂತಹ ಸಮಸ್ಯೆಯಾಗುವುದಿಲ್ಲ. ನಗರ ಪ್ರದೇಶದ ಚಟುವಟಿಕೆ ಮೇಲೂ ಯಾವುದೇ ಪರಿಣಾಮ ಬೀರುವುದಿಲ್ಲ.**
**-ಸಚಿವ ಶಿವಾನಂದ ಪಾಟೀಲ , ಜಿಲ್ಲಾ ಉಸ್ತುವಾರಿ**

**ಹೆಲಿಪ್ಯಾಡ್ ನಿರ್ಮಾಣ**

**ಸಾಧನಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಹಲವರು ಹೆಲಿಕಾಪ್ಟರ್ ಮೂಲಕ ಬರಲಿದ್ದಾರೆ. ಇದಕ್ಕಾಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಹಿಮ್ಸ್) ಅವರಣದಲ್ಲಿ ನಾಲ್ಕು ಕಡೆ ಹೆಲಿಪ್ಯಾಡ್ ನಿರ್ಮಿಸಲಾಗಿದೆ' ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ ಅವರು ಸಭೆಗೆ ಮಾಹಿತಿ ನೀಡಿದರು. 'ಹುಬ್ಬಳ್ಳಿ ಕಡೆಯಿಂದ ಬರುವವರ ಬೈಕ್ ಮತ್ತು ಇತರ ವಾಹನಗಳಿಗೆ ಪ್ರತ್ಯೇಕ ಹಾಗೂ ದಾವಣಗೆರೆ ಕಡೆಯಿಂದ ಬರುವವವರಿಗೆ ಪ್ರತ್ಯೇಕವಾಗಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.**

## ಮಿನಿ ನ್ಯೂಸ್

### ಮುಖ್ಯ ರಸ್ತೆಗಳಲ್ಲಿ ಗುಂಡಿಗಳದ್ದೇ ದರ್ಬಾರ್

• ಉದಯವಾಹಿನಿ ಚಿತ್ತಾಪುರ

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ತಲೆ ಎತ್ತಿದ್ದು, ಮುಚ್ಚುವವರೂ ಯಾರು ಎನ್ನುವ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಯಕ್ಷವಾಗಿ ಕಾಡುತ್ತಿದೆ. ಪಟ್ಟಣದ ಪ್ರಮುಖ ರಸ್ತೆಯಾದ ಚಿತ್ತಾವಲಿ ಚೌಕ್ ಹತ್ತಿರ ಗುಂಡಿ ಬಾಯಿ ತೆರೆದಿದ್ದು , ಇದೇ ರಸ್ತೆ ಮಾರ್ಗವಾಗಿ ಕೋರ್ಟ್ ರಸ್ತೆ, ಚಿತ್ತಾವಲಿ ದೇವಸ್ಥಾನ, ಮಾರುಕಟ್ಟೆಗೆ ತೆರಳಲು ಹಲವು ವಾಹನಗಳು ಸಂಚರಿಸುತ್ತವೆ. ಆದರೆ ಗುಂಡಿ ಬಾಯಿ ತೆರೆದು ಹಲವು ತಿಂಗಳುಗಳೇ ಕಳೆದರೂ ಮುಚ್ಚುವ ಕೆಲಸ ಮಾತ್ರ ಆಗಿಲ್ಲ ಎಂದು ಸಾರ್ವಜನಿಕರು ಬೇಸರ ವ್ಯಕ್ತ ಪಡಿಸಿದರು.



ಉದಯವಾಹಿನಿ ಚಿತ್ರ

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳು ಬಾಯಿ ತೆರೆದಿವೆ. ರಸ್ತೆಯ ಮಧ್ಯದಲ್ಲಿಯೇ ಇಂತಹ ದೊಡ್ಡ ಮಟ್ಟದಲ್ಲಿ ಗುಂಡಿ ಬಾಯಿ ತೆರೆದಿದ್ದು, ಪ್ರಯಾಣಿಕರು, ವಾಹನ ಸವಾರರು, ಮಕ್ಕಳು, ವೃದ್ಧರು ಗುಂಡಿಗಳಲ್ಲಿ ಬಿದ್ದು ಕೈ ಕಾಲು ಮುರಿದುಕೊಂಡು ಬಿದ್ದಿರುವ ಘಟನೆಗಳು ಜರುಗುತ್ತಿದ್ದು, ಕೂಡಲೇ ಸಂಬಂಧ ಅಧಿಕಾರಿಗಳು ಎಚ್ಚೇತ್ತು ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಬೇಕು ಎಂದು ಕರವೇ ತಾಲ್ಲೂಕು ಅಧ್ಯಕ್ಷ ನರಹರಿ ಕುಲಕರ್ಣಿ ಒತ್ತಾಯಿಸಿದರು.

### ನರೇಗಾ ಹೆಸರು ಬದಲಾವಣೆ ವಿರುದ್ಧ ನಗರದಲ್ಲಿ ಕಾಂಗ್ರೆಸ್ ಪ್ರತಿಭಟನಾ ಧರಣಿ

• ಉದಯವಾಹಿನಿ ಬಳ್ಳಾರಿ

ನಗರದ ಡಿಸಿ ಕಚೇರಿ ಎದುರಿನ ಮಹಾತ್ಮಾ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಕಾಂಗ್ರೆಸ್ ಜಿಲ್ಲಾ ಘಟಕದಿಂದ ನರೇಗಾ ಹೆಸರು ಬದಲಾವಣೆ ವಿರುದ್ಧ ನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಲ್ಲಂ ಪ್ರಶಾಂತ್ ನೇತೃತ್ವದಲ್ಲಿ ತಲೆಗೆ ಟವಲ್ ಕಟ್ಟಿಕೊಂಡು ಪ್ರತಿಭಟನಾ ಧರಣಿ ನಡೆಸಲಾಯ್ತು.

ಕೇಂದ್ರ ಸರ್ಕಾರದಿಂದ ದೇಶದ ಬಡ ಜನತೆಗೆ ಅವಶ್ಯವಾದ ಉದ್ಯೋಗವನ್ನು ನೀಡುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಹೆಸರನ್ನು ಬಿಜೆಪಿ ನೇತೃತ್ವದ ಎನ್ ಡಿಎ ಸರ್ಕಾರ ಬದಲಾವಣೆ ಮಾಡಿರುವುದರ ವಿರುದ್ಧ ಧರಣಿಯಲ್ಲಿ ಪಾಲ್ಗೊಂಡಿದ್ದ ಮುಖಂಡರು, ಕಾರ್ಯಕರ್ತರು ಘೋಷಣೆ ಕೂಗಿ. ನರೇಗಾ ಹೆಸರು ಬದಲಾವಣೆ ಮಾಡದಂತೆ ಆಗ್ರಹಿಸಲಾಯ್ತು.

ಈ ವೇಳೆ ಮಾತನಾಡಿದ ಮುಖಂಡರು. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಲು ಮುಖ್ಯ ಕಾರಣರಾದ ಮಹಾತ್ಮಾ ಗಾಂಧಿಯ ಹೆಸರನ್ನೇ ತೆಗೆದು. ಅದನ್ನು ಜಿ. ರಾಮ್ ಜಿ ಎಂದು ಬದಲಾವಣೆ ಮಾಡಿರುವ ಬಿಜೆಪಿ ಧೋರಣೆಯನ್ನು ವಿರೋಧಿಸಲಾಯ್ತು.

### ಬಾಲಕಾರ್ಮಿಕರ ನಿಯೋಜನೆ: ಹೋಮ್ ಸ್ಟೇ ಪರಿಶೀಲನೆಗೆ ಸೂಚನೆ

• ಉದಯವಾಹಿನಿ ಕಾರವಾರ

ಬಾಲ ಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರನ್ನು ಹೋಮ್ ಸ್ಟೇಗಳು ಮತ್ತು ರೆಸಾರ್ಟ್‌ಗಳಲ್ಲಿ ನೇಮಕಮಾಡಿಕೊಳ್ಳುವ ಕುರಿತಂತೆ ದೂರುಗಳು ಬರುತ್ತಿದೆ. ಈ ಬಗ್ಗೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಹೆಚ್ಚಿನ ನಿಗಾವಹಿಸಿ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಹೇಳಿದರು. ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತ ಜಿಲ್ಲಾ ಮಟ್ಟದ ಕಾರ್ಯಪಡೆ ಸಮಿತಿ ಸಭೆ ನಡೆಸಿ ಅವರು ಸೂಚನೆ ನೀಡಿದರು. ಪ್ರತಿಯೊಂದು ಹೋಮ್ ಸ್ಟೇ ಮತ್ತು ರೆಸಾರ್ಟ್‌ನಲ್ಲಿ ಕಟ್ಟುನಿಟ್ಟಿನ ತಪಾಸಣೆಗಳನ್ನು ಕೈಗೊಳ್ಳಬೇಕು. ಆಗಾಗ ದಿಢೀರ್ ಭೇಟಿ ಮೂಲಕ ಎಚ್ಚರಿಕೆ ನೀಡುತ್ತಿರಬೇಕು. ಬಾಲಕಾರ್ಮಿಕನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳದಂತೆ ಜಾಗೃತಿ ಮೂಡಿಸಬೇಕು ಎಂದರು.


ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅಂತಹ ಮಕ್ಕಳ ಮನೆಗೆ ಭೇಟಿ ನೀಡಿ, ಮಕ್ಕಳ ಮತ್ತು ಪೋಷಕರ ಮನವೊಲಿಸಿ ಮಕ್ಕಳನ್ನು ಪುನಃ ಶಾಲೆಗೆ ಸೇರ್ಪಡೆ ಮಾಡಲು ಕ್ರಮವಾಗಬೇಕು. ಜಾತ್ರೆ, ಉತ್ಸವಗಳಲ್ಲಿ ಬಾಲ ಕಾರ್ಮಿಕರು ಮತ್ತು ಕಿಶೋರ ಕಾರ್ಮಿಕರು ಇರುವ ಬಗ್ಗೆ ಪರಿಶೀಲಿಸಬೇಕು. ಮೀನುಗಾರಿಕಾ ಬಂದರುಗಳಲ್ಲಿ ಪರಿಶೀಲನೆ ನಡೆಸಬೇಕು' ಎಂದರು.

### ಮೆಕ್ಕೆಜೋಳಕ್ಕೆ ವ್ಯತ್ಯಾಸದ ಬೆಲೆ: ನೋಂದಣಿಗೆ ಆಹ್ವಾನ

• ಉದಯವಾಹಿನಿ ಬಳ್ಳಾರಿ

ಬಳ್ಳಾರಿ ಜಿಲ್ಲೆಯಲ್ಲಿ 2025-26ನೇ ಸಾಲಿನ ಮುಂಗಾರು ಹಂಗಾಮಿಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಮೆಕ್ಕೆಜೋಳ ಉತ್ಪನ್ನಕ್ಕೆ ಬೆಲೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ನೋಂದಣಿ ಆರಂಭಿಸಲಾಗಿದೆ. ಯೋಜನೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಮಾರುಕಟ್ಟೆಗಳಲ್ಲಿ ವಹಿವಾಟು ಆಗುವ ಧಾರಣೆ ಪರಿಗಣಿಸಿ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ರೂ.250 ವ್ಯತ್ಯಾಸದ ಮೊತ್ತ ಪಾವತಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಎಕರೆಗೆ 12 ಕ್ವಿಂಟಲ್‌ನಂತೆ ಗರಿಷ್ಠ 50 ಕ್ವಿಂಟಲ್‌ಗೆ ಮಿತಿಗೊಳಿಸಲಾಗಿದೆ.


ಸರ್ಕಾರ ಮಾರುಕಟ್ಟೆ ಮಧ್ಯಪ್ರವೇಶ ದರವನ್ನು ಪ್ರತಿ ಕ್ವಿಂಟಲ್‌ಗೆ ಗರಿಷ್ಠ ರೂ.2,150 ನಿಗದಿ ಮಾಡಿದೆ. ಈ ಮೊತ್ತಕ್ಕೆ ಅಥವಾ ಹೆಚ್ಚಿನ ದರದಲ್ಲಿ ಉತ್ಪನ್ನ ಮಾರಾಟವಾಗಿದ್ದರೆ ಬೆಲೆ ವ್ಯತ್ಯಾಸ ಪಾವತಿ ದೊರೆಯುವುದಿಲ್ಲ. ರೈತರು ಜಿಲ್ಲೆಯಲ್ಲಿಯೇ ನೋಂದಣಿ ಮಾಡಿಸಿಕೊಳ್ಳಬೇಕು, ನೋಂದಣಿ ಮಾಡಿಸಿಕೊಂಡ ರೈತರು ಮೆಕ್ಕೆಜೋಳವನ್ನು ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಥವಾ ಯೋಜನೆ ಜಾರಿಯಲ್ಲಿರುವ ಹತ್ತಿರದ ಏಕೀಕೃತ ಮಾರುಕಟ್ಟೆ ವ್ಯವಸ್ಥೆ (ಯುಎಂಪಿ) ಇರುವ ಕೊಟ್ಟೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಮಾರಾಟ ಮಾಡಿಕೊಳ್ಳಬಹುದು. ಎಥೆನಾಲ್ ಉತ್ಪಾದನೆಗಾಗಿ, ಕುಕ್ಕುಟ ಮತ್ತು ಪಶು ಆಹಾರ ತಯಾರಿಕಾ ಘಟಕಗಳಿಗೆ ಹಾಗೂ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳಕ್ಕೆ ಮೆಕ್ಕೆಜೋಳ ಪೂರೈಕೆ ಮಾಡಿರುವ ರೈತರಿಗೆ ಸದರಿ ಯೋಜನೆ ಅನ್ವಯಿಸುವುದಿಲ್ಲ. ವ್ಯತ್ಯಾಸದ ಮೊತ್ತವನ್ನು ಡಿಬಿಟಿ ಮುಖಾಂತರ ರೈತರ ಖಾತೆಗೆ ನೇರವಾಗಿ ಪಾವತಿಸಲಾಗುತ್ತದೆ.



ಉದಯವಾಹಿನಿ ಚಿತ್ರ

### ಬೀಜಿಂಗ್‌ನಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಹಾಗೂ ಸ್ಟಾರ್ಮರ್ ಭೇಟಿ ನಡುವೆ ಟ್ರಂಪ್ ಈ ಕುರಿತು ವಾಗ್ದಾಳಿ

# ಯುಕೆ ಚೀನಾದೊಂದಿಗೆ ವ್ಯಾಪಾರ ಮಾಡೋದು ತುಂಬಾ ಡೇಂಜರೆಸ್



**ವಾಷಿಂಗ್ಟನ್ :** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಠಿಣ ಸುಂಕಸಮರದಿಂದಾಗಿ ಅಮೆರಿಕಾದ ಮಿತ್ರರಾಷ್ಟ್ರಗಳು ಚೀನಾದತ್ತ ಮುಖಮಾಡುತ್ತಿದ್ದು, ಇದರಿಂದಾಗಿ ಮಿತ್ರರನ್ನು ಕಳೆದುಕೊಳ್ಳುವ ಭಯದಲ್ಲಿ ಸದ್ಯ ಕೈ ಸುಟ್ಟಂತೆ ಟ್ರಂಪ್ ಪರಿಸ್ಥಿತಿಯಾಗಿದೆ. ಈಗಾಗಲೇ ಯುರೋಪ್ ಅಮೆರಿಕಾದಿಂದ ದೂರಾಗುತ್ತಿದ್ದು,ಈ ಬೆನ್ನಲ್ಲೇ, ಬರೋಬ್ಬರಿ 8 ವರ್ಷಗಳ ಬಳಿಕ ಯುನೈಟೆಡ್ ಕಿಂಗ್ಡಮ್ ಪ್ರಧಾನಿ ಕೀರ್ ಸ್ಟಾರ್ಮರ್ ಚೀನಾದೊಂದಿಗೆ ಸಂಬಂಧ ವೃದ್ದಿಸಿಕೊಳ್ಳುತ್ತಿರುವುದುಕ್ಕೆ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದ್ದು, ಇದು ತುಂಬಾ ಅಪಾಯಕಾರಿ ಎಂದು ಎಚ್ಚರಿಕೆ ನೀಡಿದ್ದಾರೆ.

**ಯುಕೆ ಚೀನಾದೊಂದೊಗೆ ವ್ಯಾಪಾರ ಮಾಡುವುದು ಅಪಾಯಕಾರಿ ಎಂದ ಟ್ರಂಪ್:** ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ ಚೀನಾದೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ದ್ವಿಪಕ್ಷೀಯ ಸಂಬಂಧ ವೃದ್ದಿಗೊಳಿಸಿಕೊಳಿಸುವ ನಿಟ್ಟಿನಲ್ಲಿ ಚೀನಾ ಪ್ರವಾಸ ಬೆಳೆಸಿದ್ದಾರೆ. ಬೀಜಿಂಗ್‌ನಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಹಾಗೂ ಸ್ಟಾರ್ಮರ್ ಭೇಟಿ ನಡುವೆ ಟ್ರಂಪ್ ಈ ಕುರಿತು ವಾಗ್ದಾಳಿ ನಡೆಸಿದ್ದಾರೆ. ಅಮೆರಿಕಾದ ಫಸ್ಟ್‌ಲೇಡಿ ಟ್ರಂಪ್ ಪತ್ನಿ ಮೆಲಾನಿಯಾ ಟ್ರಂಪ್ ಸಾಕ್ಷ್ಯ ಚಿತ್ರ ಪ್ರಿಮಿಯರ್ ಪ್ರದರ್ಶನ ನೋಡಲು ಭೇಟಿ ನೀಡಿದ್ದ ಟ್ರಂಪ್, ಈ ವೇಳೆ, ಯುಕೆ ಪ್ರಧಾನಿ ಸ್ಟಾರ್ಮರ್ ಚೀನಾ ಪ್ರವಾಸದ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದಾರೆ. ಈ ಕುರಿತು ಹೇಳುತ್ತಾ ಟ್ರಂಪ್ ಚೀನಾದೊಂದಿಗೆ ವ್ಯಾಪಾರ ಮಾಡುವುದು ಯುಕೆಗೆ ತುಂಬಾ ಅಪಾಯಕಾರಿ ಸಂಗತಿಯಾಗಿದೆ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಮುಂದುವರೆದು, ಚೀನಾದೊಂದಿಗೆ ಕೆನಡಾ ವ್ಯಾಪಾರ ಒಪ್ಪಂದಗಳನ್ನು ಕುರಿತು ಸಹ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದು, ಕೇವಲ ಯುಕೆ ಮಾತ್ರವಲ್ಲ ಕೆನಡಾ ಸಹ ಇದನ್ನು ಮಾಡುತ್ತಿದೆ, ಆದರೆ,ಕೆನಡಾ ಪರಿಸ್ಥಿತಿ ಸರಿಯಿಲ್ಲ. ಹೀಗಿರುವಾಗ ಅವರು ಚೀನಾವನ್ನು ತಮ್ಮ ಸಮಸ್ಯೆಗಳಿಗೆ ಪರಿಹಾರವಾಗಿ ನೋಡಲು ಸಾಧ್ಯವಿಲ್ಲ. ಏಕೆಂದರೆ ನನಗೆ ಚೀನಾ ಬಗ್ಗೆ ತುಂಬಾ ಚೆನ್ನಾಗಿ ಗೊತ್ತು, ಚೀನಾದೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುದು ಸುರಕ್ಷಿತವಲ್ಲ ಎಂದು ತಿಳಿಸಿದ್ದಾರೆ.

**ಚೀನಾದೊಂದಿಗೆ ಯುಕೆ ಒಪ್ಪಂದ:** ಇವೆಲ್ಲಾದರ ನಡುವೆ ಚೀನಾ ಹಾಗೂ ಯುಕೆ ನಡುವೆ ದ್ವಿಪಕ್ಷೀಯ ಸಂಬಂಧ ವೃದ್ದಿಸುತ್ತಿದ್ದು, ಬರೋಬ್ಬರಿ 8 ವರ್ಷಗಳ ಬಳಿಕ ಅಂದರೆ 2018 ನಂತರ ಮೊದಲ ಬಾರಿಗೆ ಯುಕೆ ಪ್ರಧಾನಿಯೊಬ್ಬರು ಚೀನಾಗೆ ಪ್ರವಾಸ ಬೆಳೆಸಿದ್ದಾರೆ.ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ ಚೀನಾ ಪ್ರವಾಸ ನಡೆಸಿದ್ದು, ವಾಣಿಜ್ಯ ಸೇರಿದಂತೆ ತಂತ್ರಜ್ಞಾನ ವಿನಿಮಯ ಹಾಗೂ ಕೈಗಾರಿಕ ಉದ್ಯಮಗಳಲ್ಲಿ ಪಾಲುದಾರಿಕೆಗೆ ಒಪ್ಪಂದ ಮಾಡಿಕೊಂಡಿದ್ದಾರೆ.

ಇತ್ತೀಚಿನ ಈ ಬೆಳವಣಿಗೆಗಳು ಪಾಶ್ಚಿಮಾತ್ಯ ರಾಷ್ಟಗಳು ಸೇರಿದಂತೆ ಅಮೆರಿಕಾದ ಮಿತ್ರರಾಷ್ಟಗಳು ಯುಎಸ್ ತೊರೆದು ಚೀನಾವನ್ನು ತಮ್ಮ ಪಾಲುದಾರನನ್ನಾಗಿ ನೋಡುತ್ತಿರುವುದು ಟ್ರಂಪ್‌ಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಅಲ್ಲದೆ, ಟ್ರಂಪ್‌ನ ಈ ಹೇಳಿಕೆಗಳು ವ್ಯಾಪಾರ ಒಪ್ಪಂದಗಳಿಂದ ಯುಕೆ ಕೆನಡಾಗೆ ಅಪಾಯವೋ ಅಥವಾ ಅಮೆರಿಕಾ ತೊರೆದು ಚೀನಾದತ್ತ ಮಿತ್ರರಾಷ್ಟ್ರಗಳು ಚೀನಾದೊಂದಿಗೆ ದ್ವಿಪಕ್ಷೀಯ ಸಂಬಂಧ ವೃದ್ದಿಗೊಳಿಸಿಕೊಳ್ಳುತ್ತಿರುವುದರಿಂದ ಯುಎಸ್ ಪಾಲಿಗೆ ಅಪಾಯ ಎಂಬ ಒಳಾರ್ಥದಲ್ಲಿ ಈ ಹೇಳಿಕೆ ನೀಡಿದ್ದಾರೋ ಎಂಬ ಸಂಶಯ ಮೂಡಿಸುವಂತೆ ಮಾಡಿದೆ.



**ಟ್ರಂಪ್ ಹೇಳಿಕೆಗೆ ಚೀನಾ ತಿರುಗೇಟು**

**ಟ್ರಂಪ್ ನ ಈ ಹೇಳಿಕೆಗಳಿಗೆ ಚೀನಾ ತಿರುಗೇಟು ನೀಡಿದೆ. ಟ್ರಂಪ್ ಹೇಳಿಕೆ ಬೆನ್ನಲ್ಲೆ, ಚೀನಾದ ವಿದೇಶಾಂಗ ಇಲಾಖೆ ಹೇಳಿಕ ಬಿಡುಗಡೆ ಮಾಡಿದ್ದು, ಪರಸ್ಪರ ಲಾಭ ಮತ್ತು ಗೆಲುವು-ಗೆಲುವಿನ ಫಲಿತಾಂಶಗಳ ಮನೋಭಾವದಲ್ಲಿ ಎಲ್ಲಾ ದೇಶಗಳೊಂದಿಗೆ ಸಹಕಾರವನ್ನು ಬಲಪಡಿಸಲು ಚೀನಾ ಸಿದ್ಧವಾಗಿದೆ ಎಂದು ತಿಳಿಸಿದೆ.**

- **ಯುಕೆ ಚೀನಾದೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಅತ್ಯಂತ ಅಪಾಯಕಾರಿಯಾದ ವಿಚಾರ ಎಂದ ಟ್ರಂಪ್**
- **ಕೆನಡಾ ಹಾಗೂ ಚೀನಾ ನಡುವಿನ ವ್ಯಾಪಾರ ಪಾಲುದಾರಿಕೆಗೂ ಟ್ರಂಪ್ ವಿರೋಧ**
- **ಅಮೆರಿಕಾ ಬಿಟ್ಟು ಚೀನಾದತ್ತ ಮುಖಮಾಡುತ್ತಿರುವುದು ಮಿತ್ರರಾಷ್ಟ್ರಗಳಿಗೆ ಅಪಾಯವೋ ಅಥವಾ ಯುಎಸ್ ಗೆ ಅಪಾಯ**


**ಮಾರ್ಮಿಕವಾಗಿ ನುಡಿದ್ರಾ ಟ್ರಂಪ್?**

## ಪಾಕಿಸ್ತಾನದಲ್ಲಿ ಶ್ರೀರಾಮನ ಪುತ್ರನ ದೇವಾಲಯ ಪ್ರತಿಷ್ಠಾಪನೆ

**ಲಾಹೋರ್:** ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಲಾಹೋರ್ ಕೋಟೆಯಲ್ಲಿ ಶ್ರೀರಾಮನ ಪುತ್ರರಲ್ಲಿ ಒಬ್ಬರಿಗೆ ಮೀಸಲಾಗಿರುವ ಐತಿಹಾಸಿಕ ಹಿಂದೂ ದೇವಾಲಯವನ್ನು ಪುನರ್ ಪ್ರತಿಷ್ಠಾಪಿಸಿ ಸಾರ್ವಜನಿಕರಿಗೆ ತೆರೆಯಲಾಗಿದೆ. ಲಾಹೋರ್ ಕೋಟೆಯ ವಾಲ್ಡ್ ಸಿಟಿ ಅಥಾರ ಮಂಟಪದಲ್ಲಿ ಲೋಹ್ ದೇವಾಲಯದ ಉದ್ಘಾಟನೆಯು ಎಕೆಸಿಎಸ್ ಮತ್ತು ಡಬ್ಲುಸಿಎಲ್‌ಎ ಅಮೆರಿಕದ ರಾಯಭಾರಿ ನಿಧಿಯಿಂದ ನಿಧಿಸಂಗ್ರಹಿಸಲ್ಪಟ್ಟ ಸಂರಕ್ಷಣೆಯ ನಂತರ ಈ ಐತಿಹಾಸಿಕ ಸ್ಥಳದ ಅನಾವರಣಗೊಳಿಸಲಾಗಿದೆ.

ಲಾಹೋರ್‌ನ ವಾಲ್ ಡಸಿಟಿಯ ಅಧಿಕೃತ ವೆಬ್‌ಸೈಟ್ ಪ್ರಕಾರ, ಆಲಂಗಿರಿ ಗೇಟ್ ಬಳಿ ಇರುವ ದೇವಾಲಯವು ರಾಜ ಲೋಹ್ ದೇವಾಲಯ ಎಂದು ಜನಪ್ರಿಯವಾಗಿ ಪ್ರಸಿದ್ಧವಾಗಿದೆ. ರಾಜ ಲೋಹ್ ಅವರನ್ನು ಸೀತಾ ಮತ್ತು ಶ್ರೀರಾಮನ ಪುತ್ರ ಎಂದು ಹೇಳಲಾಗುತ್ತಿದೆ.

ಈ ದಂತಕಥೆಯು ಲೋಹ್ ಮತ್ತು ಲಾಹೋರ್ ನಡುವಿನ ಸಾಂಸ್ಕೃತಿಕ ಸಂಪರ್ಕದ ಆಧಾರವಾಗಿದೆ. ಆದಾಗ್ಯೂ, ತಜ್ಞರು, ಕಾಶೀರಕ್ಕೆ ದೇವಾಲಯ ಅಥವಾ ಲಾಹೋರ್ ಸ್ಥಾಪನೆಯನ್ನು ಭಗವಾನ್ ರಾಮನ ಮಗ ಲೋಹ್‌ಗೆ ಸಂಪರ್ಕಿಸುವ ಹಕ್ಕನ್ನು



ನಿರ್ಣಾಯಕವಾಗಿ ಬೆಂಬಲಿಸಲು ಯಾವುದೇ ಅಧಿಕೃತ ಐತಿಹಾಸಿಕ ಪುರಾವೆಗಳಿಲ್ಲ ಎಂದು ತಿಳಿಸಿದ್ದಾರೆ. ಸಂರಕ್ಷಣಾ ಯೋಜನೆಯಲ್ಲಿ ತೊಡಗಿರುವ ಸಂಶೋಧಕರು, ಆರಂಭಿಕ ವಲಯ ಕಾರ್ಯದ ಸಮಯದಲ್ಲಿ ಪತ್ತೆಯಾದ ಚಿತ್ರಗಳ ಅವಶೇಷಗಳು ಮತ್ತಷ್ಟು ಉತ್ಖನನಕ್ಕೆ ಕಾರಣವಾಯಿತು ಎಂದು ಹೇಳಿದ್ದಾರೆ.

ಇದು ಆರಂಭದಲ್ಲಿ ಗೋಚರಿಸಿದ್ದಕ್ಕಿಂತ ಹೆಚ್ಚಿನ ಕೊಠಡಿಗಳು, ಕಾರಿಡಾರ್‌ಗಳು ಮತ್ತು ಅಂಗಳಗಳನ್ನು ಬಹಿರಂಗಪಡಿಸಲು ಕಾರಣವಾಗಿದ್ದು, ಇದು ಜಾಗದ ವಾಸ್ತುಶಿಲ್ಪದ ಸಂಕೀರ್ಣತೆಯ ಬಗ್ಗೆ ಹೊಸ ಒಳನೋಟಗಳನ್ನು ನೀಡುತ್ತದೆ ಎಂದಿದ್ದಾರೆ.

## ಸರಿಯಾದ ಶೌಚಾಲಯ ಇಲ್ಲದಿದ್ದರೆ ಶಾಲೆಯ ಮಾನ್ಯತೆ ರದ್ದು : ಸುಪ್ರೀಂ

**ನವದೆಹಲಿ:** ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಮಹಿಳಾ ವಿದಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳ ಲಭ್ಯತೆ ಮತ್ತು ಅಂಗವಿಕಲ ಸ್ನೇಹಿ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳುವಂತೆ ಸುಪ್ರೀಂಕೋರ್ಟ್ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ. ಋತುಚಕ್ರ ಆರೋಗ್ಯದ ಹಕ್ಕು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಬದುಕುವ ಹಕ್ಕಿನ ಭಾಗವಾಗಿದೆ. ಶಾಲೆಗಳು ಬಾಲಕಿಯರಿಗೆ ಶೌಚಾಲಯಗಳು ಮತ್ತು ಉಚಿತ ಸ್ಯಾನಿಟರಿ ಪ್ಯಾಡ್‌ಗಳನ್ನು ಒದಗಿಸಲು ವಿಫಲವಾದರೆ ಸರ್ಕಾರಗಳು ಜವಾಬ್ದಾರರಾಗಿರುತ್ತವೆ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಾಧೀಶರಾದ ಜೆ.ಬಿ.ಪಾರ್ದಿವಾಲಾ ಮತ್ತು ಆರ್ ಮಹಾದೇವನ್ ಅವರನ್ನೊಳಗೊಂಡ ಪೀಠವು ಮುಟ್ಟಿನ ನೈರ್ಮಲ್ಯವು ಸಾಂವಿಧಾನಿಕ ಹಕ್ಕು ಎಂದು ಒತ್ತಿಹೇಳಿದ್ದು, ಸುಪ್ರೀಂಕೋರ್ಟ್‌ನ ನಿರ್ದೇಶನಗಳನ್ನು ಪಾಲಿಸಲು ವಿಫಲವಾದ ಖಾಸಗಿ ಶಾಲೆಗಳ ಮಾನ್ಯತೆಯನ್ನು ರದ್ದುಗೊಳಿಸಬಹುದು ಎಂದು ಎಚ್ಚರಿಸಿದೆ. ಎಲ್ಲಾ ಶಾಲೆಗಳು ನಗರ ಮತ್ತು



ಗ್ರಾಮೀಣ ಪ್ರದೇಶಗಳಲ್ಲಿ ಬಳಸಬಹುದಾದ ನೀರಿನ ಸಂಪರ್ಕದೊಂದಿಗೆ ಕ್ರಿಯಾತ್ಮಕ, ಲಿಂಗ-ವಿಭಜಿತ ಶೌಚಾಲಯಗಳನ್ನು ಒದಗಿಸಬೇಕು ಎಂದು ಪೀಠ ಸ್ಪಷ್ಟಪಡಿಸಿದೆ. ಅಸ್ತಿತ್ವದಲ್ಲಿರುವ ಮತ್ತು ಹೊಸದಾಗಿ ನಿರ್ಮಿಸಲಾದ ಎಲ್ಲಾ ಶೌಚಾಲಯಗಳು ಅಂಗವಿಕಲ ಮಕ್ಕಳ ಅಗತ್ಯಗಳನ್ನು ಪೂರೈಸುವುದು ಸೇರಿದಂತೆ ಗೌಪ್ಯತೆ ಮತ್ತು ಪ್ರವೇಶವನ್ನು ಖಚಿತಪಡಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ. ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಎಎಸ್‌ಡಿಎಂ-694 ಮಾನದಂಡಗಳಿಗೆ ಅನುಗುಣವಾಗಿ ತಯಾರಿಸಲಾದ ಆಕ್ಸಿಜೋ-ಜೈವಿಕ ವಿಘಟನೀಯ ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಉಚಿತ ಪೂರೈಕೆಯನ್ನು ಖಚಿತಪಡಿಸಿಕೊಳ್ಳುವಂತೆ ಆದೇಶಿಸಿದೆ.

ಪ್ರತಿ ಶಾಲೆಯು ಮುಟ್ಟಿನ ನೈರ್ಮಲ್ಯ ನಿರ್ವಹಣಾ ಮೂಲೆಗಳನ್ನು ಸ್ಥಾಪಿಸಬೇಕು ಎಂದು ನ್ಯಾಯಾಲಯವು ನಿರ್ದೇಶಿಸಿದೆ. ಮುಟ್ಟಿನ ತುರ್ತು ಪರಿಸ್ಥಿತಿಗಳನ್ನು ಪರಿಹರಿಸಲು ಈ ಮೂಲೆಗಳಲ್ಲಿ ಬಿಡಿ ಒಳ ಉಡುಪು, ಸಮವಸ್ತ್ರ, ಬಿಸಾಡಬಹುದಾದ ಪ್ಯಾಡ್‌ಗಳು ಮತ್ತು ಇತರ ಅಗತ್ಯ ಸಾಮಗ್ರಿಗಳನ್ನು ಹೊಂದಿರಬೇಕು.

ಜಯಾ ಠಾಕೂರ್ ಎಂಬವರು 2024ರ ಡಿಸೆಂಬರ್ 10 ರಂದು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಮೇಲಿನ ತೀರ್ಪನ್ನು ಸುಪ್ರೀಂಕೋರ್ಟ್ ಕಾಯ್ದಿರಿಸಿದೆ.6ರಿಂದ 12ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಕೇಂದ್ರ ಸರ್ಕಾರದ ಶಾಲಾ ಬಾಲಕಿಯರಿಗೆ ಮುಟ್ಟಿನ ನೈರ್ಮಲ್ಯ ನೀತಿಯನ್ನು ದೇಶಾದ್ಯಂತ ಜಾರಿಗೆ ತರಬೇಕೆಂದು ಅರ್ಜಿಯಲ್ಲಿ ಕೋರಲಾಗಿತ್ತು.

## ರಾಜಕೀಯ ಧ್ರುವೀಕರಣ ಪಾರದರ್ಶಕತೆ ಹಾಳು ಮಾಡುತ್ತಿದೆ: ಬ್ಯಾನರ್ಜಿ

**ಕೋಲ್ಕತ್ತಾ:** ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಭಿಜಿತ್ ಬ್ಯಾನರ್ಜಿ ಅವರು ಭಾರತದಲ್ಲಿ ರಾಜಕೀಯ ಧ್ರುವೀಕರಣವು ಪಾರದರ್ಶಕತೆಯನ್ನು ಹಾಳು ಮಾಡುತ್ತಿದೆ ಮತ್ತು ಜಾಗತಿಕ ಹೂಡಿಕೆದಾರರಿಗೆ ದೇಶವನ್ನು ನಿಗೂಢವನ್ನಾಗಿ ಮಾಡುತ್ತಿದೆ ಎಂದು ಎಚ್ಚರಿಸಿದ್ದಾರೆ. ಆರ್ಥಿಕ ದೃಷ್ಟಿಕೋನದಿಂದ, ದೇಶ ಎದುರಿಸುತ್ತಿರುವ ಅತ್ಯಂತ ನಿರ್ಣಾಯಕ ಸಮಸ್ಯೆಗಳು ಮಾಧ್ಯಮ ಸ್ವಾತಂತ್ರ್ಯ ಮತ್ತು ಪಾರದರ್ಶಕತೆ ಎಂದು ಹೇಳಿದರು, ಹೂಡಿಕೆದಾರರು ಅಂತಿಮವಾಗಿ ರಾಜಕೀಯ ವಾಕ್ಚಾತುರ್ಯಕ್ಕಿಂತ ದತ್ತಾಂಶ ವಿಶ್ವಾಸಾರ್ಹತೆಯ ಬಗ್ಗೆ ಕಾಳಜಿ ವಹಿಸುತ್ತಾರೆ ಎಂದು ವಾದಿಸಿದರು.

ಭಾರತವು ರಾಜಕೀಯವಾಗಿ ಧ್ರುವೀಕೃತ ಹಂತದ ಮೂಲಕ ಸಾಗುತ್ತಿದೆ ಎಂದು ನಾನು ಭಾವಿಸುತ್ತೇನೆ, ಏಕೆಂದರೆ ಅದು ದೀರ್ಘಕಾಲದವರೆಗೆ ಅಸ್ತಿತ್ವದಲ್ಲಿದೆ ಮತ್ತು ನಾವು ಒಂದು ರಾಷ್ಟ್ರವಾಗಿ, ನಾವು ಎಷ್ಟರ ಮಟ್ಟಿಗೆ ಮುಕ್ತ ಮತ್ತು ವಿಶ್ವಾಸಾರ್ಹರಾಗಿ ಕಾಣಬೇಕೆಂದು ಬಯಸುತ್ತೇವೆ ಎಂಬುದನ್ನು ನಾವು ನಿರ್ಧರಿಸಬೇಕು. ನಿಜವಾದ ಸಮಸ್ಯೆಗಳು ಮಾಧ್ಯಮ ಸ್ವಾತಂತ್ರ್ಯಕ್ಕೆ ಸಂಬಂಧಿಸಿವೆ ಎಂದು ನಾನು ಭಾವಿಸುತ್ತೇನೆ ಎಂದು ಅವರು ಹೇಳಿದರು.


ಪ್ರಮುಖ ಸಮಸ್ಯೆಗಳು ಮಾಧ್ಯಮ ಸ್ವಾತಂತ್ರ್ಯ ಮತ್ತು ಪಾರದರ್ಶಕತೆ. ಸಂಖ್ಯೆಗಳು ಏನೆಂದು ನಮಗೆ ನಿಜವಾಗಿಯೂ ತಿಳಿದಿದೆಯೇ ಹೂಡಿಕೆದಾರರು ಕಾಳಜಿ ವಹಿಸುವುದು ಅದನ್ನೇ ಎಂದು ಬ್ಯಾನರ್ಜಿ ಹೇಳಿದರು.ಭಾರತವು ವಿದೇಶಿ ಹೂಡಿಕೆಯನ್ನು ಆಕರ್ಷಿಸುವುದನ್ನು ಮುಂದುವರೆಸಿದೆಯಾದರೂ, ಒಳಹರಿವು ಅಸ್ಥಿರ ಮತ್ತು ಅನಿಶ್ಚಿತತೆಗೆ ಹೆಚ್ಚು ಸೂಕ್ಷ್ಮವಾಗಿದೆ ಎಂದು ಅವರು ವಿವರಿಸಿದರು. ವಿದೇಶಿ ಹೂಡಿಕೆಯಲ್ಲಿ ನಾವು ಸಾಕಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಿದ್ದೇವೆ, ಆದರೆ ಅದು ಅಲ್ಪಕಾಲಿಕವಾಗಿದೆ. ಹಣವು ವೇಗವಾಗಿ ಬರದ

> **ನಮ್ಮ ಆಂತರಿಕ ಧ್ರುವೀಕರಣವು ಪಾರದರ್ಶಕತೆಗೆ ನಮ್ಮ ಬದ್ಧತೆಯನ್ನು ದುರ್ಬಲಗೊಳಿಸುತ್ತಿದೆ ಎಂದು ನಾನು ಭಾವಿಸುತ್ತೇನೆ. ಮತ್ತು ಅದು ಪ್ರಮುಖ ಅಂಶ ಎಂದು ನಾನು ಭಾವಿಸುತ್ತೇನೆ. ಜನರು ಯಾವಾಗಲೂ ಹೂಡಿಕೆ ಮಾಡಲು ಬಯಸುವ ಸ್ಥಳವಾಗಲು ನಾವು ಬಯಸಿದರೆ, ನಮಗೆ ಎಲ್ಲಾ ಹಂತಗಳಲ್ಲಿ ಪಾರದರ್ಶಕತೆ ಬೇಕು**
> **- ಅಭಿಜಿತ್ ಬ್ಯಾನರ್ಜಿ, ಅರ್ಥಶಾಸ್ತ್ರಜ್ಞ,**

ಕಾರಣ ರೂಪಾಯಿ ಮೌಲ್ಯ ಕುಸಿಯುತ್ತಿದೆ ಎಂದು ಅವರು ಹೇಳಿದರು, ಕರೆನ್ಸಿ ದೌರ್ಬಲ್ಯವನ್ನು ನಿರಂತರ ಬಂಡವಾಳ ಒಳಹರಿವಿನ ಅನುಪಸ್ಥಿತಿಗೆ ಜೋಡಿಸಿದರು. ನೀತಿಯ ಅನಿರೀಕ್ಷಿತತೆಯು ಆಂತರಿಕ ಧ್ರುವೀಕರಣದೊಂದಿಗೆ ಸೇರಿ, ದೀರ್ಘಾವಧಿಯ ಹೂಡಿಕೆ ತಾಣವಾಗಿ ದೇಶದ ವಿಶ್ವಾಸಾರ್ಹತೆಯನ್ನು ದುರ್ಬಲಗೊಳಿಸುತ್ತಿದೆ ಎಂದು ಬ್ಯಾನರ್ಜಿ ಎಚ್ಚರಿಸಿದರು.

ನೀತಿ ನಿಯಮಗಳು ಏನೆಂದು ಜನರು ತಿಳಿದುಕೊಳ್ಳಬೇಕು. ನಿರ್ದಿಷ್ಟ ಕಂಪನಿಗಳ ಕಡೆಗೆ ವರ್ತನೆಯಲ್ಲಿ ಬದಲಾವಣೆಗಳಾಗುತ್ತವೆಯೇ ಅವರು ಹೇಳಿದರು. ನಮ್ಮಲ್ಲಿ ಬಹಳ ಊಹಿಸಬಹುದಾದ ಮತ್ತು ಪಾರದರ್ಶಕ ನೀತಿ ಆಡಳಿತ ಮತ್ತು ಪಾರದರ್ಶಕ ಮಾಧ್ಯಮ ಇಲ್ಲದಿದ್ದರೆ, ಭಾರತವು ಜಗತ್ತಿಗೆ ನಿಗೂಢವಾಗಿ ಉಳಿಯುತ್ತದೆ ಎಂದು ಅವರು ಹೇಳಿದರು.

ಭಾರತವು ತನ್ನ ಬಂಡವಾಳ ಮಾರುಕಟ್ಟೆಗಳನ್ನು ಆಳಗೊಳಿಸಲು ಮತ್ತು ದೀರ್ಘಕಾಲೀನ ಜಾಗತಿಕ ಬಂಡವಾಳವನ್ನು ಆಕರ್ಷಿಸಲು ಬಯಸಿದರೆ, ಪಾರದರ್ಶಕತೆ ಸಾಂದರ್ಭಿಕವಾಗಿರದೆ ಸಾಂಸ್ಥಿಕವಾಗಿರಬೇಕು ಎಂದು ಅವರು ಹೇಳಿದರು.



## ಕೋಲ್ಟಾನ್ ಗಣಿಯಲ್ಲಿ ಸಂಭವಿಸಿದ ಭೂಕುಸಿತ, 200ಕ್ಕೂ ಜನ ಸಾವು: ಮಣ್ಣಿನ ಆವಶೇಷಗಳಡಿ ಸಿಲುಕಿ ಹಲವರು ನಾಪತ್ತೆ

**ಕಾಂಗೋ:** ಮಧ್ಯ ಆಫ್ರಿಕಾದ ದೇಶ ಪೂರ್ವ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ರುಬಯಾದ ಕೋಲ್ಟಾನ್ ಗಣಿಯಲ್ಲಿ ಈ ಸಂಭವಿಸಿದ ಘೋರ ಭೂಕುಸಿತದಲ್ಲಿ ಈವರೆಗೂ 200ಕ್ಕೂ ಅಧಿಕ ಜನರು ಸಾವನ್ನಪ್ಪಿ, ಹಲವರು ಇನ್ನೂ ಮಣ್ಣಿನ ಅವಶೇಷಗಳಲ್ಲಿ ಕಾಣೆಯಾಗಿದ್ದರೆಂದು ವರದಿಯಾಗಿದೆ.

ಕೋಲ್ಟಾನ್ ಗಣಿಯಲ್ಲಿ ಗಣಿಗಾರಿಕೆ ಕೆಲಸ ಮಾಡುತ್ತಿದ್ದ ವೇಳೆ, ಧಿಡೀರ್ ಭೂಕುಸಿತವುಂಟಾಗಿದ್ದು, ಇದರಿಂದ ನೂರಾರು ಜನ ಸಿಲುಕಿ ಪ್ರಾಣ ಬಿಟ್ಟಿದ್ದು, ವರೆಗೂ ಪ್ರಾಣಹಾನಿಯ ಕುರಿತು ಲೆಕ್ಕಿಸಲು ಸಾಧ್ಯವಾಗಿರಲಿಲ್ಲ. ಸದ್ಯ ಈ ಮಾಹಿತಿ ಸಿಕ್ಕಿದ್ದು, ಕುಸಿತದಿಂದಾಗಿ 200ಕ್ಕೂ ಅಧಿಕ ಜನ ಸಾವನ್ನಪ್ಪಿದ್ದು, ಗಾಯಗೊಂಡ 20 ಮಂದಿಗೆ ಚಿಕಿತ್ಸೆ ನೀಡಲಾಗಿದೆ. ಆದಾಗ್ಯೂ, ಇನ್ನೂ ಹಲವರು ಕಾಣೆಯಾಗಿರುವುದರಿಂದ ಸಾವಿನ ಸಂಖ್ಯೆಯಲ್ಲಿ ಹೆಚ್ಚಳ ಕಾಣಬಹುದು ಎಂದು ಗಣಿ ಪ್ರಾಂತ್ಯದ ಬಂಡುಕೋರರಿಂದ ನೇಮಿಸಲ್ಪಟ್ಟ ಗವರ್ನರ್ ವಕ್ತಾರ ಲುಮುಂಬಾ ಕಂಬೆರೆ ಮುಯಿಸಾ ಮಾಹಿತಿ ನೀಡಿದ್ದಾರೆ.

ಈ ಕುರಿತು ಹೆಚ್ಚಿನ ಮಾಹಿತಿ ನೀಡಿದ್ದು, ಗಣಿ ಉತ್ತರ ಕಿವು ಪ್ರಾಂತ್ಯದ ಪ್ರಾಂತೀಯ ರಾಜಧಾನಿ ಗೋಮಾ ನಗರದ ವಾಯುವ್ಯಕ್ಕೆ ಸುಮಾರು 60 ಕಿ.ಮೀ (37 ಮೈಲುಗಳು) ದೂರದಲ್ಲಿದ್ದು, ಮಳೆಗಾಲವಾದುದರಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿತ್ತು. ಇದರಿಂದಾಗಿ



ಭೂಕುಸಿತವುಂಟಾಗಿದ್ದು, ಈ ವೇಳೆ ಕಾರ್ಮಿಕರು ಗಣಿ ಪ್ರದೇಶದ ಆಳದಲ್ಲಿದ್ದ ಕಾರಣ ಹೆಚ್ಚನ ದುರಂತಕ್ಕೆ ಕಾರಣವಾಗಿದೆ ಎಂದು ತಿಳಿಸಿದ್ದಾರೆ.

ಈವರೆಗೂ ಸಾವನಪ್ಪಿರುವ ಎಲ್ಲರ ನಿಖರ ವರದಿ ಲಭಿಸಿಲ್ಲ, ಆದಾಗ್ಯೂ, 200ಮೃತದೇಹಗಳ ಗುರುತು ಪತ್ತೆಯಾಗಿದ್ದು, ಸಾವನ್ನಪ್ಪಿದವರಲ್ಲಿ ಗಣಿಗಾರರು, ಮಕ್ಕಳು ಮತ್ತು ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಮಹಿಳೆಯರು ಸೇರಿದ್ದಾರೆ ಎಂದು ಗವರ್ನರ್ ತಿಳಿಸಿರುವುದಾಗಿ ರಾಯಿಟರ್ಸ್ ವರದಿ ಮಾಡಿದೆ. ಇನ್ನು, ಫ್ರಾಂಕ್ ಬೊಲಿಂಗೊ ಎಂಬ ಅಲ್ಲಿನ ಸ್ಥಳೀಯ ಕುಶಲಕರ್ಮಿ ಗಣಿಗಾರ ಹೇಳುವ ಪ್ರಕಾರ, ಭೂಕುಸಿತದಲ್ಲಿ ಸಸಿಲುಕಿರುವವರು ಅಧಿಕವಾಗಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯ ಜನರು ಅಲ್ಲಿಯೇ ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ದಟ್ಟವಾಗಿದೆ.

## ಅಜಿತ್ ಪವಾರ್ ಪತ್ನಿ ಡಿಸಿಎಂ ಆಗುವ ಬಗ್ಗೆ ನನಗೆ ಗೊತ್ತಿಲ್ಲ ; ಶರದ್ ಪವಾರ್

**ಬಾರಾಮತಿ:** ಮಹಾರಾಷ್ಟ್ರ ಉಪಮುಖ್ಯಮಂತ್ರಿಯಾಗಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂಬ ವರದಿಗಳ ನಡುವೆ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಬೆಳವಣಿಗೆಯಿಂದ ದೂರ ಉಳಿದಿದ್ದು, ಅದರ ಬಗ್ಗೆ ತಮಗೆ ತಿಳಿದಿಲ್ಲ ಎಂದು ಹೇಳಿದ್ದಾರೆ.

ಬಾರಾಮತಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶರದ್ ಪವಾರ್ ಅವರು, ಎನ್‌ಸಿಪಿ ಬಣಗಳನ್ನು ಒಂದುಗೂಡಿಸುವುದು ಅಜಿತ್ ಪವಾರ್ ಅವರ ಬಯಕೆಯಾಗಿದ್ದು, ಅವರು ಅದರ ಬಗ್ಗೆ ಆಶಾವಾದಿಗಳಾಗಿದ್ದರು ಎಂದು ಹೇಳಿದರು.


ಪ್ರಮಾಣವಚನ ಸ್ವೀಕಾರದ ಬಗ್ಗೆ ನಮಗೆ ತಿಳಿದಿರಲಿಲ್ಲ. ಸುದ್ದಿ ವರದಿಗಳ ಮೂಲಕ ನಾವು ಅದರ ಬಗ್ಗೆ ತಿಳಿದುಕೊಂಡಿದ್ದೇವೆ. ಪ್ರಮಾಣವಚನ ಸ್ವೀಕಾರದ ಬಗ್ಗೆ ನನಗೆ ತಿಳಿದಿಲ್ಲ ಎಂದು ಪವಾರ್ ಕುಟುಂಬದಿಂದ ಯಾರಾದರೂ ಸಮಾರಂಭದಲ್ಲಿ ಭಾಗವಹಿಸುತ್ತಾರೆಯೇ ಎಂದು ಕೇಳಿದಾಗ ಅವರು ಹೇಳಿದರು.

ಎನ್‌ಸಿಪಿ ಈ ನಿರ್ಧಾರ ತೆಗೆದುಕೊಂಡಿರಬಹುದು ಮತ್ತು ಅವರೊಂದಿಗೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಹಿರಿಯ ನಾಯಕ ಹೇಳಿದರು.ಪ್ರಮಾಣವಚನ ಸ್ವೀಕಾರದ ಬಗ್ಗೆ ನನಗೆ ತಿಳಿದಿಲ್ಲ. ಪ್ರಮಾಣವಚನ ಸ್ವೀಕಾರ ಸಮಾರಂಭ ನಿಗದಿಯಾಗಿದೆ ಎಂದು ನನಗೆ ತಿಳಿದಿರಲಿಲ್ಲ. ಪ್ರಮಾಣವಚನ ಸ್ವೀಕಾರದ ಬಗ್ಗೆ ನನ್ನೊಂದಿಗೆ ಯಾವುದೇ ಚರ್ಚೆ ನಡೆದಿಲ್ಲ. ಅವರ ಪಕ್ಷ (ಎನ್‌ಸಿಪಿ) ಈ ನಿರ್ಧಾರ ತೆಗೆದುಕೊಂಡಿರಬಹುದು.

ಪ್ರಫುಲ್ ಪಟೇಲ್ ಮತ್ತು ಸುನಿಲ್ ತತ್ಕರೆ ಅವರ ಹೆಸರುಗಳು ಪ್ರಸ್ತಾಪವಾದವು, ಮತ್ತು ಅವರು ಉಪಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ ಎಂದಿದ್ದಾರೆ.

ರಾಜ್ಯಸಭಾ ಸಂಸದೆ ಸುನೇತ್ರಾ ಪವಾರ್ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಾಧ್ಯತೆಯಿದೆ ಎಂದು ಎನ್‌ಸಿಪಿ ಮೂಲಗಳು ಶುಕ್ರವಾರ ತಿಳಿಸಿದ್ದವು. ಜನವರಿ 28 ರಂದು ಬಾರಾಮತಿಯಲ್ಲಿ ನಡೆದ ವಿಮಾನ ಅಪಘಾತದಲ್ಲಿ ಅಜಿತ್ ಪವಾರ್ ನಿಧನರಾದ ನಂತರ, ದೇವೇಂದ್ರ ಫಡ್ನವೀಸ್ ನೇತೃತ್ವದ ಸಂಪುಟದಲ್ಲಿ ಅವರ ದಿವಂಗತ ಪತಿ ಹೊಂದಿದ್ದ ಹುದ್ದೆಯನ್ನು ಅವರಿಗೆ ನೀಡಬೇಕೆಂದು ರಾಷ್ಟ್ರೀಯತಾವಾದಿ ಕಾಂಗ್ರೆಸ್ ಪಕ್ಷದ ನಾಯಕರ ಒಂದು ಭಾಗ ಒತ್ತಾಯಿಸಿತು. ಅಜಿತ್ ಪವಾರ್ ಮತ್ತು ಎನ್‌ಸಿಪಿ (ಎಸ್‌ಪಿ) ನಾಯಕ ಜಯಂತ್ ಪಾಟೀಲ್ ಕಳೆದ 4 ತಿಂಗಳುಗಳಿಂದ ಮಾತುಕತೆ ನಡೆಸುತ್ತಿದ್ದರು ಮತ್ತು ಚರ್ಚೆಗಳನ್ನು ಮುನ್ನಡೆಸುತ್ತಿದ್ದರು, ಆದರೆ ದುರದೃಷ್ಟಕರ ಅಪಘಾತವು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿತು ಎಂದು ಹಿರಿಯ ನಾಯಕ ಹೇಳಿದ್ದಾರೆ.

ನಾವು ಅಜಿತ್ ಅವರನ್ನು ಮರಳಿ ಕರೆತರಲು ಸಾಧ್ಯವಿಲ್ಲ. ನಾವು ಅವರನ್ನು ಕಳೆದುಕೊಂಡಿದ್ದೇವೆ. ಈಗ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕೆಂದು ನಾವು ನೋಡಬೇಕು ಎಂದು ಅವರು ಹೇಳಿದರು. ಎರಡೂ ಬಣಗಳು ಒಟ್ಟಾಗಿ ಕೆಲಸ ಮಾಡುವ ಬಗ್ಗೆ ಅವರು ಒಮ್ಮತಕ್ಕೆ ಬಂದಿದ್ದಾರೆ ಮತ್ತು ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ ಎಂದು ಶರದ್ ಪವಾರ್ ಹೇಳಿದರು.



# ಎಲ್ಲಾ ಕಡೆ ಭಿಕ್ಷೆ ಬೇಡಲು ನಮಗೆ ನಾಚಿಕೆಯಾಗುತ್ತಿದೆ: ಷರೀಫ್

### ಸಾಲ ಪಡೆಯುವುದು ನಮ್ಮ ಆತ್ಮಗೌರವಕ್ಕೆ ದೊಡ್ಡ ಹೊರೆಯಾಗಿದೆ. ನಾವು ನಾಚಿಕೆಯಿಂದ ತಲೆ ತಗ್ಗಿಸುತ್ತೇವೆ

**ಪಾಕಿಸ್ತಾನ :** ಎಲ್ಲಾ ಕಡೆ ಹಣಕ್ಕಾಗಿ ಭಿಕ್ಷೆ ಬೇಡಲು ನಮಗೆ ನಾಚಿಕೆಯಾಗುತ್ತಿದೆ ಎನ್ನುವ ಮೂಲಕ ದೇಶದ ಆರ್ಥಿಕ ಪರಿಸ್ಥಿತಿ ಎಕ್ಕುಟ್ಟಿ ಹೋಗಿದೆ ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಸತ್ಯ ಒಪ್ಪಿಕೊಂಡಿದ್ದಾರೆ.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಂ ಮುನೀರ್ ಅವರು ಆರ್ಥಿಕ ನೆರವು ಪಡೆಯಲು ವಿದೇಶಗಳಿಗೆ ಭೇಟಿ ನೀಡಬೇಕಾದ ಪರಿಸ್ಥಿತಿಯ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಾಕಿಸ್ತಾನದ ಆರ್ಥಿಕತೆಯನ್ನು ಸ್ಥಿರಗೊಳಿಸಲು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಜೊತೆ ಮಾತುಕತೆ ನಡೆಯುತ್ತಿರುವ ಸಮಯದಲ್ಲಿ ಈ ಹೇಳಿಕೆಗಳು ಮಹತ್ವ ಪಡೆದಿವೆ.

ಇಸ್ಲಾಮಾಬಾದ್‌ನಲ್ಲಿ ಪಾಕಿಸ್ತಾನಿ ರಫ್ತುದಾರರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಷರೀಫ್, ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ತಮ್ಮ ಸರ್ಕಾರ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು. ವಿದೇಶಿ ವಿನಿಮಯ ಮೀಸಲು ನಿಧಿ ದ್ವಿಗುಣಗೊಂಡಿದ್ದರೂ, ಅದರಲ್ಲಿ ಹೆಚ್ಚಿನವು ಸ್ನೇಹಿತ ರಾಷ್ಟ್ರಗಳಿಂದ ಪಡೆದ ಸಾಲಗಳಾಗಿವೆ ಎಂದು ತಿಳಿಸಿದ್ದಾರೆ.

**ನಾಚಿಕೆಯಿಂದ ತಲೆ ತಗ್ಗಿಸುತ್ತೇವೆ:** ನಾವು ಹಣಕ್ಕಾಗಿ ಪ್ರಪಂಚದಾದ್ಯಂತ ಅಲೆಯಬೇಕಾದಾಗ, ಫೀಲ್ಡ್ ಮಾರ್ಷಲ್ ಅಸೀಂ ಮುನೀರ್ ಮತ್ತು ನಾನು ನಾಚಿಕೆಪಡುತ್ತೇವೆ. ಸಾಲ ಪಡೆಯುವುದು ನಮ್ಮ ಆತ್ಮಗೌರವಕ್ಕೆ ದೊಡ್ಡ ಹೊರೆಯಾಗಿದೆ. ನಾವು ನಾಚಿಕೆಯಿಂದ ತಲೆ ತಗ್ಗಿಸುತ್ತೇವೆ. ಆ ದೇಶಗಳು ಹೇಳುವ ಅನೇಕ ವಿಷಯಗಳಿಗೆ ನಾವು ಇಲ್ಲ ಎನ್ನಲು ಸಾಧ್ಯವಿಲ್ಲ ಎಂದು ಷರೀಫ್ ಹೇಳಿದರು.

**ಯಾವ ರಾಷ್ಟ್ರಗಳಿಂದ ನೆರವು?:** ಚೀನಾ ನಮಗೆ ಸದಾಕಾಲದಲ್ಲಿ ಆಗುವ ಸ್ನೇಹಿತ. ಚೀನಾವು ಬಿಲಿಯಗಟ್ಟಲೆ ಠೇವಣಿಗಳನ್ನು ವಿಸ್ತರಿಸಿದೆ. 2024-25 ರಲ್ಲಿ 4 ಶತಕೋಟಿ ಡಾಲರ್ ನೆರವು ನಿರೀಕ್ಷಿಸಲಾಗಿದೆ. ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ 60 ಶತಕೋಟಿ ಡಾಲರ್‌ಗಿಂತ ಹೆಚ್ಚಿನ ಯೋಜನೆಗಳನ್ನು ಒಳಗೊಂಡಿದೆ. ಸೌದಿ ಅರೇಬಿಯಾ 3 ಶತಕೋಟಿ ಡಾಲರ್ ಠೇವಣಿ ವಿಸ್ತರಿಸಿದೆ. ಜತೆಗೆ 1.2 ಶತಕೋಟಿ ಡಾಲರ್ ತೈಲ ಸೌಲಭ್ಯವನ್ನು ನೀಡಿದೆ. ಯುಎಇ ಯುಎಇ 2 ಶತಕೋಟಿ ಡಾಲರ್ ಸಾಲವನ್ನು ವಿಸ್ತರಿಸಿದೆ. ಕತಾರ್ 3 ಶತಕೋಟಿ ಡಾಲರ್ ಹೂಡಿಕೆ ಯೋಜನೆಗಳಿಗೆ ಸಹಿ ಹಾಕಿದೆ ಮತ್ತು ಎಲ್‌ಎನ್‌ಜಿ ಸರಬರಾಜು ಮಾಡಲಿದೆ. ಈ ಮೂಲಕ ಪಾಕಿಸ್ತಾನದ ಕಠಿಣ ಸಂದರ್ಭಗಳಲ್ಲಿ ಈ ದೇಶಗಳು ಬೆಂಬಲ ನೀಡಿದ್ದು, ಅವರಿಗೆ ಧನ್ಯವಾದಗಳು ಎಂದಿದ್ದಾರೆ.

**ಆರ್ಥಿಕ ಪರಿಸ್ಥಿತಿ ಎಕ್ಕುಟ್ಟಿ ಹೋಗಿದೆ**



- **ಎಲ್ಲಾ ಕಡೆ ಹಣಕ್ಕಾಗಿ ಭಿಕ್ಷೆ ಬೇಡಲು ನಮಗೆ ನಾಚಿಕೆಯಾಗುತ್ತಿದೆ ಎಂದ ಪಾಕಿಸ್ತಾನ ಪ್ರಧಾನಿ.**
- **ಪಾಕ್ ಆರ್ಥಿಕ ಪರಿಸ್ಥಿತಿ ಎಕ್ಕುಟ್ಟಿ ಹೋಗಿದೆ ಎಂದು ಸತ್ಯ ಒಪ್ಪಿಕೊಂಡ ಶೆಹಬಾಜ್ ಷರೀಫ್.**
- **ಚೀನಾ ನಮಗೆ ಸದಾಕಾಲದಲ್ಲಿ ಆಗುವ ಸ್ನೇಹಿತ. ಚೀನಾವು ಬಿಲಿಯಗಟ್ಟಲೆ ಠೇವಣಿಗಳನ್ನು ವಿಸ್ತರಿಸಿದೆ ಎಂದು ಪಾಕ್ ಪಿಎಂ ಮಾಹಿತಿ.**

**ಪಾಕಿಸ್ತಾನ ಹಣಕಾಸಿನ ಸ್ಥಿತಿ ಹೇಗಿದೆ**

**ಪಾಕಿಸ್ತಾನವು ವಿಶ್ವ ಹಣಕಾಸು ಸಂಸ್ಥೆಯ ಕಾರ್ಯಕ್ರಮಗಳು ಮತ್ತು ವಿದೇಶಿ ಸಾಲಗಳ ಮೇಲೆ ಅವಲಂಬಿತವಾಗಿದೆ. ಪಾಕಿಸ್ತಾನದಲ್ಲಿ ಬಡತನವು ಸುಮಾರು ಶೇಕಡಾ 45 ರಷ್ಟಿದೆ, ತೀವ್ರ ಬಡತನ ಶೇಕಡಾ 16.5 ರಷ್ಟಿದೆ ಎಂದು ಅಂದಾಜಿಸಲಾಗಿದೆ. ನಿರುದ್ಯೋಗವು ಶೇಕಡಾ 7.1 ರಷ್ಟು. 80 ಲಕ್ಷಕ್ಕೂ ಅಧಿಕ ಜನರು ಉದ್ಯೋಗವಿಲ್ಲದೆ ಇದ್ದಾರೆ. ಸಾರ್ವಜನಿಕ ಸಾಲವು 76,000 ಶತಕೋಟಿ ರೂಪಾಯಿಗಳನ್ನು ದಾಟಿದೆ. ಈ ಪರಿಸ್ಥಿತಿಯು ದೇಶದ ಆರ್ಥಿಕ ಸ್ಥಿರತೆಯ ಮೇಲೆ ಪ್ರಶ್ನೆಗಳನ್ನು ಮೂಡಿಸಿದೆ. ವಿದೇಶಿ ಸಹಾಯವನ್ನು ಅವಲಂಬಿಸಿರುವುದು ದೇಶದ ಸ್ವಾವಲಂಬನೆ ಮತ್ತು ಆತ್ಮಗೌರವಕ್ಕೆ ಧಕ್ಕೆ ತರುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.**

## ಮಿನಿ ನ್ಯೂಸ್

### ವಿದೇಶಿ ವಿನಿಮಯದಲ್ಲಿ ಸಂಗ್ರಹದಲ್ಲಿ ಭಾರಿ ಏರಿಕೆ: ಉತ್ತಮ ಬೆಳವಣಿಗೆ

**ನವದೆಹಲಿ:** ಭಾರತದ ವಿದೇಶಿ ವಿನಿಮಯ ಸಂಗ್ರಹದಲ್ಲಿ ಭಾರಿ ಏರಿಕೆ ಕಂಡು ಬಂದಿದೆ. ಜ. 23ಕ್ಕೆ ಕೊನೆಗೊಂಡ ವಾರದಲ್ಲಿ ಭಾರತದ ವಿದೇಶಿ ವಿನಿಮಯ ಸಂಗ್ರಹವು 709.41 ಬಿಲಿಯನ್ ಡಾಲರ್‌ಗಳಿಗೆ ಏರಿಕೆ ಕಂಡು ಬಂದಿರುವುದು ಉತ್ತಮ ಬೆಳವಣಿಗೆಯಾಗಿದೆ.

ನಿರಂತರ ಕುಸಿತ ಕಾಣುತ್ತಲೇ ಬಂದಿದ್ದ ವಿದೇಶಿ ವಿನಿಮಯ ಸಂಗ್ರಹದಲ್ಲಿ ಕೇವಲ ಒಂದು ವಾರದಲ್ಲಿ 8 ಬಿಲಿಯನ್ ಡಾಲರ್‌ಗಳಷ್ಟು ಏರಿಕೆಯಾಗಿರುವುದು ಸ್ವಾಗತಾರ್ಹವಾಗಿದೆ. 5.6 ಬಿಲಿಯನ್ ಡಾಲರ್‌ಗಳಿಗೆ ಸೀಮಿತವಾಗಿದ್ದ ಆರ್‌ಬಿಐನ ಚಿನ್ನದ ಹಿಡುವಳಿಗಳು ಬರೊಬ್ಬರಿ 123 ಬಿಲಿಯನ್ ಡಾಲರ್‌ಗಳಿಗೆ ಏರಿಕೆಯೊಂದಿಗೆ ಶೇ.8.5ರಷ್ಟು ಬೆಳವಣಿಗೆ ಕಂಡಿರುವುದರಿಂದ ವಿದೇಶಿ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ಸ್ಥಿರಗೊಂಡಂತಾಗಿದೆ. ಈ ಬೆಳವಣಿಗೆಯಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಣೆಯತ್ತ ಮುಖ ಮಾಡಿದ್ದು, ಹಣಕಾಸಿನ ಉಬ್ಬರ ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳುವತ್ತ ಆರ್‌ಬಿಐ ಗಮನ ಹರಿಸಬೇಕಿದೆ.

### ನಾನು ಕಿಂಗ್ ಮೇಕರ್ ಅಲ್ಲ... ಕಿಂಗ್; ದಳಪತಿ ವಿಜಯ್

**ಚೆನ್ನೈ:** ನಾನು ತಮಿಳುನಾಡು ರಾಜಕೀಯದಲ್ಲಿ ಕೇವಲ ಕಿಂಗ್ ಮೇಕರ್ ಆಗಿ ಹೊರ ಹೊಮ್ಮುವುದಿಲ್ಲ ಸಬದಲಿಗೆ ಸರ್ಕಾರ ರಚಿಸುವಷ್ಟು ಬಹುಮತ ಪಡೆದೇ ತೀರುತ್ತೇನೆ ಎಂದು ಟಿವಿಕೆ ಪಕ್ಷದ ಮುಖ್ಯಸ್ಥ ಹಾಗೂ ಖ್ಯಾತ ಚಿತ್ರ ನಟ ದಳಪತಿ ವಿಜಯ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕರೂರು ಕಾಲ್ತುಳಿತ ಪ್ರಕರಣದ ನಂತರ ಇದೇ ಮೊದಲ ಬಾರಿಗೆ ರಾಷ್ಟ್ರೀಯ ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ಅವರು ಈ ವಿಶ್ವಾಸ ಹೊರ ಹಾಕಿದ್ದಾರೆ. ಮೊದಲನೆಯದಾಗಿ ಕರೂರ್ ಕಾಲ್ತುಳಿತವು ಆಘಾತಕಾರಿಯಾಗಿತ್ತು ಮತ್ತು ಅದು ಈಗಲೂ ನನ್ನನ್ನು ಕಾಡುತ್ತಿದೆ ಏಕೆಂದರೆ ಅವರು ಎಂದಿಗೂ ಅಂತಹದ್ದೇನನ್ನೂ ನಿರೀಕ್ಷಿಸಿರಲಿಲ್ಲ ಎಂದು ಅವರು ಹೇಳಿದರು. ಎರಡನೆಯದಾಗಿ ನಾನು ಏನು ಮಾಡಬೇಕೆಂದು ನಿರ್ಧರಿಸುವ ವ್ಯಕ್ತಿ, ತನ್ನ ಗುರಿಯ ಬಗ್ಗೆ ದ್ವಂದ್ವ ಅಥವಾ ಅನಿಶ್ಚಿತತೆ ಹೊಂದಿಲ್ಲ. ನಾನು ಏನು ಅಂದುಕೊಂಡಿದ್ದೇನೋ ಅದನ್ನು ಸಾಧಿಸಿಯೇ ತೀರುತ್ತೇನೆ ಎಂದು ಅವರು ಸವಾಲು ಹಾಕಿದರು.ಜನ ನಾಯಗನ್ ಚಿತ್ರ, ಬಿಡುಗಡೆಗೆ ಅನುಮತಿ ಸಿಗದ ಕಾರಣ ತಮ್ಮ ನಿರ್ಮಾಪಕರು ಬಳಲುತ್ತಿರುವ ಬಗ್ಗೆ ತಮಗೆ ಬೇಸರವಾಗಿದೆ ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

### ತಾಯಿಯ ಬದಲು ಭಯೋತ್ಪಾದನೆ ಆಯ್ದುಕೊಂಡ ಪಾಪಿ ಮಗ

**ಕಿಶ್ತ್ವಾರ್:** ಭಯೋತ್ಪಾದನೆ ತ್ಯಜಿಸಿ ಮನೆಗೆ ಬಾ ಬಂದು ನನ್ನ ಶವ ಪೆಟ್ಟಿಗೆಗೆ ಹೆಗಲು ಕೊಡು ಎಂಬ ತಾಯಿಯ ಕಳಕಳಿಯ ಮನವಿಯನ್ನು ತಿರಸ್ಕರಿಸಿದ ಪಾಪಿ ಮಗನೊಬ್ಬ ಕೊನೆಗೂ ಉಗ್ರ ಲೋಕವನ್ನು ಆರಿಸಿಕೊಂಡಿರುವ ಹೃದಯ ವಿದ್ರಾವಕ ಘಟನೆ ನಡೆದಿದೆ. ಹದಿನೈದು ವರ್ಷಗಳ ಹಿಂದೆ ಮನೆ ತೊರೆದು ಹೋಗಿದ್ದ ಇಲ್ಲಿನ ರಿಯಾಜ್ ಅಹಮದ್ ಎಂಬಾತ ಹಿಜ್ಬುಲ್ ಮುಜಾಹಿದ್ದೀನ್ ಸಂಘಟನೆ ಸೇರಿಕೊಂಡು ದೇಶದ್ರೋಹಿಯಾಗಿ ಮಾರ್ಪಟ್ಟಿದ್ದ ಆತನ ತಲೆಗೆ ಭಾರತೀಯ ಸೇನೆ 10 ಲಕ್ಷ ರೂ.ಗಳ ಬೆಲೆ ಕಟ್ಟಿತ್ತು. ರಿಯಾಜ್ ಕುಟುಂಬ ಬಡತನದ ಬೇಗೆಯಲ್ಲಿ ಬೇಯುತ್ತಿತ್ತು. ಕೊನೆಗಾಲದಲ್ಲಿ ಹಾಸಿಗೆ ಹಿಡಿದ ಆತನ ತಾಯಿ ಜನಂ ಬೇಗಂ ಅವರು ತನ್ನು ಕರುಳ ಕುಡಿಗೆ ಹಿಂತಿರುಗಿ ಬಾ, ನನ್ನನ್ನು ನೋಡಿಕೊ, ನಾನು ಸತ್ತರೆ ನನ್ನ ಶವಪೆಟ್ಟಿಗೆಗೆ ಹೆಗಲು ಕೊಡು ಎಂದು ಬೇಡಿಕೊಂಡಿದ್ದರು.

ತಿಂಗಳ ಹಿಂದೆ, ಬೇಗಂ ತಮ್ಮ ಮಗನಿಗೆ ಇದು ಎಂತಹ ಜಿಹಾದ್, ಅಲ್ಲಿ ಹೆತ್ತವರನ್ನು ತ್ಯಜಿಸಲಾಗುತ್ತದೆ ಭಯೋತ್ಪಾದನೆ ಬೇಡ ಎಲ್ಲವನ್ನೂ ಬಿಟ್ಟು ಬಾ ಎಂದು ಹೃದಯ ವಿದ್ರಾವಕ ಮನವಿ ಮಾಡಿದ್ದರು.ಅವರ ಪತಿ ಮೊಹಮ್ಮದ್ ರಂಜಾನ್ ಕೂಡ ತಮ್ಮ ಮಗ ಹಿಂಸೆಯ ಮಾರ್ಗವನ್ನು ತ್ಯಜಿಸಬೇಕೆಂದು ಒತ್ತಾಯಿಸಿದ್ದರು. ಹಾಸಿಗೆ ಹಿಡಿದಿದ್ದ ತಾಯಿ ತನ್ನ ಮಗನ ಬರುವಿಕೆಗೆ ಕಾಯುತ್ತಲೆ ಪ್ರಾಣ ಬಿಟ್ಟಿದ್ದರು. ಆದರೂ ಆ ಪಾಪಿ ಮಗನ ಹೃದಯ ಕರಗಲೇ ಇಲ್ಲ. ತಾಯಿ ಮಾತಿಗೆ ಬೆಲೆ ಕೊಡದ ಆತ ಆಕೆಯ ಅಂತ್ಯಕ್ರಿಯೆಗೂ ಬರಲೇ ಇಲ್ಲ. ಅವರ ಅಂತಹ ನಿರ್ಧಾರ ಉಗ್ರರು ತನ್ನವರಿಗೆ ಯಾವ ರೀತಿಯ ಬ್ರೈನ್ ವಾಷ್ ಮಾಡುತ್ತಾರೆ ಎಂಬುದಕ್ಕೆ ಸಾಕ್ಷಿಯಂತಿದೆ.

### 65ಸಾವಿರ ಎಚ್-2ಬಿ ವೀಸಾಕ್ಕೆ ನೋಂದಣಿ

**ವಾಷಿಂಗ್ಟನ್:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಸೆಪ್ಟೆಂಬರ್ 30ರವರೆಗೆ ಸುಮಾರು 65,000 ಎಚ್-2ಬಿ ವೀಸಾಕ್ಕಾಗಿ ನೋಂದಣಿ ಆಗಿದೆ ಎಂದು ಅಮೆರಿಕ ಫೆಡರಲ್ ರಿಜಿಸ್ಟರ್ ತಿಳಿಸಿದೆ.ಅಮೆರಿಕಾದಲ್ಲಿ ಕಾರ್ಮಿಕರ ಕೊರತೆಯಿಂದಾಗಿ ತೀವ್ರ ಆರ್ಥಿಕ ಸಂಕಷ್ಟದ ಅಪಾಯದಲ್ಲಿರುವ ಉದ್ಯೋಗದಾತರಿಗೆ ವೀಸಾಗಳು ಲಭ್ಯವಿರುತ್ತವೆ ಎಂದು ಹೇಳಲಾಗಿದೆ.

ಅದರಲ್ಲಿಯೂ ನಿರ್ಮಾಣ, ಆತಿಥ್ಯ, ಭೂದೃಶ್ಯ ಮತ್ತು ಸಮುದ್ರಾಹಾರ ಸಂಸ್ಕರಣೆಯಂತಹ ವ್ಯವಹಾರಗಳಿಗೆ ಪ್ರತಿ ವರ್ಷ ಲಭ್ಯವಿರುವ 66,000 ವೀಸಾಗಳನ್ನು ಈ ಕ್ರಮ ಸರಿಸುಮಾರು ದ್ವಿಗುಣಗೊಳಿಸಿದೆ, ಕೈಗಾರಿಕೆಗಳಲ್ಲಿನ ಅಮೇರಿಕಾ ಉದ್ಯೋಗದಾತರು ಕಾರ್ಮಿಕರನ್ನು ಹುಡುಕಲು ಹೆಣಗಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಹೆಚ್ಚುವರಿ ಎಚ್-2ಬಿ ವೀಸಾಗಳನ್ನು ಲಭ್ಯವಾಗುವಂತೆ ಮಾಡುವ ತಾತ್ಕಾಲಿಕ ನಿಯಮವನ್ನು ಫೆಡರಲ್ ರಿಜಿಸ್ಟರ್‌ನಲ್ಲಿ ಔಪಚಾರಿಕವಾಗಿ ಪ್ರಕಟಿಸಲಾಗುವುದು ಎಂದು ಸೂಚನೆಯಲ್ಲಿ ತಿಳಿಸಲಾಗಿದೆ. 2025 ರಲ್ಲಿ ಶ್ವೇತಭವನಕ್ಕೆ ಹಿಂದಿರುಗಿದ ನಂತರ, ರಿಪಬ್ಲಿಕನ್ ಪಕ್ಷದ ಟ್ರಂಪ್ ವ್ಯಾಪಕ ವಲಸೆ ನಿಗ್ರಹ ಕ್ರಮವನ್ನು ಪ್ರಾರಂಭಿಸಿದ್ದು ಕಾನೂನು ಸ್ಥಾನಮಾನವಿಲ್ಲದ ವಲಸಿಗರನ್ನು ಅಪರಾಧಿಗಳು ಮತ್ತು ಅವರ ಸಮುದಾಯಗಳ ಮೇಲೆ ಬರಿದಾಗುವಿಕೆ ಎಂದು ಚಿತ್ರಿಸಲಾಗಿದೆ. ಮಾಜಿ ಅಧ್ಯಕ್ಷ ಜೋ ಬಿಡೆನ್, ಡೆಮೋಕ್ರಾಟ್ ಮತ್ತು ಅಮೆರಿಕಾ ಅಧ್ಯಕ್ಷ ಟ್ರಂಪ್ ಅವರ 2017-2021ರ ಅಧ್ಯಕ್ಷತೆಯ ಅವಧಿಯಲ್ಲಿ ಲಭ್ಯವಿರುವ ವೀಸಾಗಳ ಸಂಖ್ಯೆಯನ್ನು ವಿಸ್ತರಿಸಲಾಗಿದೆ.

### ಮಹಾರಾಷ್ಟ್ರಕ್ಕೆ ಮಹಿಳಾ ಡಿಸಿಎಂ

**ಮುಂಬೈ:** ವಿಮಾನಾಪಘಾತದಲ್ಲಿ ದುರ್ಮರಣ ಅಪ್ಪಿದ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಈ ಮೂಲಕ ತಮ್ಮ ಪತಿಯ ಸ್ಥಾನವನ್ನು ಅವರು ತುಂಬಿದ್ದಾರೆ. ಮಹಾರಾಷ್ಟ್ರದ ರಾಜಕೀಯದಲ್ಲಿ ಸುನೇತ್ರಾ ಪವಾರ್ ಹೊಸ ಅಧ್ಯಾಯ ಆರಂಭಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಮಹಿಳೆಯೊಬ್ಬರು ಮುಖ್ಯಮಂತ್ರಿಯಾಗಲೀ, ಉಪಮುಖ್ಯಮಂತ್ರಿಯಾಗಲೀ ಆಗಿದ್ದಿಲ್ಲ. ಸುನೇತ್ರಾ ಅವರು ಮಹಾರಾಷ್ಟ್ರದ ಮೊದಲ ಮಹಿಳಾ ಡಿಸಿಎಂ ಎನ್ನುವ ದಾಖಲೆಯನ್ನಂತೂ ಮಾಡಿದ್ದಾರೆ. ತಮ್ಮ ಪತಿಯ ನೆರಳಿನಲ್ಲೇ ಬಹುತೇಕ ಜೀವನ ಸವೆಸಿದ ಸುನೇತ್ರಾ ಪವಾರ್ 61ನೇ ವಯಸ್ಸಿನಲ್ಲಿ ಸಕ್ರಿಯ ರಾಜಕಾರಣ ಪ್ರವೇಶ ಮಾಡಿದ್ದರು. ಪ್ರಬಲ ರಾಜಕೀಯ ವ್ಯಕ್ತಿಗಳಿರುವ ಕುಟುಂಬದಲ್ಲೇ ಹುಟ್ಟಿ ಬೆಳೆದರೂ ಕುಟುಂಬ ಪಾಲನೆಯಲ್ಲೇ ಹೆಚ್ಚಿನ ಸಮಯ ಕಳೆದಿದ್ದರು. ಅವರ ಸಹೋದರ ಪದಂಸಿಂಗ್ ಬಾಜಿರಾವ್ ಪಾಟೀಲ್ ಅವರು ಮಾಜಿ ಸಚಿವರು, ಹಾಗೂ ಎನ್‌ಸಿಪಿ ಪಕ್ಷದ ಆರಂಭಿಕರಲ್ಲಿ ಒಬ್ಬರು. ಶರದ್ ಪವಾರ್ ಅವರ ಆಪ್ತರೂ ಹೌದು. ಪ್ರಬಲ ರಾಜಕೀಯ ಕುಟುಂಬದ ಹಿನ್ನೆಲೆಯಿದ್ದರೂ ಸುನೇತ್ರಾ, ಸಕ್ರಿಯ ರಾಜಕಾರಣಕ್ಕೆ ಬರಲು 61ನೇ ವಯಸ್ಸು ದಾಟಬೇಕಾಯಿತು.

# ಸಿಜೆ ರಾಯ್ ಸ್ನೇಹಿತನಿಗೂ ಮಿಗಿಲು

ಮೋಹನ್ ಲಾಲ್ ಭಾವನಾತ್ಮಕ ಪೋಸ್ಟ್

ಅಗಲಿದ ಸಿಜೆ ರಾಯ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿರುವ ನಟ ಮೋಹನ್ ಲಾಲ್ , ಅವರು 'ಸ್ನೇಹಿತನಿಗೂ ಮಿಗಿಲು' ಎಂದು ಹೇಳಿಕೊಂಡಿದ್ದಾರೆ. ಎಕ್ಸ್‌ನಲ್ಲಿ ಈ ಬಗ್ಗೆ ಪೋಸ್ಟ್ ಮಾಡಿರುವ ಅವರು ಸಿಜೆ ರಾಯ್ ಅಗಲಿಕೆ ನನಗೆ ತೀವ್ರ ನೋವು ತಂದಿದೆ. ಅವರ ಬಾಂಧವ್ಯ ಸ್ನೇಹವನ್ನೂ ಮೀರಿದ್ದು. ಅನೇಕ ಸಾಮಾಜಿಕ ಚಟುವಟಿಕೆಗಳಲ್ಲಿ ಯಾವಾಗಲೂ ಅವರು ಮುಂಚೂಣಿಯಲ್ಲಿದ್ದರು ಎಂದು ಬರೆದುಕೊಂಡಿದ್ದಾರೆ.

ಈ ದುಃಖದ ಸಮಯದಲ್ಲಿ ನಾನು ಅವರ ಕುಟುಂಬದ ಜೊತೆ ನಿಲ್ಲುತ್ತೇನೆ. ನಮ್ಮ ಸಂಬಂಧ ಸ್ನೇಹಕ್ಕಿಂತ ಹತ್ತಿರವಾಗಿತ್ತು. ಅವರನ್ನು ಯಾವಾಗಲೂ ಮರೆಯಲು ಸಾಧ್ಯವಿಲ್ಲ ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.



ಕೇರಳ ಮೂಲದ ಖ್ಯಾತ ಉದ್ಯಮಿ ಕಾನ್ಫಿಡೆಂಟ್ ಗ್ರೂಪ್ ಸಿಇಓ ಸಿ.ಜೆ ರಾಯ್ ಅವರು ಶುಕ್ರವಾರ (ಜ.30) ಬೆಂಗಳೂರಿನಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಆದಾಯ ತೆರಿಗೆ ಇಲಾಖೆಯಿಂದ ಪದೇ ಪದೇ ಆದ ದಾಳಿಗೆ ಹೆದರಿ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಯ ಬಗ್ಗೆ ಪೊಲೀಸರು ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಈ ಸಂಬಂಧ ಕಾನ್ಫಿಡೆಂಟ್ ಗ್ರೂಪ್ ನಿರ್ದೇಶಕ ಟಿಜೆ ಜೋಸೆಫ್ ಪೊಲೀಸರಿಗೆ ದೂರು ನೀಡಿದ್ದಾರೆ. ಬೆಂಗಳೂರು ಕೇಂದ್ರ ಡಿಸಿಪಿ ಪ್ರಕರಣದ ತನಿಖೆಯ ಉಸ್ತುವಾರಿ ವಹಿಸಿದ್ದಾರೆ.

# ಕನ್ನಡದ ನಿರ್ಮಾಪಕನ ಬಗ್ಗೆ ಮರುಕ ವ್ಯಕ್ತಪಡಿಸಿದ ದಳಪತಿ ವಿಜಯ್



ಜನವರಿ 9ರಂದು 'ಜನ ನಾಯಗನ್' ಸಿನಿಮಾ ರಿಲೀಸ್ ಆಗಬೇಕಿತ್ತು. ತಿಂಗಳು ಕಳೆಯುತ್ತಾ ಬಂದರೂ ಸಿನಿಮಾ ರಿಲೀಸ್ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ನಿರ್ಮಾಪಕರು ದೊಡ್ಡ ನಷ್ಟ ಅನುಭವಿಸುತ್ತಿದ್ದಾರೆ. ಥಿಯೇಟರ್ ಸೆಟಪ್ ಮಾಡಿಕೊಳ್ಳಲು ಹಾಕಿದ ಶ್ರಮ ವ್ಯರ್ಥವಾಗಿದೆ. ಈ ಎಲ್ಲಾ ವಿಷಯದ ಬಗ್ಗೆ ವಿಜಯ್ ಮಾತನಾಡಿದ್ದಾರೆ.

ದಳಪತಿ ವಿಜಯ್ ನಟನೆಯ 'ಜನ ನಾಯಗನ್' ಸಿನಿಮಾ ರಿಲೀಸ್ ವಿಳಂಬ ಆಗುತ್ತಲೇ ಇದೆ. ಸೆನ್ಸಾರ್ ಮಂಡಳಿಯವರು ಸಿನಿಮಾಗೆ ಪ್ರಮಾಣಪತ್ರ ನೀಡದೇ ಇರುವ ವಿಷಯಕ್ಕೆ ಸಂಬಂಧಿಸಿದ ಪ್ರಕರಣ ಕೆಳ ಹಂತದ ನ್ಯಾಯಾಯಲಯ, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಆಗಿದೆ. ಆದರೆ, ಎಲ್ಲಿಯೂ ಸಿನಿಮಾ ತಂಡಕ್ಕೆ ಲಾಭ ಆಗುವ ಬೆಳವಣಿಗೆ ನಡೆದಿಲ್ಲ. ಈ ಚಿತ್ರವನ್ನು ಕನ್ನಡದ 'ಕೆವಿಎನ್ ಪ್ರೊಡಕ್ಷನ್ಸ್' ನಿರ್ಮಾಣ ಮಾಡಿದೆ. ನಿರ್ಮಾಪಕರ ಸ್ಥಿತಿ ಕಂಡು ವಿಜಯ್ ಮರುಗಿದ್ದಾರೆ. ಜನವರಿ 9ರಂದು 'ಜನ ನಾಯಗನ್' ಸಿನಿಮಾ ರಿಲೀಸ್ ಆಗಬೇಕಿತ್ತು. ತಿಂಗಳು ಕಳೆಯುತ್ತಾ ಬಂದರೂ ಸಿನಿಮಾ ರಿಲೀಸ್ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ನಿರ್ಮಾಪಕರು ದೊಡ್ಡ ನಷ್ಟ ಅನುಭವಿಸುತ್ತಿದ್ದಾರೆ. ಥಿಯೇಟರ್ ಸೆಟಪ್ ಮಾಡಿಕೊಳ್ಳಲು ಹಾಕಿದ ಶ್ರಮ ವ್ಯರ್ಥವಾಗಿದೆ. ಈ ಎಲ್ಲಾ ವಿಷಯದಲ್ಲಿ ವಿಜಯ್ ಮೌನ ಕಾಯ್ದುಕೊಂಡಿದ್ದರು. ಈಗ ಆ ಬಗ್ಗೆ ಮಾತನಾಡಿದ್ದಾರೆ.

'ನನ್ನ ರಾಜಕೀಯ ಪ್ರವೇಶದ ಕಾರಣದಿಂದ ಜನ ನಾಯಗನ್ ಚಿತ್ರಕ್ಕೆ ತೊಂದರೆ ಆಗುತ್ತಿದೆ. ನನ್ನ ನಿರ್ಮಾಪಕರ ಬಗ್ಗೆ ನನಗೆ ಬೇಸರವಾಗುತ್ತಿದೆ. ನನ್ನ ರಾಜಕೀಯ ಪ್ರವೇಶದಿಂದಾಗಿ ನನ್ನ ಚಿತ್ರಕ್ಕೆ ತೊಂದರೆಯಾಗುತ್ತದೆ ಎಂದು ನನಗೆ ತಿಳಿದಿತ್ತು. ನಾನು ಇದಕ್ಕೆ ಮಾನಸಿಕವಾಗಿ ಸಿದ್ಧನಾಗಿದ್ದೆ' ಎಂದು ಅವರು ಹೇಳಿದ್ದಾರೆ.



# ಕನ್ನಡ ಚಿತ್ರವನ್ನು ಹೃದಯದಲ್ಲಿ ಹೊತ್ತು ನಡೆಯುತ್ತೇನೆ

ವಿಶೇಷ ಪ್ರತಿಜ್ಞೆ ಮಾಡಿದ ಸುದೀಪ್

ಸುದೀಪ್ ಬಣ್ಣದ ಲೋಕಕ್ಕೆ ಕಾಲಿಟ್ಟು 30 ವರ್ಷಗಳು ಕಳೆದಿವೆ. ಹಲವು ಸೂಪರ್ ಹಿಟ್ ಚಿತ್ರಗಳನ್ನು ಅವರು ನೀಡಿದ್ದಾರೆ. 'ಮೂವತ್ತು ವರ್ಷಗಳ ಸಾರ್ಥಕ ಪಯಣ' ಎಂದು ಸುದೀಪ್ ಪತ್ರ ಆರಂಭಿಸಿದ್ದಾರೆ. ಅದೇ ರೀತಿ ವೃತ್ತಿ ಜೀವನದಲ್ಲಿ ಯಾರ ಪಾತ್ರ ಯಾವ ರೀತಿ ಇದೆ ಎಂಬುದನ್ನು ವಿವರಿಸಿದ್ದಾರೆ ಸುದೀಪ್.

ಅಭಿಮಾನಿಗಳು: ನನ್ನ ಶಕ್ತಿ, ನೀವೇ ನನ್ನ ಪ್ರೇರಣೆ. ನಾನು ಪ್ರತಿದಿನ ಕೆಲಸಕ್ಕೆ ಬರಲು ನೀವೇ ಕಾರಣ.

ನಿರ್ದೇಶಕರು ಮತ್ತು ಬರಹಗಾರರು: ನಿಮ್ಮ ಕಥೆಗಳಿಗೆ ನಾನು ಸರಿ ಹೊಂದುತ್ತೇನೆ ಎಂದು ನಂಬಿ ಜವಾಬ್ದಾರಿ ನೀಡಿದ್ದಕ್ಕಾಗಿ, ನನ್ನನ್ನು ಹುರಿದುಂಬಿಸಿದ್ದಕ್ಕಾಗಿ ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಮೇಲೆ ಭರವಸೆ ಇಟ್ಟಿದ್ದಕ್ಕಾಗಿ ಧನ್ಯವಾದಗಳು.

ಕನ್ನಡ ಚಿತ್ರರಂಗ: ನೀವು ನನಗೆ ಗುರುತು, ಹೆಮ್ಮೆ. ಚಿತ್ರರಂಗ ನನಗೆ ನೆಲೆ ನೀಡಿದೆ. ನಾನು ಸದಾ ಕನ್ನಡ ಚಿತ್ರವನ್ನು ನನ್ನ ಹೃದಯದಲ್ಲಿ ಹೊತ್ತು ನಡೆಯುತ್ತೇನೆ.

ನನ್ನ ಕುಟುಂಬ ಹಾಗೂ ಸ್ನೇಹಿತರು: ಈ ಎಲ್ಲಾ ಏರಿಳಿತಗಳ ನಡುವೆ ನನ್ನನ್ನು ಸಾಮಾನ್ಯ ಮನುಷ್ಯನನ್ನಾಗಿ ನೀವು ನೋಡಿದ್ದೀರಿ. ನಾನು ಹೇಗಿದ್ದೇನೋ ಹಾಗೆ ಸ್ವೀಕರಿಸಿದ್ದಕ್ಕೆ ಧನ್ಯವಾದ.

'ಈ 30 ವರ್ಷಗಳು ನನಗೆ ಒಂದು ಪಾಠ ಕಲಿಸಿದ್ದರೆ ಅದು 'ಮಾನವೀಯತೆ'. ಪ್ರತಿಯೊಂದು ಗೆಲುವೂ ನಮಗೆ ದಕ್ಕಿದ ಪ್ರಸಾದ. ನಾನು ಇನ್ನೂ ಕಠಿಣವಾಗಿ ಶ್ರಮಿಸುತ್ತೇನೆ, ಕಲೆಯನ್ನು ಗೌರವಿಸುತ್ತೇನೆ ಮತ್ತು ಸಿನಿಮಾ ನನಗೆ ನೀಡಿದ್ದನ್ನು ಮರಳಿ ನೀಡುತ್ತೇನೆ ಎಂದು ಭರವಸೆ ನೀಡುತ್ತೇನೆ. ಕೈಮುಗಿದು, ಕೃತಜ್ಞತಾ ಭಾವದೊಂದಿಗೆ, ನಿಮ್ಮೆಲ್ಲರಿಗೂ ನನ್ನ ಹೃದಯಾಂತರಾಳದ ಧನ್ಯವಾದಗಳು' ಎಂದು ಸುದೀಪ್ ಪತ್ರ ಪೂರ್ಣಗೊಳಿಸಿದ್ದಾರೆ.

# ಉತ್ತರಕಾಂಡ ಸಿನಿಮಾ ನಿಂತಿದ್ದು ಏಕೆ

ಡಾಲಿ ಧನಂಜಯ್ ಉತ್ತರ



ರೋಹಿತ್ ಪದಕಿ ಡಾಲಿ ಧನಂಜಯ್ ಕಾಂಬಿನೇಷನ್‌ನಲ್ಲಿ 'ಉತ್ತರಕಾಂಡ' ಸಿನಿಮಾ ಘೋಷಣೆಗಿ ವರ್ಷಗಳೇ ಕಳೆದಿವೆ. ಸಿನಿಮಾದ ಟೀಸರ್ ಸಹ ಬಿಡುಗಡೆ ಆಗಿ ಸಖತ್ ನಿರೀಕ್ಷೆ ಹುಟ್ಟಿಸಿತ್ತು. ಅದೇ ಸಿನಿಮಾನಲ್ಲಿ ಶಿವರಾಜ್ ಕುಮಾರ್, ರಮ್ಯಾ ಅವರುಗಳು ಸಹ ನಟಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಹಠಾತ್ತಾಗಿ ಸಿನಿಮಾದ ಸುದ್ದಿಯೇ ಇಲ್ಲದಾಗಿದೆ ಸಿನಿಮಾ ನಿಂತು ಹೋಯ್ತೆ ಡಾಲಿ ಹೇಳಿದ್ದೇನು

ಡಾಲಿ ಧನಂಜಯ್ ಸಿನಿಮಾ ವೃತ್ತಿ ಜೀವನದಲ್ಲಿ 'ರತ್ನನ್ ಪ್ರಪಂಚ' ಒಂದು ಅಪರೂಪದ ಮತ್ತು ಅತ್ಯುತ್ತಮ ಸಿನಿಮಾ ಸಹ ಹೌದು. ಆ ಸಿನಿಮಾವನ್ನು ರೋಹಿತ್ ಪದಕಿ ನಿರ್ದೇಶನ ಮಾಡಿದ್ದರು. ಆ ಸಿನಿಮಾದ ಅದ್ಭುತ ಯಶಸ್ಸಿನ ಬಳಿಕ ರೋಹಿತ್ ಪದಕಿ ಡಾಲಿ ಧನಂಜಯ್ ಕಾಂಬಿನೇಷನ್‌ನಲ್ಲಿ 'ಉತ್ತರಕಾಂಡ' ಸಿನಿಮಾ ಘೋಷಣೆಯಾಯ್ತು. ಸಿನಿಮಾದ ಟೀಸರ್ ಸಹ ಬಿಡುಗಡೆ ಆಗಿ ಸಖತ್ ನಿರೀಕ್ಷೆ ಹುಟ್ಟಿಸಿತ್ತು. ಅದೇ ಸಿನಿಮಾನಲ್ಲಿ ಶಿವರಾಜ್ ಕುಮಾರ್, ರಮ್ಯಾ ಅವರುಗಳು ಸಹ ನಟಿಸಲಿದ್ದಾರೆ ಎನ್ನಲಾಗಿತ್ತು. ಆದರೆ ಹಠಾತ್ತಾಗಿ ಸಿನಿಮಾದ ಸುದ್ದಿಯೇ ಇಲ್ಲದಾಗಿದೆ ನಿನ್ನೆ ನಟ ಡಾಲಿ ಧನಂಜಯ್ ಅವರು ಸುದ್ದಿಗೋಷ್ಠಿಯೊಂದನ್ನು ಕರೆದಿದ್ದರು. ಈ ವೇಳೆ 'ಉತ್ತರಕಾಂಡ' ಸಿನಿಮಾ ನಿಂತೇ ಹೋಯ್ತೆ' ಎಂಬ ಪ್ರಶ್ನೆ ಡಾಲಿಗೆ ಎದುರಾಯ್ತು, ಪ್ರಶ್ನೆಗೆ ಉತ್ತರಿಸಿದ ಧನಂಜಯ್, 'ಉತ್ತರಕಾಂಡ ಸದ್ಯಕ್ಕೆ ಆಗಿಲ್ಲ, ನಿಂತಿದೆ. ಬೇರೆ ಬೇರೆ ಕಾರಣಕ್ಕೆ ಕೆಲವು ಪ್ರಾಜೆಕ್ಟ್‌ಗಳು ನಿಧಾನ ಆಗುತ್ತಾ ಹೋಗುತ್ತವೆ. ಆದರೆ ಅದನ್ನು ಹಾಗೆ ಬಿಡುವುದಿಲ್ಲ ಖಂಡಿತ ಮಾಡುತ್ತೀವಿ, ಪೂರ್ತಿ ಮಾಡಿ ಜನರ ಎದುರು ತೆಗೆದುಕೊಂಡು ಹೋಗುತ್ತೇವೆ.

ಶಿವಣ್ಣ ಜೊತೆಗೂ ಮಾತನಾಡಿದ್ದೇನೆ' ಎಂದಿದ್ದಾರೆ ಡಾಲಿ. ಮುಂದುವರೆದು, 'ಉತ್ತರಕಾಂಡ' ಸಿನಿಮಾದ ಚಿತ್ರಕತೆ ಕೆಲಸ ಸದ್ಯಕ್ಕೆ ಚಾಲ್ತಿಯಲ್ಲಿದೆ. ಸಿನಿಮಾ ತಡ ಆಗಿದ್ದರಿಂದ ಮೊದಲಿನ ಚಿತ್ರಕತೆಗೆ ಸಾಕಷ್ಟು ಬದಲಾವಣೆ, ಇನ್ನಷ್ಟು ಹರಿತಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ.

ಸಿನಿಮಾವನ್ನು ಬಹಳ ದೊಡ್ಡದಾಗಿ, ಭಿನ್ನವಾಗಿ ತೆರೆಗೆ ತರುವ ಯೋಚನೆ ನಮಗೆ ಇದೆ. ಎಲ್ಲೇ ಹೋದರು 'ಉತ್ತರಕಾಂಡ' ಸಿನಿಮಾದ ಬಗ್ಗೆಯೇ ಕೇಳುತ್ತಾರೆ. ಹಾಗಾಗಿ ಸದ್ಯಕ್ಕೆ ನನ್ನ ಸಿನಿಮಾಗಳ ಚಿತ್ರೀಕರಣವನ್ನು ಮುಗಿಸಿ 'ಉತ್ತರಕಾಂಡ' ಸಿನಿಮಾ ಶುರು ಮಾಡುತ್ತೀವಿ' ಎಂದು ಭರವಸೆ ನೀಡಿದ್ದಾರೆ. ಡಾಲಿ ಧನಂಜಯ್ ಅವರು ನಾಯಕನಾಗಿ ನಟಿಸಿದ ಕನ್ನಡ ಸಿನಿಮಾ ಒಂದು ಬಿಡುಗಡೆ ಆಗಿ ಸುಮಾರು ಎರಡು ವರ್ಷಗಳಾಗುತ್ತಾ ಬಂತು. ಇದೀಗ ಅವರ ಕೈಯಲ್ಲಿ ಹಲವು ಸಿನಿಮಾಗಳಿವೆ.

# ನಿನ್ನ ಬಾಡಿ ನೋಡ್ಬೇಕು

ಕಹಿ ಘಟನೆ ಬಿಚ್ಚಿಟ್ಟ ಐಶ್ವರ್ಯ



ಸಿನಿಮಾ ರಂಗದಲ್ಲಿ ಆಗಾಗ ಕಾಸ್ಟಿಂಗ್ ಕೌಚ್ ವಿಚಾರ ಸದ್ದು ಮಾಡುತ್ತಲೇ ಇರುತ್ತದೆ. ಇದೀಗ ನಟಿ ಐಶ್ವರ್ಯ ರಾಜೇಶ್ ತಮಗಾದ ಕಹಿ ಅನುಭವವನ್ನು ಜನರ ಮುಂದೆ ಬಿಚ್ಚಿಟ್ಟಿದ್ದಾರೆ. ಈ ವಿಚಾರವಾಗಿ ಮಾತಾಡಿರುವ ಐಶ್ವರ್ಯ ರಾಜೇಶ್, ನಾನು ಚಿತ್ರರಂಗಕ್ಕೆ ಬರುವ ಮುನ್ನ ನಮ್ಮ ಅಣ್ಣನ ಜೊತೆ ಒಂದು ಫೋಟೊಶೂಟ್‌ಗೆ ಹೋಗಿದ್ದೆ. ನಮ್ಮ ಅಣ್ಣನನ್ನು ಸ್ಟುಡಿಯೋದ ಹೊರಗಡೆ ಕೂರಿಸಿ ನನಗೆ ಒಂದು ತುಂಡು ಬಟ್ಟೆ ಕೊಟ್ಟರು. ಇದನ್ನು ಹಾಕ್ಕೊಂಡು ಬಾ, ನಿನ್ನ ಬಾಡಿ ನೋಡಬೇಕು ಎಂದ್ರು. ಯಾವ ಆಂಗಲ್‌ನಲ್ಲಿ ಹೇಗೆ ಕಾಣ್ತೆಯಾ, ಹೇಗೆ ಫೋಟೊ ಹಿಡಿಯಬಹುದು ಅಂತೆಲ್ಲಾ ಹೇಳ್ತಿದ್ರು. ಮೂವರು ಆ ಬಟ್ಟೆ ಹಾಕಿಕೊಳ್ಳುವಂತೆ ನನ್ನ ಮನವೊಲಿಸುವ ಪ್ರಯತ್ನ ಮಾಡಿದ್ರು. ನಾನು ಒಪ್ಪಿಕೊಳ್ಳುವ ಹಂತಕ್ಕೆ ಹೋಗಿದ್ದೆ. ಅಷ್ಟರಲ್ಲಿ ನನಗೆ ಏನು ಅನ್ನಿಸಿತೋ ಗೊತ್ತಿಲ್ಲ, ನಮ್ಮ ಅಣ್ಣನ ಅನುಮತಿ ಕೇಳಬೇಕು ಎಂದು ಹೊರಗೆ ಬಂದುಬಿಟ್ಟೆ ಎಂದಿದ್ದಾರೆ. ಇದೇ ರೀತಿ ಎಷ್ಟು ಹೆಣ್ಣು ಮಕ್ಕಳಿಗೆ ಹೀಗೆ ನಡೆದಿದೆಯೋ ಗೊತ್ತಿಲ್ಲ. ಆ ಘಟನೆ ಮಾತ್ರ ನನ್ನ ಮನಸ್ಸಿನಲ್ಲೇ ಉಳಿದುಬಿಟ್ಟಿದೆ. ಈ ಬಗ್ಗೆ ಸಾಕಷ್ಟು ಜನರಿಗೆ ಹೇಳಿ ಆ ಫೋಟೊ ಸ್ಟುಡಿಯೋ ಬಗ್ಗೆ ಕಂಪ್ಲೇಟ್ ಮಾಡಿದ್ದೆ ಎಂದು ಅವರು ವಿವರಿಸಿದ್ದಾರೆ. ಶೂಟಿಂಗ್‌ಗೆ 10 ನಿಮಿಷ ತಡವಾಗಿ ಬಂದಿದ್ದಕ್ಕೆ ನಿರ್ದೇಶಕ ಬೈದಿದ್ದರು. ಅದನ್ನೂ ಸಹ ಮರೆಯಲು ಸಾಧ್ಯವಿಲ್ಲ.. ಅವರು ಮತ್ತೊಬ್ಬ ನಟಿಯ ಜೊತೆ ಹೋಲಿಕೆ ಮಾಡಿ ಮಾತನಾಡಿದ್ದರು. ತಪ್ಪು ಮಾಡದೇ ಇದ್ದರೂ ನೂರಾರು ಸಹ ಕಲಾವಿದರ ಮುಂದೆ ಬೈದಿದ್ದು ಬೇಸರ ತಂದಿತ್ತು.

# ಕಿವೀಸ್ ಕಿವಿ ಹಿಂಡಿದ ಕಿಶನ್

ಪಾಕೆಟ್ ಡೈನಮೋ ಬ್ಲಾಸ್ಟ್!

4-1ರಲ್ಲಿ ಸರಣಿ ಗೆದ್ದ ಟೀಮ್ ಇಂಡಿಯಾ



ತಿರುವನಂತಪುರಂನ ಗ್ರೀನ್ ಫೀಲ್ಡ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡ ನ್ಯೂಜಿಲ್ಯಾಂಡ್ ವಿರುದ್ಧ ಸಂಪೂರ್ಣ ಪ್ರಾಬಲ್ಯ ಸಾಧಿಸಿ ಗೆಲುವು ಸಾಧಿಸಿತು. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ಇಶಾನ್ ಕಿಶನ್ ಅವರ ಭರ್ಜರಿ ಶತಕದ ನೆರವಿನಿಂದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 271 ರನ್ ಗಳಿಸಿತು. 272 ರನ್‌ಗಳ ಗುರಿ ಬೆನ್ನಟ್ಟಿದ ಕಿವೀಸ್ ಪಡೆ 20 ಓವರ್‌ಗಳಲ್ಲಿ ಎಲ್ಲಾ ವಿಕೆಟ್ ಕಳೆದುಕೊಂಡು 225ಕ್ಕೆ ಆಲೌಟ್ ಆಗುವ ಮೂಲಕ 46 ರನ್‌ಗಳ ಸೋಲು ಕಂಡಿತು.

ಈ ಗೆಲುವಿನೊಂದಿಗೆ ಭಾರತ ತಂಡ 5 ಪಂದ್ಯಗಳ ಸರಣಿಯನ್ನ 4-1ರಲ್ಲಿ ವಶಪಡಿಸಿಕೊಂಡಿತು.

ಭಾರತ ನೀಡಿದ್ದ 272 ರನ್‌ಗಳ ಬೃಹತ್ ಗುರಿಯನ್ನ ಬೆನ್ನಟ್ಟಿದ ನ್ಯೂಜಿಲ್ಯಾಂಡ್ ತಂಡ ಮೊದಲ ಓವರ್‌ನಲ್ಲೇ ಟಿಮ್ ಸೀಫರ್ಟ್ (5) ವಿಕೆಟ್ ಕಳೆದುಕೊಂಡಿತು. ಆದರೆ 2ನೇ ವಿಕೆಟ್‌ಗೆ ಜೊತೆಗೂಡಿದ ಫಿನ್ ಅಲೆನ್ ಗಾಗೂ ರಚಿನ್ ರವೀಂದ್ರ, ಭಾರತೀಯ ಬೌಲರ್‌ಗಳ ದಾಳಿಯನ್ನ ಧೂಳೀಪಟ ಮಾಡಿದರು. ಈ ಇಬ್ಬರು 48 ಎಸೆತಗಳಲ್ಲಿ 100 ರನ್ ಸೇರಿಸಿದರು. ಇವರಿಬ್ಬರ ಅಬ್ಬರಕ್ಕೆ ತಂಡದ ಮೊತ್ತ 8 ಓವರ್‌ಗಳಲ್ಲೇ 100 ರ ಗಡಿ ದಾಟಿತು.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ನ್ಯೂಜಿಲ್ಯಾಂಡ್ ಬೌಲರ್‌ಗಳನ್ನ ಧೂಳೀಪಟ ಮಾಡಿದೆ. ವಿಶ್ವಕಪ್‌ಗೂ ಮುನ್ನ ಬೌಲಿಂಗ್ ಮತ್ತು ಡಿಫೆಂಡಿಂಗ್ ಸಾಮರ್ಥ್ಯವನ್ನ ಪರೀಕ್ಷಿಸಲು ಮೊದಲು ಬ್ಯಾಟಿಂಗ್ ಮಾಡುವ ತೀರ್ಮಾನ ತೆಗೆದುಕೊಂಡಿತು. ಸರಣಿಯಲ್ಲಿ ಅಮೋಘ ಫಾರ್ಮ್‌ನಲ್ಲಿರುವ ಅಭಿಷೇಕ್ ಶರ್ಮಾ ಕೇವಲ 30 ರನ್‌ಗಳಿಸಿ ಔಟ್ ಆದರೂ, ಇಶಾನ್ ಕಿಶನ್ ಭಾರತದ ಕೈ ಹಿಡಿದರು. ಕಿಶನ್ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಸಿಡಿಸಿದರೆ, ಸೂರ್ಯಕುಮಾರ್ ಯಾದವ್ 63, ಹಾರ್ದಿಕ್ ಪಾಂಡ್ಯ 42 ರನ್ ಗಳಿಸಿ 271 ರನ್‌ಗಳ ಬೃಹತ್ ಮೊತ್ತಕ್ಕೆ ಕಾರಣರಾದರು.

**ಚೊಚ್ಚ ಸತಕ ಸಿಡಿಸಿದ ಇಶಾನ್ ಕಿಶನ್:** ಹೌದು, ಇಶಾನ್ ಕಿಶನ್ ಇಂದು ಅಕ್ಷರಶಹ ರೌದ್ರಾವತಾರ ತಾಳಿದ್ದರು. ಕಿಶನ್ ನ್ಯೂಜಿಲ್ಯಾಂಡ್ ವಿರುದ್ಧ ಜಸ್ಟ್ 43 ಎಸೆದತಲ್ಲಿ 6 ಬೌಂಡರಿ ಮತ್ತು 10 ಸಿಕ್ಸ್‌ಗಳ ಸಹಿತ 239.53ರ ಸ್ಟ್ರೈಕ್ ರೇಟ್‌ನಲ್ಲಿ 103 ರನ್ ಸಿಡಿಸಿದರು. ಕಿಶನ್ ತಮ್ಮ 36 ನೇ ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ತಮ್ಮ ಮೊದಲ ಶತಕ ಗಳಿಸಿದರು. ಅದರಲ್ಲಿಯೂ ಕಿವೀಸ್ ಸ್ಪಿನ್ನರ್ ಇಶ್ ಸೋಧಿ ಓವರ್‌ನಲ್ಲಿ ಅಬ್ಬರಿಸಿದರು. ಇನ್ನಿಂಗ್ಸ್‌ನ 12ನೇ ಓವರ್ ಬೌಲ್ ಮಾಡಿದ ಇಶ್ ಸೋಧಿ ವಿರುದ್ಧ ಕಿಶನ್ ಒಂದೇ ಓವರ್‌ನಲ್ಲಿ ಬರೋಬ್ಬರಿ 28 ರನ್ ಗಳಿಸಿದರು.

ಇಶ್ ಸೋಧಿ ಓವರ್ನ ಮೊದಲ ಎಸೆತ ವೈಡ್ ಆಗಿದ್ದರೆ, ನಂತರ ಇಶಾನ್ ಕಿಶನ್ ಸತತ ಮೂರು ಬೌಂಡರಿಗಳನ್ನು ಬಾರಿಸಿದರು. ನಾಲ್ಕನೇ ಎಸೆತವನ್ನು ಸಿಕ್ಸ್ ಸಿಡಿಸಿದರು. ಬಳಿಕ ಮತ್ತೊಂದು ಫೋರ್ ಚಚ್ಚಿದರು ಮತ್ತು ಓವರ್‌ನ ಕೊನೆಯ ಎಸೆತವನ್ನು ಮತ್ತೆ ಸಿಕ್ಸ್‌ಬಾರಿಸಿದರು. ಈ ಮೂಲಕ ಒಂದೇ ಓವರ್‌ನಲ್ಲಿ 28 ರನ್ ಸಿಡಿಸಿದರು. ಇನ್ನು, ಇಶಾನ್ ಕಿಶನ್ ತಮ್ಮ ಶತಕದ ಇನ್ನಿಂಗ್ಸ್‌ನಲ್ಲಿ ಬರೋಬ್ಬರಿ 10 ಸಿಕ್ಸ್ ಸಿಡಿಸುವ ಮೂಲಕ ಬೌಂಡರಿಗಿಂತ ಸಿಕ್ಸ್ ಅನ್ನೇ ಹೆಚ್ಚು ಬಾರಿಸಿದರು.

# ಸಹ ಆಟಗಾರರನ್ನು ರಕ್ಷಿಸಲು ಸುಳ್ಳು ಹೇಳಿದ ಬ್ರೂಕ್

ನೈಟ್ ಕ್ಲಬ್ ಫೈಟ್



ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಸುದ್ದಿಯಲ್ಲಿದ್ದಾರೆ. ಹೀಗೆ ಸುದ್ದಿಯಾಗಲು ಮುಖ್ಯ ಕಾರಣ ಇತ್ತೀಚೆಗೆ ನೈಟ್ ಕ್ಲಬ್‌ನಲ್ಲಿ ಮಾಡಿದ ಫೈಟ್. ಅಂದರೆ ವೆಲ್ಲಿಂಗ್ಟನ್‌ನಲ್ಲಿನ ನೈಟ್ ಕ್ಲಬ್‌ವೊಂದಕ್ಕೆ ತೆರಳಿದ್ದ ಹ್ಯಾರಿ ಬ್ರೂಕ್ ಅಲ್ಲಿನ ಬೌನ್ಸರ್ ಜೊತೆ ಹೊಡೆದಾಡಿಕೊಂಡಿದ್ದರು. ಇದೀಗ ಈ ವಿಚಾರವಾಗಿ ಬ್ರೂಕ್ ಮನಬಿಚ್ಚಿ ಮಾತನಾಡಿದ್ದಾರೆ. ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಪ್ರಸ್ತುತ ಶ್ರೀಲಂಕಾದಲ್ಲಿದ್ದಾರೆ. ಲಂಕಾ ವಿರುದ್ಧದ ಟಿ20 ಸರಣಿಯಲ್ಲಿ ಇಂಗ್ಲೆಂಡ್ ತಂಡವನ್ನು ಮುನ್ನಡೆಸುತ್ತಿರುವ ಬ್ರೂಕ್ ಇದೀಗ ಮತ್ತೆ ಸುದ್ದಿಯಲ್ಲಿದ್ದಾರೆ. ಹೀಗೆ ಸುದ್ದಿಯಾಗಲು ಮುಖ್ಯ ಕಾರಣ ನೈಟ್ ಕ್ಲಬ್ ಫೈಟ್. ನ್ಯೂಝಿಲೆಂಡ್ ವಿರುದ್ಧದ ಸರಣಿ ವೇಳೆ ಬ್ರೂಕ್ ನೈಟ್ ಕ್ಲಬ್‌ನಲ್ಲಿ ಗಲಾಟೆ ಮಾಡಿಕೊಂಡಿದ್ದರು. ನ್ಯೂಝಿಲೆಂಡ್ ವಿರುದ್ಧದ ಸರಣಿ ವೇಳೆ ವೆಲ್ಲಿಂಗ್ಟನ್‌ನಲ್ಲಿನ ನೈಟ್ ಕ್ಲಬ್‌ಗೆ ತೆರಳಿದ್ದ ಹ್ಯಾರಿ ಬ್ರೂಕ್ ಅಲ್ಲಿನ ಬೌನ್ಸರ್ ಜೊತೆ ಹೊಡೆದಾಡಿಕೊಂಡಿದ್ದಾರೆ ಎಂಬ ಸುದ್ದಿಯೊಂದು ಹರಿದಾಡಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಇಂಗ್ಲೆಂಡ್



ಕ್ರಿಕೆಟ್ ಬೋರ್ಡ್ ಬ್ರೂಕ್ ಅವರನ್ನು ವಿಚಾರಣೆಗೆ ಒಳಪಡಿಸಿ 36 ಲಕ್ಷ ರೂ. ದಂಡ ವಿಧಿಸಿದ್ದರು. ಇದೀಗ ಈ ಕಹಿಘಟನೆಯ ಬಗ್ಗೆ ಹ್ಯಾರಿ ಬ್ರೂಕ್ ಮನಬಿಚ್ಚಿ ಮಾತನಾಡಿದ್ದಾರೆ.

ಬಿಬಿಸಿಗೆ ನೀಡಿದ ಸಂದರ್ಶನದಲ್ಲಿ ನೈಟ್ ಕ್ಲಬ್ ಫೈಟ್ ಬಗ್ಗೆ ಪ್ರಸ್ತಾಪಿಸಿರುವ ಬ್ರೂಕ್, ಅಂದು ತನ್ನೊಂದಿಗೆ ಇನ್ನಿಬ್ಬರಿದ್ದರು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಇದಾಗ್ಯೂ, ನಾನು ಅವರ ಹೆಸರನ್ನು ಬಹಿರಂಗಪಡಿಸಿಲ್ಲ ಎಂದು ತಿಳಿಸಿದ್ದಾರೆ.

ಬೌನ್ಸರ್ ಜೊತೆ ಜಗಳವಾದಾಗ, ನಾನು ಮದ್ಯಪಾನ ಮಾಡಿದ್ದೆ. ಈ ವೇಳೆ ತನ್ನೊಂದಿಗಿದ್ದ ತಂಡದ ಸದಸ್ಯರನ್ನು ರಕ್ಷಿಸಲು ಸುಳ್ಳು ಹೇಳಿದ್ದೆ. ಅಂದು ನಾನೊಬ್ಬನೇ ನೈಟ್ ಕ್ಲಬ್‌ಗೆ ತೆರಳಿದ್ದೆ ಎಂದು ತಿಳಿಸಿದ್ದೆ. ಈ ಹೇಳಿಕೆಯೊಂದಿಗೆ ನಾನು ಸಹ ಆಟಗಾರರನ್ನು ಈ ಪ್ರಕರಣದಿಂದ ಹೊರಗಿಟ್ಟಿದ್ದೆ ಎಂದು ಬ್ರೂಕ್ ತಿಳಿಸಿದ್ದಾರೆ. ದಿ ಟೆಲಿಗ್ರಾಫ್ ವರದಿ ಪ್ರಕಾರ, ನೈಟ್ ಕ್ಲಬ್ ಫೈಟ್ ವೇಳೆ ಹ್ಯಾರಿ ಬ್ರೂಕ್ ಜೊತೆ ಜೇಕಬ್ ಬೆಥೆಲ್ ಮತ್ತು ಜೋಶ್ ಟಂಗ್ ಜೊತೆಗಿದ್ದರು. ಇದೀಗ ಬ್ರೂಕ್ ಕೂಡ ಜಗಳವಾದ ತನ್ನೊಂದಿಗೆ ಇಂಗ್ಲೆಂಡ್ ತಂಡದ ಸದಸ್ಯರಿದ್ದರು ಎನ್ನುವ ಮೂಲಕ ಈ ವರದಿಯನ್ನು ಪುಷ್ಟೀಕರಿಸಿದ್ದಾರೆ. ಅಲ್ಲದೆ ಅವರನ್ನು ರಕ್ಷಿಸುವ ಸಲುವಾಗಿ ನಾನು ಹೇಳಿರುವುದಾಗಿ ಬ್ರೂಕ್ ಒಪ್ಪಿಕೊಂಡಿದ್ದಾರೆ. ಇನ್ನು ವೆಲ್ಲಿಂಗ್ಟನ್‌ನಲ್ಲಿ ನಡೆದ ಕೃತ್ಯಗಳಿಗೆ ನಾನೇ ಜವಾಬ್ದಾರ. ಆ ಸಂಜೆ ಇತರರು ಹಾಜರಿದ್ದರು ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ಹಿಂದಿನ ಹೇಳಿಕೆಗಳಿಗೆ ನಾನು ವಿಷಾದಿಸುತ್ತೇನೆ, ಮತ್ತು ನನ್ನ ಸ್ವಂತ ನಿರ್ಧಾರಗಳ ಪರಿಣಾಮವಾಗಿ ಉದ್ಭವಿಸಿದ ಪರಿಸ್ಥಿತಿಗೆ ನನ್ನ ತಂಡದ ಸದಸ್ಯರು ಸಿಲುಕದಂತೆ ರಕ್ಷಿಸುವುದು ನನ್ನ ಉದ್ದೇಶವಾಗಿತ್ತು. ಈ ವಿಷಯಗಳಿಗೆ ನಾನು ಕ್ಷಮೆಯಾಚಿಸಿದ್ದೇನೆ.

ಅಲ್ಲದೆ ಈ ಘಟನೆಯನ್ನು ವಿಚಾರವನ್ನು ಇಲ್ಲಿಗೆ ನಿಲ್ಲಿಸಲು ಬಯಸುತ್ತೇನೆ. ಇದು ನನ್ನ ವೃತ್ತಿಜೀವನದಲ್ಲಿ ಅತ್ಯಂತ ಸವಾಲಿನ ಅವಧಿ. ಇದರಿಂದ ತುಂಬಾ ಪಾಠ ಕಲಿತಿದ್ದೇನೆ. ಇನ್ನುಂದೆ ಇಂತಹ ಘಟನೆಗಳನ್ನು ನಡೆಯದಂತೆ ಎಚ್ಚರಿಕೆ ವಹಿಸಿಕೊಳ್ಳುವುದಾಗಿ ಹ್ಯಾರಿ ಬ್ರೂಕ್ ಇದೇ ವೇಳೆ ಹೇಳಿದ್ದಾರೆ.



ಜೆರ್ಸಿ ಲಾಂಚ್ ಕಾರ್ಯಕ್ರಮ ರದ್ದು

# ಹೊಸ ನಾಟಕ ಶುರು ಮಾಡಿದ ಪಾಕಿಸ್ತಾನ

2026ರ ಟಿ20 ವಿಶ್ವಕಪ್‌ಗೆ ಪಾಕಿಸ್ತಾನದ ಭಾಗವಹಿಸುವಿಕೆ ವಿವಾದದ ಸುಳಿಯಲ್ಲಿದೆ. ಬಾಂಗ್ಲಾದೇಶವನ್ನು ಹೊರಹಾಕಿದ್ದಕ್ಕೆ ಪಾಕ್ ಕ್ರಿಕೆಟ್ ಮಂಡಳಿ ಪ್ರತಿಭಟಿಸುತ್ತಿದೆ. ಜರ್ಸಿ ಬಿಡುಗಡೆ ಕಾರ್ಯಕ್ರಮ ರದ್ದು, ಭಾರತ ವಿರುದ್ಧದ ಪಂದ್ಯ ಬಹಿಷ್ಕರಿಸುವ ಬೆದರಿಕೆಗಳು ಪರಿಸ್ಥಿತಿಯನ್ನು ಗಂಭೀರಗೊಳಿಸಿವೆ. ಸರ್ಕಾರಿ ಅನುಮತಿಗಾಗಿ ಕಾಯುತ್ತಿರುವ ಪಾಕಿಸ್ತಾನಕ್ಕೆ ಐಸಿಸಿ ದಂಡ ಹಾಗೂ ನಿಷೇಧದ ಭೀತಿ ಎದುರಾಗಿದೆ.

2026 ರ ಟಿ20 ವಿಶ್ವಕಪ್ ಆರಂಭವಾಗಲು ಕೇವಲ ಒಂದು ವಾರ ಬಾಕಿ ಉಳಿದಿದೆ. ಆದರೆ ಹುಟ್ಟಿಕೊಂಡಿರುವ ವಿವಾದಗಳಿಗೆ ತೆರೆ ಬಿದ್ದಿಲ್ಲ. ಬಾಂಗ್ಲಾದೇಶ ತಂಡವನ್ನು ವಿಶ್ವಕಪ್‌ನಿಂದ ಹೊರಹಾಕಿರುವುದಕ್ಕೆ ಕೆರಳಿರುವ ಪಾಕಿಸ್ತಾನ ಕ್ರಿಕೆಟ್ ಮಂಡಳಿ ದಿನಕ್ಕೊಂದು ನಾಟಕ ಶುರು ಮಾಡಿದೆ. ಈ ಮೊದಲು ಟಿ20 ವಿಶ್ವಕಪ್‌ಗೆ ತಂಡವನ್ನು ಕಳುಹಿಸುವುದು ಇನ್ನು ನಿರ್ಧಾರವಾಗಿಲ್ಲ ಎಂದಿದ್ದ ಪಾಕ್ ಮಂಡಳಿ, ಆ ಬಳಿಕ ಈ ಟೂರ್ನಿಗೆ ತನ್ನ ತಂಡವನ್ನು ಪ್ರಕಟಿಸಿತ್ತು. ತಂಡವನ್ನು ಪ್ರಕಟಿಸಿದ ಬಳಿಕ ಪಾಕ್ ತಂಡ ಟಿ20 ವಿಶ್ವಕಪ್‌ನಲ್ಲಿ ಆಡುವುದು ಖಚಿತ ಎಂದಾಗಿತ್ತು. ಆದರೀಗ ಹೊಸ ವರಸೆ ಶುರು ಮಾಡಿರುವ ಪಾಕ್ ಮಂಡಳಿ, ಶನಿವಾರ ನಡೆಯಬೇಕಿದ್ದ ತಂಡದ ಜೆರ್ಸಿ ಬಿಡುಗಡೆ ಕಾರ್ಯಕ್ರಮವನ್ನು ಇದ್ದಕ್ಕಿದ್ದಂತೆ ರದ್ದುಗೊಳಿಸಿದೆ.

ವಾಸ್ತವವಾಗಿ ಟಿ20 ವಿಶ್ವಕಪ್‌ಗೂ ಮುನ್ನ ಪಾಕಿಸ್ತಾನ ತಂಡ ಆಸ್ಟ್ರೇಲಿಯಾ ವಿರುದ್ಧ ಟಿ20 ಸರಣಿಯನ್ನು ಆಡುತ್ತಿದೆ. ಈ ಸರಣಿಯ ಎರಡನೇ ಟಿ20 ಪಂದ್ಯದ ಟಾಸ್ ನಂತರ ಜೆರ್ಸಿಯನ್ನು ಅನಾವರಣಗೊಳಿಸಬೇಕಿತ್ತು. ಆದಾಗ್ಯೂ, ಸರ್ಕಾರದ ವಿದೇಶಾಂಗ ಸಚಿವಾಲಯದ ಅನುಮತಿ ಸಿಕ್ಕಿಲ್ಲದ ಕಾರಣ ಈ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.

ಪಾಕಿಸ್ತಾನ ನಿಜವಾಗಿಯೂ ವಿಶ್ವಕಪ್ ಆಡುತ್ತದೆಯೇ ಎಂಬ ಸಸ್ಪೆನ್ಸ್ ಉತ್ತುಂಗಕ್ಕೇರಿದೆ.

ಭಾರತ ಮತ್ತು ಶ್ರೀಲಂಕಾ 2026 ರ ಟಿ20 ವಿಶ್ವಕಪ್ ಅನ್ನು ಆಯೋಜಿಸಲು ಸಿದ್ಧತೆ ಇದ್ದರೂ, ಪಾಕಿಸ್ತಾನವು ಪ್ರತಿ ಹಂತದಲ್ಲೂ ಹೊಸ ಹೊಸ ಕ್ಯಾತೆ ತೆಗೆಯುತ್ತಿದೆ. ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ಈಗಾಗಲೇ ಪಾಕಿಸ್ತಾನ ಪ್ರಧಾನಿ ಅವರನ್ನು ಭೇಟಿ ಮಾಡಿ ಈ ವಿಷಯದ ಬಗ್ಗೆ ಚರ್ಚಿಸಿದ್ದಾರೆ.



# ಯಂಗ್ ಇಂಡಿಯಾಗೆ ಕ್ರಿಕೆಟ್ ದೇವರ ಪಾಠ

ಅಂಡರ್ 19 ವಿಶ್ವಕಪ್‌ನಲ್ಲಿ ಭಾರತ-ಪಾಕಿಸ್ತಾನ ಹೈವೋಲ್ಟೇಜ್ ಪಂದ್ಯಕ್ಕೆ ವೇದಿಕೆ ಸಜ್ಜಾಗಿದೆ. ಸೆಮಿಫೈನಲ್ ಪ್ರವೇಶಕ್ಕೆ ನಿರ್ಣಾಯಕವಾಗಿರುವ ಈ ಪಂದ್ಯಕ್ಕೂ ಮುನ್ನ ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಭಾರತದ ಯುವ ಆಟಗಾರರೊಂದಿಗೆ ವಿಡಿಯೋ ಸಂವಾದ ನಡೆಸಿದ್ದಾರೆ. ಏಷ್ಯಾಕಪ್ ಸೋಲಿನ ಸೇಡು ತೀರಿಸಿಕೊಳ್ಳುವ ಇರಾದೆಯಲ್ಲಿರುವ ಟೀಂ ಇಂಡಿಯಾಗೆ ಸಚಿನ್ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಆತ್ಮವಿಶ್ವಾಸ ತುಂಬಿದ್ದಾರೆ. ಫೆಬ್ರವರಿ 1ರಂದು ನಡೆಯುವ ಈ ಕದನದಲ್ಲಿ ಭಾರತ ಗೆದ್ದರೆ ನೇರವಾಗಿ ಸೆಮಿಫೈನಲ್ ಪ್ರವೇಶಿಸಲಿದೆ.

ಅಂಡರ್ 19 ವಿಶ್ವಕಪ್‌ನಲ್ಲಿ ಫೆಬ್ರವರಿ 1 ರಂದು ಭಾರತ ಹಾಗೂ ಪಾಕಿಸ್ತಾನದ ಯುವ ತಂಡಗಳ ನಡುವೆ ಹೈವೋಲ್ಟೇಜ್ ಕದನ ನಡೆಯಲಿದೆ. ಈ ಹಿಂದೆ ನಡೆದಿದ್ದ ಏಷ್ಯಾಕಪ್ ಫೈನಲ್‌ನಲ್ಲಿ ಭಾರತಕ್ಕೆ ಸೋಲಿನ ಆಘಾತ ನೀಡಿದ್ದ ಪಾಕ್ ತಂಡದ ವಿರುದ್ಧ ಸೇಡು ತೀರಿಸಿಕೊಳ್ಳುವ ಇರಾದೆಯಲ್ಲಿ ಟೀಂ ಇಂಡಿಯಾವಿದೆ. ಅದಕ್ಕೆ ಪೂರಕವೆಂಬಂತೆ ಯುವ ಆಟಗಾರರಿಗೆ ಕ್ರಿಕೆಟ್ ದೇವರು ಸಚಿನ್ ತೆಂಡೂಲ್ಕರ್ ಪಂದ್ಯಕ್ಕೆ ಒಂದು ದಿನ ಮೊದಲು ವಿಡಿಯೋ ಕರೆಯ ಮುಖಾಂತರ ಸವಾಂದ ನಡೆಸಿದ್ದಾರೆ. ಈ ವೇಳೆ ತಮ್ಮ ಅನುಭವಗಳನ್ನು ಧಾರೆ ಎರೆಯುವ ಮೂಲಕ ಯಂಗ್ ಇಂಡಿಯಾದ ಆತ್ಮಸ್ಥೈರ್ಯವನ್ನು ಹೆಚ್ಚಿಸುವ ಕೆಲಸ ಮಾಡಿದ್ದಾರೆ. ಅಂಡರ್-19 ವಿಶ್ವಕಪ್ ಸೂಪರ್-6 ರ ಭಾಗವಾಗಿ ಭಾರತ ಮತ್ತು ಪಾಕಿಸ್ತಾನ ಭಾನುವಾರ ಪರಸ್ಪರ ಮುಖಾಮುಖಿಯಾಗಲಿವೆ. ಗ್ರೂಪ್-1 ರಿಂದ ಆಸ್ಟ್ರೇಲಿಯಾ ಮತ್ತು ಅಫ್ಘಾನಿಸ್ತಾನ ಮತ್ತು ಗ್ರೂಪ್-2 ರಿಂದ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ತಲುಪಿದ್ದು, ಉಳಿದ ಸ್ಥಾನಕ್ಕಾಗಿ ಭಾರತ ಮತ್ತು ಪಾಕಿಸ್ತಾನ ಪೈಪೋಟಿಯಲ್ಲಿವೆ. ಈ ಹೆಚ್ಚಿನ ಒತ್ತಡದ ಪಂದ್ಯಕ್ಕೂ ಮುನ್ನ, ಬಿಸಿಸಿಐ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿದ್ದು, ಲೆಜೆಂಡರಿ ಕ್ರಿಕೆಟಿಗ ಸಚಿನ್ ತೆಂಡೂಲ್ಕರ್ ನಮ್ಮ ಯುವ ಆಟಗಾರರೊಂದಿಗೆ ವೀಡಿಯೊ ಕರೆಯ ಮೂಲಕ ಸಂವಾದ ನಡೆಸಿದರು. ಬ್ಯಾಟಿಂಗ್ ತಂತ್ರ ಮಾತ್ರವಲ್ಲದೆ, ಮಾನಸಿಕವಾಗಿ ಬಲಶಾಲಿ, ಶಿಸ್ತು ಮತ್ತು ನಮ್ರತೆ ಯಶಸ್ಸಿಗೆ ಎಷ್ಟು ಮುಖ್ಯ ಎಂಬುದರ ಕುರಿತು ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966